ಪ್ರಚೋದನೆ

ಲಂಕೇಶ್

27 ಜುಲೈ 2016 ಪುಟ 20 ರೂ. 15/-




ಪಾಬ್ಲೊ ನೆರೂಡಾ ಜನುಮ ದಿನ



ಡಿವೈಎಸ್‌ಪಿ ಗಣಪತಿ
ಎಂಥಾ ವ್ಯಕ್ತಿತ್ವ? ಏನೆಲ್ಲಾ ಘನಕಾರ್ಯ?




ಹಾವೇರಿ ವಸತಿ ಸಚಿವನ ಅರಣ್ಯ ಸ್ವಾಹಾ!




ಚಿತ್ರದುರ್ಗ ಖೋಟಾ ನೋಟಿನ ಮಾಚಂಗೋ ಗ್ಯಾಂಗ್

ವಿಕೃತ ವಿಮಾ ಯೋಜನೆಯೂ ರೈತರಿಗೆ ಮೋದಿ ಮೋಸವೂ!!



ವಿದ್ಯಾರ್ಥಿ ಯುವಜನರು ಸಾಮಾಜಿಕವಾಗಿ ಕ್ರಿಯಾಶೀಲರಾಗುತ್ತಿಲ್ಲವೇ



ಡಾ.ವಾಸು ಎಚ್.ವಿ.

ಈ ರೀತಿಯ ಒಂದು ಕೊರಗು ನಮ್ಮ ಹಲವು ಹಿರಿಯರನ್ನು ಕಾಡುತ್ತಿರುತ್ತದೆ.. ದೇಶದ ಒಟ್ಟು ಜನಸಂಖ್ಯೆಯಲ್ಲಿ ಯುವಜನರು ಭಾರೀ ಪ್ರಮಾಣದಲ್ಲಿದ್ದಾರೆ. 2011ರ ಗಣತಿ ಪ್ರಕಾರ 0-35 ವರ್ಷದೊಳಗಿನವರ ಪ್ರಮಾಣ ಶೇ.65 ಅಂತೆ. ಒಂದು ವೇಳೆ ಇಷ್ಟಿಲ್ಲದಿದ್ದರೂ, ಯುವಜನರು ಎಲ್ಲ ರೀತಿಯಲ್ಲಿ ಬಹಳ ಮುಖ್ಯವಾದ ಜನವಿಭಾಗವೇ ಆಗಿದ್ದಾರೆ. ಏಕೆಂದರೆ, 'ಭವಿಷ್ಯದ ಭಾರತ ಅವರದ್ದಾಗಿದೆ'. ಈ ಮಾತನ್ನು ಹೇಳೀಹೇಳಿ ಸವಕಲಾಗಿಬಿಟ್ಟದೆ. ರೈತರೇ ದೇಶದ ಬೆನ್ನೆಲುಬು, ಶಿಕ್ಷಣವೆಂದರೆ ರಾಷ್ಟ್ರ ನಿರ್ಮಾಣದ ಕೆಲಸ ಥರ ಇದೂ ಒಂದು ನುಡಿಗಟ್ಟಾಗಿ ವ್ಯಾಪಕವಾಗಿ ಬಳಕೆಯಲ್ಲಿರುವ, ಆದರೆ ಸಾಮಾನ್ಯವಾಗಿ ಅದರ ಅರ್ಥವನ್ನು ಕಳೆದುಹಾಕಲೆಂದೇ ಬಳಸಲ್ಪಡುವ ಮಾತು. ಉದಾಹರಣೆಗೆ ಶಿಕ್ಷಣದ ಕುರಿತ ಮಾತನ್ನೇ ತೆಗೆದುಕೊಳ್ಳಿ. ಪ್ರತೀವರ್ಷ ಶಿಕ್ಷಕರ ದಿನಾಚರಣೆಯ ದಿನದಂದು, ಶಿಕ್ಷಕರನ್ನು ಎದುರಿಗಿರಿಸಿಕೊಂಡು ಪ್ರತೀ ತಾಲೂಕಿನಲ್ಲೂ ಅತಿಥಿ ಮಹೋದಯರು 'ನೀವು ಸಾಮಾನ್ಯರಲ್ಲ, ಈ ರಾಷ್ಟ್ರ ನಿರ್ಮಾಣ ಮಾಡುತ್ತಿರುವವರು' ಎಂದು ಹೇಳಿಯೇ ಹೇಳುತ್ತಾರೆ. ಅದನ್ನು ಸಾಕಷ್ಟು ಒತ್ತಿ ಹೇಳುವ ಶಿಕ್ಷಣ ಮಂತ್ರಿಗಳು, ಹಣಕಾಸು ಮಂತ್ರಿಗಳು ಶಿಕ್ಷಣ ಕ್ಷೇತ್ರದ ಅನುದಾನವನ್ನು ಆ ವರ್ಷವೂ ಕಡಿಮೆ ಮಾಡಿರುತ್ತಾರೆ! ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಶಿಕ್ಷಣ ಕ್ಷೇತ್ರವನ್ನು ಹಾಳುಗೆಡವುವ ಹೊಸ ಯೋಜನೆಯನ್ನು ಆ ವರ್ಷವೂ ರೂಪಿಸಿರುತ್ತಾರೆ. ಯುವಜನರ ಕುರಿತಂತೆ ಆಡುವ ಮಾತುಗಳೂ ಹೀಗೆಯೇ ಕ್ಲೀಷೆಯಾಗಿವೆ.

ಅದರರ್ಥ ಯುವಜನತೆಗೆ ಮಹತ್ವವಿಲ್ಲ ಎಂದಲ್ಲ, ಆದರೆ, ಈ ಮಹತ್ವವನ್ನು ಆ ಯುವಜನರೇ ಅರ್ಥಮಾಡಿಕೊಂಡಿಲ್ಲವೆಂತಲೂ, ಅವರ ತಮ್ಮ ಅಮೂಲ್ಯವಾದ ಯೌವ್ವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆಂತಲೂ ಹಿರಿಯರಿಗೆ ಅಸಮಾಧಾನ. ಇದು ವಾಸ್ತವವೇ? ಇದರ ಸತ್ಯಾಸತ್ಯತೆಗಳಿಗೆ ಹೋಗುವ ಮುನ್ನ ಇಂದಿನ ಯುವಜನತೆಯನ್ನು ರೂಪಿಸುತ್ತಿರುವ ಶಿಕ್ಷಣ ವ್ಯವಸ್ಥೆಯ ಕುರಿತು ಪರಿಶೀಲಿಸೋಣ. 'ರಾಷ್ಟ್ರ ನಿರ್ಮಾಣದ ಕ್ಷೇತ್ರ'ವಾದ ಶಿಕ್ಷಣ ಕ್ಷೇತ್ರವು ಕೇವಲ ಮಾರುಕಟ್ಟೆಗೆ ಸರಕುಗಳನ್ನು ಉತ್ಪಾದಿಸುತ್ತಿದೆ. ಈ ರೀತಿಯ ಉತ್ಪಾದನೆಗೆ ಅದು ನಿರ್ಮಿಸಿಕೊಂಡಿರುವ ಫ್ಯಾಕ್ಟರಿಗಳೂ ವಿಚಿತ್ರವಾಗಿವೆ. ರಾಷ್ಟ್ರ ನಿರ್ಮಾಣ ಮಾಡಬೇಕೆಂದರೆ, ಹೊಸ ಮೌಲ್ಯ ನಿರ್ಮಾಣ ಆಗಬೇಕು. ಶಿಕ್ಷಣದ ಮೂಲಭೂತ ಉದ್ದೇಶಕ್ಕೆ ಪೂರಕವಾಗಿ ಅದರ ರೀತಿನೀತಿ ಇರಬೇಕು. ಏನು ಆ ಉದ್ದೇಶ? 'ಶಿಕ್ಷಣದ ಮೂಲಭೂತ ಉದ್ದೇಶ ಇನ್ನೂ ಮಾನವೀಯವಾದ, ಪ್ರಜಾತಾಂತ್ರಿಕವಾದ ಸಮಾಜ ನಿರ್ಮಾಣ. ತನ್ನ ಸಹಜೀವಿಗಳನ್ನು ಸಮಾನ ನೆಲೆಗಟ್ಟಿನಲ್ಲಿ ನೋಡುವ, ಬಹುತ್ವವನ್ನು ಗೌರವಿಸುವ, ಜ್ಞಾನ-ಸೃಜನಶೀಲತೆ ಮತ್ತು ನೆಮ್ಮದಿಯನ್ನು ಹೆಚ್ಚಿಸುತ್ತಾ ಹೋಗುವ ಸಮಾಜ ನಿರ್ಮಾಣ'. ಈ ಉದ್ದೇಶವನ್ನು ಈಡೇರಿಸಬೇಕೆಂದರೆ, ಸರ್ವರಿಗೂ ಸಮಾನವಾದ ಮತ್ತು ಮೇಲೆ ಹೇಳಲಾದ ಅಂಶಗಳನ್ನು ಉದ್ದೀಪನಗೊಳಿಸುವ ರೀತಿಯ ಯಂತ್ರಾಂಗವನ್ನು ಅದು ಹೊಂದಿರಬೇಕಾಗುತ್ತದೆ. ಆದರೆ, ನಮ್ಮ ಶಿಕ್ಷಣ ಕ್ಷೇತ್ರವು ಅದಕ್ಕೆ ವಿರುದ್ಧವಾದ ರೀತಿಯಲ್ಲಿ ರಚಿತಗೊಂಡಿದೆ.

ಸಮಾನ ನೆಲೆಗಟ್ಟಿನಲ್ಲಿ ನೋಡುವುದಕ್ಕಿಂತ, ಜಾತಿ ಮತ್ತು ವರ್ಗ ವ್ಯವಸ್ಥೆಯೊಳಗಿನ ಅಸಮಾನತೆಯ ಮೌಲ್ಯಗಳನ್ನು ಪುನರುತ್ಪತ್ತಿಗೊಳಿಸುವ ರೀತಿಯಲ್ಲಿ ಶಿಕ್ಷಣ ವ್ಯವಸ್ಥೆಯು ದಿನೇದಿನೇ ಬಲಗೊಳ್ಳುತ್ತಿದೆ. ದೇಶದ ಜಾತಿ ವ್ಯವಸ್ಥೆಯು ಹೇಗೋ ಹಾಗೆ, ಶಿಕ್ಷಣ ಕ್ಷೇತ್ರವೂ ಶ್ರೇಣೀಕೃತವಾಗಿದೆ. ಪೋಷಕರ ಜೇಬಿನಲ್ಲಿರುವ ಹಣದ ಪ್ರಮಾಣಕ್ಕೆ ತಕ್ಕ ಶಾಲೆಗೆ ಮಕ್ಕಳು ಸೇರಿಸಲ್ಪಡುತ್ತಾರೆ. ಇಂತಹ ಶಾಲಾ ವ್ಯವಸ್ಥೆಯಿಂದ ಹೊರಬರುವ ಮಕ್ಕಳು ಎಲ್ಲಾ ಸಹಜೀವಿಗಳನ್ನೂ ಸಮಾನವಾಗಿ ನೋಡಲು ಹೇಗೆ ಸಾಧ್ಯ? ಹೋಗಲಿ, ಶಿಕ್ಷಣ ಕ್ಷೇತ್ರವು ಮಾರುಕಟ್ಟೆಗೆ ಸರಕುಗಳನ್ನು ಉತ್ಪಾದಿಸುವ ರೀತಿಯಲ್ಲಿ ಉತ್ಪಾದನೆಯಲ್ಲಿ ತೊಡಗಿದೆ ಎಂಬ ಮಾತಾದರೂ ಎಷ್ಟು ಸತ್ಯ? ಮಾರುಕಟ್ಟೆಗ ಯಾವುದೇ ಸರಕನ್ನು ಉತ್ಪಾದಿಸುವ ಉದ್ದಿಮೆದಾರರು, ಆ ಸರಕು ಬಿಕರಿಯಾಗುತ್ತದೆಯೇ, ಅದಕ್ಕೆ ಎಷ್ಟು ಬೇಡಿಕೆಯಿದೆ ಎಂಬುದನ್ನು ನೋಡಿಯೇ ಉತ್ಪಾದನೆ ಮಾಡುತ್ತಾರೆ. ಆದರೆ, ನಮ್ಮ ಶಿಕ್ಷಣ ಕ್ಷೇತ್ರದಿಂದ ಹೊರಗೆ ಬಂದು ಬೀಳುತ್ತಿರುವ ಸರಕುಗಳಿಗೆ ಬೇಡಿಕೆಯೇ ಇಲ್ಲ, ಏಕೆಂದರೆ, ಅವರು ಮಾರುಕಟ್ಟೆಯ ಅಗತ್ಯಕ್ಕನುಸಾರವಾಗಿ ಉತ್ಪಾದನೆಯಾದವರಲ್ಲ, ಬದಲಿಗೆ ಉತ್ಪಾದಕರ ಲಾಭಕ್ಕೆ ಅನುಸಾರವಾಗಿ ಉತ್ಪಾದನೆಯಾದವರು.

ಉದಾಹರಣೆಗೆ, ಇಂದು ಕರ್ನಾಟಕದಲ್ಲಿ ಸುಮಾರು 1,800 ಡಿ.ಎಡ್ ಕಾಲೇಜುಗಳಿವೆ. ಇವುಗಳಿಂದ ಹೊರಬಂದು ಉದ್ಯೋಗಾಕಾಂಕ್ಷಿಗಳಾಗಿರುವವರ ಸಂಖ್ಯೆ 10 ಲಕ್ಷಕ್ಕೂ ಹೆಚ್ಚಿದೆ. ಇಂದಿಗೂ ಈ ಕ್ಷೇತ್ರದಲ್ಲಿ ದೊಡ್ಡ ಉದ್ಯೋಗದಾತನಾಗಿರುವುದು ಸರ್ಕಾರವೇ. ಅದು 2009ರಲ್ಲಿ 3000 ಶಿಕ್ಷಕರನ್ನು ಮತ್ತು ಕಳೆದ ಸಾಲಿನಲ್ಲಿ 7000 ಶಿಕ್ಷಕರನ್ನು ನೇಮಕ ಮಾಡಿಕೊಂಡಿದೆ. ಅಂದರೆ, ಖಾಸಗಿ ಕ್ಷೇತ್ರವನ್ನು ಸೇರಿಸಿದರೂ ಲಭ್ಯ ಸರಕುಗಳಲ್ಲಿ ಶೇ.2ರಷ್ಟು ಮಾತ್ರ ಬಿಕರಿಯಾಗುತ್ತಿವೆ. ಈಗ್ಗೆ 10 ವರ್ಷಗಳಿಗೂ ಹಿಂದೆ 750 ಎರಡನೆಯ ದರ್ಜೆ ಸಹಾಯಕ ಹುದ್ದೆಗಳಿಗೆ ಸುಮಾರು 6 ಲಕ್ಷ ಜನರು ಪರೀಕ್ಷೆ ಬರೆದಿದ್ದರು! ಅಂದರೆ, ಇಂದು ಶಿಕ್ಷಣ ಕ್ಷೇತ್ರವು ಉತ್ಪಾದನೆಯಲ್ಲಿ ತೊಡಗಿರುವುದು, ಅದರಲ್ಲಿ ಬಂಡವಾಳ ಹಾಕಿರುವವರ ಲಾಭಕ್ಕಾಗಿಯೇ ಹೊರತು, ಸರಕುಗಳಾಗಿ ಹೊರಬಂದ ಯುವಜನರಿಗೆ ಮಾರುಕಟ್ಟೆಯಿಲ್ಲವಾಗಿದೆ. ನಮ್ಮ ವಿದ್ಯಾರ್ಥಿ ಯುವಜನರು ಇಂತಹ ಸ್ಥಿತಿಯಿಂದ ಯಾವ ಬಗೆಯ



ಒತ್ತಡಗಳನ್ನು ಎದುರಿಸುತ್ತಿರಬಹುದು?

ಇಂತಹ ವಿದ್ಯಾರ್ಥಿ-ಯುವಜನರು ಸಾಮಾಜಿಕವಾಗಿ ಕ್ರಿಯಾಶೀಲರಾಗಬೇಕು ಮತ್ತು 70-80ರ ದಶಕದಲ್ಲಿ ಅವರು ಬೀದಿಗಿಳಿದಂತೆ ಇಂದೂ ಬೀದಿಗಿಳಿಯಬೇಕು ಎಂದು ನಮ್ಮಂಥವರು ಬಯಸುತ್ತೇವೆ. ಅದರಲ್ಲೂ 70-80ರ ದಶಕದಲ್ಲಿ ಚಳವಳಿಗೆ ಧುಮುಕಿದ್ದ ಹಿರಿಯರು ಇನ್ನೂ ಹೆಚ್ಚು ಬಯಸುತ್ತಾರೆ. ಅಂದಿನ ನಾಸ್ಟಾಲ್ಜಿಯಾದಲ್ಲಿ ಮುಳುಗಿರುವ ಅವರು, ಆಗ ಹೇಗೆ ಒಂದು ಭಾಷಣದಿಂದ ಪ್ರೇರಿತರಾಗಿ ನೂರಾರು ವಿದ್ಯಾರ್ಥಿಗಳು ಹೋರಾಟದ ರಣರಂಗಕ್ಕೆ ಧುಮುಕಿದೆವು ಎಂಬುದನ್ನೆಲ್ಲಾ ಬಣ್ಣಿಸುತ್ತಾರೆ. ಇದರ ಜೊತೆಗೆ ಗುರುಹಿರಿಯರಿಗೆ ತಮ್ಮ ಕಾಲದಲ್ಲಿ ತಾವು ಕೊಡುತ್ತಿದ್ದಷ್ಟು ಗೌರವವನ್ನು ಈ ಹೊಸ ತಲೆಮಾರು ಕೊಡುತ್ತಿಲ್ಲ ಎಂಬುದು ಅವರ ಅಳಲಾಗಿದೆ. ತಮ್ಮ ಕಾಲಕ್ಕಿಂತಲೂ ಇಂದು ಸಮಸ್ಯೆಗಳು ತೀವ್ರವಾಗಿವೆ, ಆದರೂ ಹೊಸ ತಲೆಮಾರು ಚಳವಳಿಯ ಕಡೆಗೆ ತಲೆ ಹಾಕುತ್ತಿಲ್ಲವೆಂಬುದು ಅವರ ಅಳಲಾಗಿದೆ.

ಹಾಗಾಗಿಯೇ ಏನೋ, ಎದುರಿಗೆ ಕಾಣುವ ಪ್ರತಿ ವಿದ್ಯಾರ್ಥಿಗೆ ಅಥವಾ ಯುವಕ ಯುವತಿಗೆ ಅವರು ಇತಿಹಾಸವನ್ನು ವಿವರಿಸುತ್ತಾರೆ. ವರ್ತಮಾನ ಹಾಗಿರದಿದ್ದುದಕ್ಕೆ ತಮ್ಮಲ್ಲಿ ಉಂಟಾಗುತ್ತಿರುವ ಆತಂಕವನ್ನು ತೋಡಿಕೊಳ್ಳುತ್ತಾರೆ. ಅಷ್ಟೇ ಅಲ್ಲದೇ, ನೀವು ಯಾಕೆ ಹಾಗಿಲ್ಲ ಎಂದು ಆಕ್ಷೇಪಿಸುತ್ತಾರೆ. ಹೇಗಿರಬೇಕು ಎಂಬ ಬಗ್ಗೆ ಸಾಕಷ್ಟು ಬೋಧನೆ, ಉಪದೇಶಗಳನ್ನು ಮಾಡುತ್ತಾರೆ. ಇಂದು ಶಾಲಾಕಾಲೇಜುಗಳು ಸೇರಿದಂತೆ, ಸಾರ್ವಜನಿಕ ರಂಗದಲ್ಲಿ ಇಂತಹದ್ದನ್ನು ಬೇಕಾದಷ್ಟು ನೋಡಬಹುದು. 'ನಮ್ಮ ಕಾಲದಲ್ಲಿ ಇಡ್ಲಿ ಬೆಲೆ 2 ಪೈಸೆ ಜಾಸ್ತಿ ಆಯಿತು ಎಂದು ನಾವೆಲ್ಲರೂ ಭಾರೀ ದೊಡ್ಡ ಹೋರಾಟವನ್ನೇ ಮಾಡಿದ್ದೆವು' ಎಂದು ಪದೇಪದೇ ಹೇಳುತ್ತಿರುತ್ತಾರೆ. ಈಗಿನ ಕಾಲದ ಹುಡುಗರು ಸದಾ ಮೊಬೈಲ್‌ನಲ್ಲೇ ಮುಳುಗಿದ್ದಾರೆ, ಅವರಿಗೆ ದೇಶ ಹತ್ತಿ ಉರಿದರೂ ಏನೂ ಆಗಬೇಕಿಲ್ಲ ಇತ್ಯಾದಿ ಇತ್ಯಾದಿ ಗೊಣಗಾಟ ಸರ್ವೇಸಾಮಾನ್ಯವಾಗಿದೆ. ಇಂದು ಜಾಗತೀಕರಣದ ಕಾರಣಕ್ಕೆ ರೈತಾಪಿಯು ಆತ್ಮಹತ್ಯೆಯ ದಾರಿ ಹಿಡಿದಿದೆ. ಹಿಂದಿಗಿಂತಲೂ ಸರ್ಕಾರದ ಜನವಿರೋಧಿ ನೀತಿಗಳು ಢಾಳಾಗಿ ಎದ್ದು ಕಾಣುತ್ತಿದೆ. ಆದರೂ ಅದಕ್ಕೆ ಯುವಜನರ ಸ್ಪಂದನೆ ಇಲ್ಲ; ಸವರ್ಣೀಯ ಜಾತಿಗಳ ಹೊಸ ತಲೆಮಾರಿನ ಯುವಜನರು ಜಾತಿಗಳೊಂದಿಗೆ ಗುರುತಿಸಿಕೊಳ್ಳಲು ಹೆಚ್ಚು ಇಷ್ಟ ಪಡುತ್ತಿರುವುದಂತೂ ಗಾಬರಿ ಹುಟ್ಟಿಸುವಂತಿದೆ. ಕೆಲವು ಶೋಷಿತ ಸಮುದಾಯಗಳ ಯುವಕರೂ ಒಳಜಾತಿಗಳ ಚಿಪ್ಪೊಳಗೆ ಸೇರಿಕೊಳ್ಳುತ್ತಿದ್ದಾರೆ. ಇತ್ಯಾದಿ ಇತ್ಯಾದಿ ಆಕ್ಷೇಪಗಳು ಯುವಜನರ ಮೇಲಿದೆ.

ಈ ಆರೋಪಗಳನ್ನು ಮಾಡುತ್ತಾ ಬೋಧನೆ ಮಾಡುತ್ತಿರುವಾಗ ನಾವು ಮರೆಯುವ ಸಂಗತಿಯೊಂದಿದೆ. ಇಂದು ಯಾರನ್ನೆಲ್ಲಾ ಯುವಜನರ ಪಟ್ಟಿಗೆ ಸೇರಿಸಬಹುದೋ (35 ವರ್ಷದೊಳಗಿನವರು) ಅವರೆಲ್ಲಾ ಜಗತ್ತನ್ನು ಅರಿಯುವ ವಯಸ್ಸು ತಲುಪುವ ಹೊತ್ತಿಗೆ ಈ ದೇಶಕ್ಕೆ ಜಾಗತೀಕರಣ ನೀತಿಗಳು ಅಮರಿಕೊಳ್ಳುತ್ತಿದ್ದವು. ಇಂದು ಕಾಲೇಜಿನಲ್ಲಿರುವ ಎಲ್ಲರೂ ಬಾಬ್ರಿ ಮಸೀದಿ ಧ್ವಂಸವಾದ ಮೇಲೆ ಹುಟ್ಟಿದವರು. ಮಂಡಲ್ ವರದಿ ಜಾರಿಯಾದ ನಂತರ ಮತ್ತು ಅದರ ವಿರುದ್ಧದ ಪ್ರಚಾರದ ಅಲೆ ವ್ಯಾಪಕವಾದ ನಂತರ ಕಣ್ಣು ಬಿಟ್ಟವರು. ಚಳವಳಿಗಳ ಬೀಸು ಅಲೆ ತಣ್ಣಗಾಗಿ, ಸಂಘಟನೆಗಳು ವಿಘಟಿತವಾಗಿ, ಸಂಘಟನೆಗಳ ಹೆಸರಿನಲ್ಲಿ ರೋಲ್‌ಕಾಲ್ ವ್ಯಾಪಕವಾದ ಸಂದರ್ಭದಲ್ಲಿ ಸಾಮಾಜಿಕ ಕ್ರಿಯಾಶೀಲವಾಗಬಹುದಾದ ವಯಸ್ಸು ತಲುಪಿದವರು. ಮೊಬೈಲ್ ಯುಗ ಬೆಳೆದ ಹಾಗೆಯೇ ಅವರೂ ಬೆಳೆದವರು. ರಾಜಕಾರಣ ಮಾಡುವುದೆಂದರೆ, ದುಡ್ಡು ಚೆಲ್ಲುತ್ತಾ ಮತಗಳನ್ನು ಖರೀದಿಸುವುದು ಎಂದಾದ ನಂತರವೇ ಮತದಾನದ ಹಕ್ಕನ್ನು ಪಡೆದುಕೊಂಡವರು. ಪಿಯುಸಿ ದಾಟಿದವರಿಗೆ ಹಳ್ಳಿಯಲ್ಲಿ ಕೆಲಸವಿಲ್ಲ, ನಗರದಲ್ಲಿ ಎಲ್ಲೋ ಗುತ್ತಿಗೆ ಕಾರ್ಮಿಕನಾಗಿ ಕೆಲಸ ಮಾಡಿದರೂ ಸರಿ ವಲಸೆ ಹೋಗಬೇಕು ಎಂದು ತಿಳಿದುಕೊಂಡವರು. ಈ 25 ವರ್ಷದಲ್ಲಿ ಏನೆಲ್ಲಾ ಬದಲಾವಣೆಯಾಗಿದೆ? ಆ ಎಲ್ಲಾ ಬದಲಾವಣೆಗಳ ಜೊತೆಗೆ ಸಮಾಜವನ್ನು ಅರ್ಥಮಾಡಿಕೊಂಡವರೇ ಇಂದು ವಿದ್ಯಾರ್ಥಿ-ಯುವಜನರ ಪಟ್ಟಿಯಲ್ಲಿ ಬರುತ್ತಾರೆ. ಅವರ ಇರುವು, ಅವರ ಇಂದಿನ ಅರಿವನ್ನು ರೂಪಿಸಿದೆ.

ಅವರ ಕಣ್ಣೆದುರಿನಲ್ಲಿ 'ಸಾಪೇಕ್ಷವಾಗಿ ಶಾಂತವಾಗಿದ್ದ' ಸಮಾಜದಲ್ಲಿ ರಥಯಾತ್ರೆ, ಇಟ್ಟಿಗೆ ಯಾತ್ರೆಗಳ ಮೂಲಕ ದಾಂಧಲೆಯೆಬ್ಬಿಸಿದ್ದು ಕಂಡಿಲ್ಲ. 1990ಕ್ಕೆ ಮುಂಚೆಯೂ ಬಾಂಬುಗಳು ಇದ್ದರೂ, ಬಾಂಬ್ ಸ್ಫೋಟ ನಡೆದಿರಲಿಲ್ಲವೆಂಬುದು ಅವರಿಗೆ ಗೊತ್ತಿಲ್ಲ. ಹಾಗಾಗಿ ನೀವು ಭಯೋತ್ಪಾದನೆಯ ಹುಟ್ಟು ಬೆಳವಣಿಗೆ ಕುರಿತು ಹೇಳಲು ಹೊರಟರೆ ಅವರು 'ಎಲ್ಲಾ ಮುಸ್ಲಿಮರೂ ಭಯೋತ್ಪಾದಕರಲ್ಲ; ಆದರೆ ಎಲ್ಲಾ ಭಯೋತ್ಪಾದಕರೂ ಮುಸ್ಲಿಮರೇ' ಅನ್ನುತ್ತಾರೆ. ಸವರ್ಣೀಯ ಜಾತಿಗಳ ಯುವಜನರೊಂದಿಗೆ ನೀವು ಜಾತಿವಿನಾಶ ಆಗಬೇಕು ಎಂದರೆ, 'ಹೌದು ಜಾತಿ ಹೋಗಬೇಕೆಂದರೆ ಮೀಸಲಾತಿ ಹೋಗಬೇಕು' ಅನ್ನುತ್ತಾರೆ. ಸ್ವತಃ ತಾವೇ ಮೀಸಲಾತಿ ಪಡೆದುಕೊಳ್ಳುತ್ತಿರುವವರೂ ಈ ಮಾತನ್ನಾಡುತ್ತಾರೆ. ಇವನ್ನು ಅವರ ಕಾಮನ್‌ಸೆನ್ಸ್‌ನ ಭಾಗವಾಗಿಸಿದ್ದು ಯಾರು, ಹೇಗೆ? ಜೈ ಕಿಸಾನ್ ಅವರಿಗೆ ಸುಮ್ಮನೇ ಘೋಷಣೆ ಅಥವಾ ಅದೂ ಅಲ್ಲ, ಆದರೆ ಜೈ ಜವಾನ್ ಎನ್ನುವುದು ಭಾವನಾತ್ಮಕ ಸಂಗತಿ. ಇದನ್ನೆಲ್ಲಾ ಪೋಷಿಸಿ ಬೆಳೆಸುವ ಮಾಧ್ಯಮಗಳು ಅಬ್ಬರಿಸಿ ಬೊಬ್ಬಿರಿಯುತ್ತಿವೆ. ಅವಕ್ಕೆ ಲೈಕುಗಳನ್ನು ಒತ್ತಿ ಕುರುಡಾಗಿ ಷೇರ್ ಮಾಡಲು ಕೈಯ್ಯಲ್ಲೇ ಸ್ಮಾರ್ಟ್‌ಫೋನ್ ಇದೆ. ಪ್ರತಿಯೊಬ್ಬ ಸ್ಮಾರ್ಟ್‌ಫೋನ್ ಬಳಕೆದಾರನನ್ನೂ ತನ್ನ ಪ್ರಚಾರಕ್ಕೆ ಬಳಸಿಕೊಳ್ಳಲು ಬೇಕಾದ ಸಾವಿರ... ತಂತ್ರಗಳನ್ನು ಮಾರಾಂಕಟ್ಟೆ ... ಬ್ರಾಹ್ಮಣಶಾಹಿ-ಕಾರ್ಪೊರೇಟ್-ಫ್ಯಾಸಿಸ್ಟ್ ಹೆಣೆದುಕೊಂಡಿದೆ. ತಂತ್ರಾಂಶಗಳಿಗಿಂತ ವೇಗವಾಗಿ ತಂತ್ರಗಳ ಬಲೆಯನ್ನು ಅದು ಹೆಣೆಯುತ್ತಿದೆ.

ಇವೆಲ್ಲದರ ನಡುವೆಯೇ ಎಲ್ಲಾ ಎಸ್ಸೆ... ಪಿಯುಸಿಗಳಲ್ಲೂ 'ವಿದ್ಯಾರ್ಥಿನಿಯರದ್ದೇ ಮೇ... ಸಾಧಿಸಿದರೂ, ಉನ್ನತ ಶಿಕ್ಷಣಕ್ಕೆ ಕಡಿಮೆ ಹೆಣ್ಣು... ಹೋಗುತ್ತಿದ್ದಾರೆ. ಸಾರ್ವಜನಿಕ ವಲಯದಲ್ಲಿ ತನ್ನ... ಹಿಗ್ಗಿಸಿಕೊಳ್ಳಬಯಸುತ್ತಿರುವ ಮಹಿಳಾ ಸಂಕುಲದ ವಿವಿಧ ರೀತಿ ಮತ್ತು ಪ್ರಮಾಣದ ಲೈಂಗಿಕ ಕಿರುಕು... ಅಪ್ಪಳಿಸುತ್ತಿವೆ. ಆದರೂ, ಛಲಬಿಡದೇ ಮುನ್ನುಗ್ಗು... ಹುಡುಗಿಯರು, ಯುವತಿಯರು ಯಾವ ಬ... ತಲ್ಲಣಗಳನ್ನು ಅನುಭವಿಸುತ್ತಿರಬಹುದು? ಇಂತಹ ಮಕ್ಕಳನ್ನು ಭೋಗದ ಸರಕುಗಳಂತೆ ನೋಡುತ್ತಿರುವ ಸಂಕುಲಕ್ಕೆ 'ನಿನ್ನ ಪುರುಷಹಂಕಾರ ತಣಿಯಬೇಕೆ... ನೀನು ಇವರನ್ನು ಕಾಮಿಸಬೇಕು' ಎಂದು ಹೇಳಿಕೊ... ಯಾರು, ಹೇಗೆ? ನಿರ್ಭಯಾ ಪ್ರಕರಣದಲ್ಲಿಯಂತೆ ದ... ಬಿಹಾರದಿಂದ ಬಂದು ದೆಹಲಿಯ ಬೀದಿಗಳಲ್ಲಿ ... ಕೃತ್ಯಗಳನ್ನೆಸಗಿದ ಆ ಹುಡುಗರಿಗೆ ಕಠಿಣ ಶಿಕ್ಷೆ ಆಗಲೇ... ಆದರೆ, ಅವರಲ್ಲಿ ಆ ರೀತಿಯ ಮನುಷ್ಯ ವಿರ... ಕ್ರಿಯೆಗೆ ಪ್ರೇರಣೆಯಾದದ್ದು ಏನು? ಅತ್ಯಾ... ಕ್ಕೊಳಗಾಗುತ್ತಿರುವ ಮಹಿಳೆಯರ ಸರಾಸರಿ ವಯ... ಕಡಿಮೆಯಾಗುತ್ತಿದೆ; ಅತ್ಯಾಚಾರ ಮಾಡುತ್ತಿರುವ ಗಂ... ಸರಾಸರಿ ವಯಸ್ಸೂ ಕಡಿಮೆಯಾಗುತ್ತಿದೆಯಲ್ಲಾ ಏ...

ಈ ಎಲ್ಲಾ ಪ್ರಶ್ನೆಗಳನ್ನು ನಾವೂ ಹಾಕಿಕೊಳ್ಳಬೇಕು ಅಲ್ಲವೇ?

ನಮ್ಮ ವಿದ್ಯಾರ್ಥಿ-ಯುವಜನರು ಎದುರಿಸು... ತಲ್ಲಣಗಳು, ಒತ್ತಡಗಳಿಗೆ ನಾವು ಕಿವಿಯಾಗಬೇಕು. ಬ... ಈ ಸಮಸ್ಯೆಗಳಿಗೆ ಉತ್ತರಗಳು ಅವರಲ್ಲೂ ಇರಬಹ... ನಮ್ಮ ಬೋಧನೆ ಮತ್ತು ಉಪದೇಶಗಳಿಗೆ ಅವರು ಸ್ಪಂದಿ... ಹೋಗಬಹುದು. ಅವರ ಪ್ರಶ್ನೆಗಳು ಮತ್ತು ಉತ್ತರಗ... ಕೇಳಿಸಿಕೊಳ್ಳುವ ಕೆಲಸವನ್ನು ನಾವು ಮಾಡೋಣ. ಬ... ನಮಗೆ ಗೊತ್ತಿಲ್ಲದ್ದು ಅವರಿಗೆ ಗೊತ್ತಿರಬಹುದು. ಏಕೆ... ಕಳೆದ 4-5 ವರ್ಷಗಳಲ್ಲಿ ಅವರೂ ಹಿಂದೆ ಇದ್ದ... ಸಾಮಾಜಿಕವಾಗಿ ಕ್ರಿಯಾಶೀಲರಾಗುತ್ತಿದ್ದಾರೆ. ಹೆಚ್ಚಿನ... ತಮ್ಮಂತೆ ತಾವೇ ಏನೇನೋ ಮಾಡುತ್ತಿದ್ದಾರೆ. ದ... ಸಂಖ್ಯೆಯ ಯುವಜನರು ಕಾರ್ಪೊರೇಟ್-ಬ್ರಾಹ್ಮಣ... ಯಂತ್ರಾಂಗಕ್ಕೆ ಕಾಲಾಳುಗಳಾಗುತ್ತಿದ್ದಾರೆ. ಅದೇ ಸಂದರ್ಭ... ಗಣನೀಯ ಸಂಖ್ಯೆಯ ಯುವಜನರು ಜೀವ... ಚಟುವಟಿಕೆಗಳಿಗೂ ಜೊತೆಯಾಗುತ್ತಿದ್ದಾರೆ. ಭ್ರಷ್ಟಾ... ವಿರೋಧಿ ಚಳವಳಿಯಲ್ಲಿ ಅವರೇ ದೊಡ್ಡ ಸಂಖ್ಯೆಯಲ್ಲಿ... ನಿರ್ಭಯಾ ಪ್ರಕರಣದಲ್ಲಿ ಅವರೇ ಇದ್ದರು. ರೋ... ವೇಮುಲ ಮತ್ತು ಜೆಎನ್‌ಯು ಪ್ರಕರಣದ ಸಂದರ್ಭ... ದೇಶಾದ್ಯಂತ, ಚಿಕ್ಕಚಿಕ್ಕ ಸಂಖ್ಯೆಯಲ್ಲೇ ಆದರೂ, ಅ... ಕ್ರಿಯಾಶೀಲರಾಗಿದ್ದರು. ಈ ಸಕಾರಾತ್ಮಕ ಬೆಳವಣಿಗೆ... ಇದೆ.

ಹೊಸ ತಲೆಮಾರಿನ ಕ್ರಿಯಾಶೀಲ ಸಮುದಾಯ... ನಾವು ಕಲಿತುಕೊಳ್ಳಬಹುದಾದ್ದು ಏನೋ ಇರಬಹು... ಆಲಿಸಿದರೆ, ಅವರು ಕಲಿಸಲೂಬಹುದು. ಆನಂತರ 2... ಶತಮಾನದವರು ಕಂಡುಕೊಂಡಿರುವ ಸತ್ಯಗಳು ... ಕಲಿತ ಪಾಠಗಳನ್ನು ಅವರಿಗೂ ಹೇಳಬಹ... ಸಾಮಾಜಿಕವಾಗಿ ಕ್ರಿಯಾಶೀಲರಾಗುತ್ತಿರುವ ವಿದ್ಯಾ... ಯುವಜನರಿಗೆ ಕಿವಿಗೊಡೋಣ.

ಬಿಜೆಪಿಗಳ ಹೆಣ ರಾಜಕಾರಣ ಮತ್ತು ಒಂದು ಮಾದರಿ ಮದುವೆ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಹೋದವರ್ಷ ಮಾರ್ಚ್ ತಿಂಗಳಲ್ಲಿ ಐಎಎಸ್ ಅಧಿಕಾರಿ ಡಿ.ಕೆ.ರವಿ ಆತ್ಮಹತ್ಯೆ ಮಾಡಿಕೊಂಡಾಗ ಬಿಜೆಪಿಗಳು ಮತ್ತು ಜೆಡಿಎಸ್‌ನವರು ರಾಜ್ಯದಾದ್ಯಂತ ಬೊಬ್ಬೆ ಹಾಕಿದ್ದರು. ರವಿ ಸಾವಿನ ಹಿಂದೆ ಆಗಿನ ಗೃಹ ಮಂತ್ರಿ ಜಾರ್ಜ್ ಅವರ ಕೈವಾಡ ಇದೆ ಎಂದೂ, ಬಿಲ್ಡರ್ ಲಾಬಿ ಅವರೊಂದಿಗೆ ಕೈಜೋಡಿಸಿದೆ ಎಂದೂ ಅವರೆಲ್ಲರೂ ಆರೋಪಿಸಿದ್ದರು. ಇನ್ನು ಸಾಮಾಜಿಕ ಮಾಧ್ಯಮಗಳಲ್ಲಿರುವ ಚಡ್ಡಿಗಳ ಕಿರಾತಕರ ಪಡೆಯಂತೂ "ರವಿ ಅವರನ್ನು ಕೊಂದು ಹಾಕಲು ದುಬೈಯಿಂದ ಮೂವರು ಸುಪಾರಿ ಕೊಲೆಗಡುಕರು ಬಂದಿದ್ದರು, ಅವರು ರವಿಯವರ ಮನೆಯನ್ನು ಪ್ರವೇಶಿಸಿ ಅವರ ಬಲಗೈನ ಮೂರನೆ ಬೆರಳಿಗೆ ವಿಷ ಚುಚ್ಚಿ ಸಾಯಿಸಿದರು" ಎಂದೆಲ್ಲ ತಾವೇ ರವಿ ಸಾವನ್ನು ಪ್ರತ್ಯಕ್ಷ ಕಂಡವರಂತೆ ಸುಳ್ಳುಗಳನ್ನು ಹಬ್ಬಿಸಿದ್ದರು. ಅವರೆಲ್ಲರಿಗೆ ಸಾಥ್ ಕೊಡುವಂತೆ ಮುಖ್ಯವಾಹಿನಿಯ ಪತ್ರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಹಿರಿಯ ಚಡ್ಡಿಗಳು "ರವಿ ಅವರನ್ನು ಸಿದ್ದರಾಮಯ್ಯನವರ ಸರಕಾರ 40 ಬಾರಿ ವರ್ಗಾವಣೆ ಮಾಡಿತ್ತು" ಎಂದೆಲ್ಲ ಕಪೋಲಕಲ್ಪಿತ ವರದಿಗಳನ್ನು ಪ್ರಕಟಿಸಿದ್ದರು. ಕುಮಾರಸ್ವಾಮಿ, ಅಶೋಕ್, ಸಿ.ಟಿ.ರವಿ ತರಹದ ರಾಜಕಾರಣಿಗಳು ದಿವಂಗತ ರವಿ ಅವರು ಒಕ್ಕಲಿಗ ಸಮುದಾಯಕ್ಕೆ ಸೇರಿದವರಾಗಿದ್ದರಿಂದ ಅವರ ಸಾವಿನ ವಿವಾದದಲ್ಲೇ ತಮ್ಮ ಜಾತಿ ಬೇಳೆ ಬೇಯಿಸಿಕೊಳ್ಳಲು ಯತ್ನಿಸಿದ್ದರು.

ಸ್ಥಳೀಯ ಮಾಧ್ಯಮಗಳ ಮಾತು ಬದಿಗಿರಲಿ, ಸ್ವತಃ



'ದಿ ನೇಷನ್ ವಾಂಟ್ಸ್ ಟು ನೋ' ಕುಖ್ಯಾತಿಯ 'ಟೈಮ್ಸ್ ನೌ' ಚಾನೆಲ್‌ನ ಅರ್ನಬ್ ಗೋಸ್ವಾಮಿ ಸತತ ಮೂರು ದಿನಗಳ ಕಾಲ ರವಿ ಸಾವಿನ ವಿಷಯವನ್ನೇ ತನ್ನ 'ನ್ಯೂಸ್ ಅವರ್' ಕಾರ್ಯಕ್ರಮದಲ್ಲಿ ಚರ್ಚಿಸಿದ್ದ. ಜೊತೆಗೆ "ರವಿ ಸಾವಿನ ಸತ್ಯ ಹೊರಬರುವವರೆಗೂ ನಾನು ಸುಮ್ಮನಿರುವುದಿಲ್ಲ" ಎಂದೂ ಆತ ಶಪಥ ಮಾಡಿದ್ದ. ಇನ್ನು ಫೇಸ್‌ಬುಕ್ ತರಹದ ಸೋಷಿಯಲ್ ಮೀಡಿಯಾದಲ್ಲಿ ಹಲ್ಕು ಚಡ್ಡಿಗಳು ಮತ್ತು ಹಲವು ಒಕ್ಕಲಿಗ ಯುವಕರು ನನ್ನನ್ನು ಟಾರ್ಗೆಟ್ ಮಾಡಿ ಉಪಯೋಗಿಸಿದ ಕೆಟ್ಟ ಪದಗಳಿಗೆ ಲೆಕ್ಕವಿಲ್ಲ.

ಇವರೆಲ್ಲರ ರಗಳೆಯಿಂದ ಬೇಸತ್ತ ಸಿದ್ದರಾಮಯ್ಯ ಕೊನೆಗೆ ರವಿ ಸಾವಿನ ತನಿಖೆಯನ್ನು ಕೇಂದ್ರದ ಸಿಬಿಐಗೆ ಹಸ್ತಾಂತರಿಸಿದ್ದರು. ಅದಾಗಿ ಇಲ್ಲಿಗೆ 15 ತಿಂಗಳುಗಳೇ ಕಳೆದಿವೆ. ಆ ಕೇಸು ಹಸ್ತಾಂತರ ಆದ ದಿನದಿಂದ ಚಡ್ಡಿ ನಾಯಕ ಅಶೋಕನಾಗಲಿ, ಜಾತ್ಯತೀತತೆ ಅಂದರೆ ಏನು ಎಂಬುದೇ ಗೊತ್ತಿಲ್ಲದ ಜಾತ್ಯತೀತ ಜನತಾದಳದ ನಾಯಕ ಕುಮಾರಸ್ವಾಮಿಯಾಗಲಿ, ಅರ್ನಬ್ ಗೋಸ್ವಾಮಿಯಾಗಲಿ, ವಿಷ ಭಟ್ಟನಾಗಲಿ ಒಂದೇ ಒಂದು ದಿನವೂ "ಸಿಬಿಐ ವರದಿ ಯಾಕೆ ಇನ್ನೂ ಬಂದಿಲ್ಲ?" ಎಂದು ಪ್ರಶ್ನಿಸಿಲ್ಲ; ವರದಿ ಸಲ್ಲಿಸುವಂತೆ ಒತ್ತಡ ಹೇರಿಲ್ಲ. ಯಾಕೆಂದರೆ ಅವರೆಲ್ಲರಿಗೆ ಚೆನ್ನಾಗಿ ಗೊತ್ತು ಡಿ.ಕೆ.ರವಿ ಅವರದ್ದು ಕೊಲೆ ಅಲ್ಲ ಬದಲಾಗಿ ಆತ್ಮಹತ್ಯೆ ಎಂಬುದು. (ಈ ಮಧ್ಯೆ ಹಲವು ರಾಷ್ಟ್ರೀಯ ಪತ್ರಿಕೆಗಳು ಸಿಬಿಐನ ಅಧಿಕಾರಿಗಳು 'ಆಫ್ ದಿ ರೆಕಾರ್ಡ್' ರವಿ ಮಾಡಿಕೊಂಡಿದ್ದು ಆತ್ಮಹತ್ಯೆ ಎಂದು ಹೇಳಿದ್ದಾರೆ ಎಂದೂ ವರದಿ ಮಾಡಿವೆ.) ಒಟ್ಟಾರೆಯಾಗಿ ಅವರೆಲ್ಲರ ಹುನ್ನಾರ ಯಾವುದಾಗಿತ್ತೆಂದರೆ ಹೇಗಿದ್ದರೂ ಈಗ ಕೇಂದ್ರದಲ್ಲಿ ಪರಮ ಸುಳ್ಳುಗಾರ ನರೇಂದ್ರ ಮೋದಿಯದ್ದೇ ಸರ್ಕಾರ ಇರುವುದರಿಂದ ಸಿಬಿಐ ತಂಡದಿಂದ ರವಿಯದ್ದು ಕೊಲೆ ಎಂಬ ವರದಿ ತರಿಸಿಕೊಂಡು ರಾಜ್ಯದ ಕಾಂಗ್ರೆಸ್ ಸರ್ಕಾರವನ್ನು ಸಂಕಷ್ಟದಲ್ಲಿ ಸಿಲುಕಿಸುವುದಾಗಿತ್ತು. ಆದರೆ ಸಿಬಿಐ ತಂಡ ಅದೆಷ್ಟೇ ತಿಣುಕಾಡಿದರೂ ಇಲ್ಲದ ಸಾಕ್ಷ್ಯಗಳನ್ನು ಅದೆಲ್ಲಿಂದ ಸೃಷ್ಟಿಸಿ ರವಿಯನ್ನು ಕಾಂಗ್ರೆಸ್ ನಾಯಕರು ಕುತಂತ್ರದಿಂದ ಸಾಯಿಸಿದರು ಎಂಬ ವರದಿ ಕೊಟ್ಟೀತು? ಅದಕ್ಕೆ ಅವರೂ ಇಲ್ಲಿಯತನಕ ರವಿ ಪ್ರಕರಣ ಕುರಿತಂತೆ ಯಾವುದೇ ವರದಿಯನ್ನು ಕೊಡದೆ ಕೈಕಟ್ಟಿಕೊಂಡು ಕುಳಿತಿದ್ದಾರೆ.

ಹೀಗೆ ರವಿ ಪ್ರಕರಣದಲ್ಲಿ ಹೆಣ ರಾಜಕೀಯ ಮಾಡಿ ಮಣ್ಣು ಸೋಲು ಕಂಡಿದ್ದರೂ, ರಾಜ್ಯದ ಜನರಿಂದ ಛೀಮಾರಿಸಿ ಕೊಂಡಿದ್ದರೂ ಚಡ್ಡಿಗಳಿಗೆ ಬುದ್ಧಿ ಬಂದಿಲ್ಲ. ಅದಕ್ಕಾಗಿಯೇ ಇದೀಗ ಡಿವೈಎಸ್‌ಪಿ ಗಣಪತಿ ಅವರ ಸಾವನ್ನೇ ಮತ್ತೊಮ್ಮೆ ಬಂಡವಾಳ ಮಾಡಿಕೊಂಡು "ಸಿಬಿಐ ತನಿಖೆ ಆಗಲಿ" ಎಂದು ಸದನದ ಒಳಗೂ, ಹೊರಗೂ ಚೀರಾಡುತ್ತಿದ್ದಾರೆ.

ಇದಕ್ಕೆ ಸರಿಯಾಗಿ 'ರೈಟ್', 'ಲೆಫ್ಟ್' ಎನ್ನುವ ನಮ್ಮ ಕನ್ನಡದ 24/7 ಟಿವಿ ಚಾನೆಲ್‌ಗಳೂ "ಜಾರ್ಜ್ ಯಾಕೆ ಇನ್ನೂ ರಾಜೀನಾಮೆ ಕೊಟ್ಟಿಲ್ಲ" ಎಂದು ಬಾಯಿಬಡಿದುಕೊಳ್ಳುತ್ತಿವೆ. ಅಂತಹ ಒಂದು ಚಾನೆಲ್‌ನಲ್ಲಿ ಕೆಲಸ ಮಾಡುತ್ತಿರುವ ಹಿರಿಯ ಪತ್ರಕರ್ತನಿಗೆ ಫೋನ್ ಮಾಡಿದ ನಾನು "ಅಲ್ರಯ್ಯ ನನಗೂ ನಿಮ್ಮಂತೆ ಸತ್ಯ ಗೊತ್ತಾಗಬೇಕಿದೆ. ಯಾವುದೋ ಒತ್ತಡದಲ್ಲಿದ್ದ ಗಣಪತಿ ಅವರು ಮಾಧ್ಯಮಗಳ ಮುಂದೆ ಮಾಡಿದ ಆರೋಪದ ಸತ್ಯಾಸತ್ಯತೆ ಏನು ಎಂದು ನೋಡುವ ಪ್ರಯತ್ನವನ್ನಾದರೂ ನಾವೆಲ್ಲರೂ ಮಾಡೋಣ. ನಮ್ಮ ವರದಿಗಾರರಿಗೆ ಹಾಗೆ ನಾನು ಹೇಳಿ ಆಗಿದೆ. ಹೇಳಿಕೇಳಿ ನನ್ನದು ವಾರ ಪತ್ರಿಕೆ. ಆದ್ದರಿಂದ ನಮ್ಮ ತಂಡಕ್ಕೆ ಇನ್ನೂ ಸಮಯವಿದೆ. ಆ ಸಮಯಾವಕಾಶ ನಿಮಗಿಲ್ಲ ಅಂತ ಗೊತ್ತು. ಆದರೂ ಗಣಪತಿ ಅವರು ಮಾಡಿದ ಆರೋಪಗಳು ಮತ್ತು ಸ್ವತಃ ಅವರ ಮೇಲಿದ್ದ ಆರೋಪಗಳು ಯಾವುದು? ಅವರ ಮೇಲೆ ಹಿರಿಯ ಅಧಿಕಾರಿಗಳು ಮತ್ತು ರಾಜಕಾರಣಿಗಳು ಒತ್ತಡ ಹಾಕಿದ್ದು ನಿಜವೇ? ಆತ ಸಂಘಪರಿವಾರದ ಪರ ಕೆಲಸ ಮಾಡಿದ್ದು ನಿಜವೋ, ಸುಳ್ಳೋ ಎಂದೆಲ್ಲ ವಿಚಾರಿಸಿದರೆ ನಿಮ್ಮ ಚಾನೆಲ್ ಆದರೂ ಇತರೆ ಚಾನೆಲ್‌ಗಳಿಗಿಂತ ಭಿನ್ನವಾಗಿ ಕೆಲಸ ಮಾಡಿದಂತಾಗುತ್ತದೆ ಅಲ್ಲವೇ?" ಎಂದು ಕೇಳಿದೆ.

ಅದಕ್ಕಾತ ಏನಂದ ಗೊತ್ತಾ? "ಅಯ್ಯೋ, ಈ ಕ್ಷಣ ಸತ್ಯ ಕಟ್ಟಿಕೊಂಡು ನಮಗೇನೂ ಆಗಬೇಕಿಲ್ಲ. ನಮಗೆ ಬೇಕಿರುವುದು ಟಿಆರ್‌ಪಿ. ಯಾಕೆಂದರೆ ಟಿಆರ್‌ಪಿ ಸಿಕ್ಕರೆ ಜಾಹೀರಾತುಗಳು ಬರುತ್ತವೆ ಮತ್ತು ಆ ಮೂಲಕ ನಮಗೆ ಹಣ ಸಿಗುತ್ತದೆ. ಗಣಪತಿ ಸಾವು ಇನ್ನೆರಡು ದಿನಗಳ ಕಾಲ ನಮಗೆ ಬಂಡವಾಳ. ಆಮೇಲೆ ಇನ್ನೊಂದು ಯಾವುದೋ ಸುದ್ದಿ ಬರುತ್ತೆ. ಗಣಪತಿಯನ್ನು ನಾವು ಮಾತ್ರವಲ್ಲ, ನಾಡಿನ ಜನರೂ ಮರೆಯುತ್ತಾರೆ. ಇದರಿಂದ ನಮಗೆ ಲಾಭವೇ ಹೊರತು ಯಾರಿಗೆ ಏನು ನಷ್ಟ?!" ಎಂದ ಆ ಪುಣ್ಯಾತ್ಮ.

ಅವನಂತಹ ಮನೋಭಾವದ ಇನ್ನೊಂದು ಚಾನೆಲ್‌ನ ಆ್ಯಂಕರ್ ನನಗೆ ಫೋನ್ ಮಾಡಿ "ಜಾರ್ಜ್ ಅವರ ವಿರುದ್ಧ ಮೂರ್ನಾಲ್ಕು ಬಾರಿ ಆರೋಪಗಳು ಕೇಳಿಬಂದಿವೆ. ಹಾಗಿದ್ದರೂ ಅವರು ರಾಜೀನಾಮೆ ಕೊಡುತ್ತಿಲ್ಲ. ನಿಮ್ಮಂಥವರು ಯಾಕೆ ಸುಮ್ಮನಿದ್ದೀರಿ? ಅವರು ರಾಜೀನಾಮೆ ಕೊಡಬೇಕೆಂದು ನೀವ್ಯಾಕೆ ಒತ್ತಾಯಿಸುತ್ತಿಲ್ಲ?" ಎಂದು ಪ್ರಶ್ನಿಸಿದ.

"ಆರೋಪ ಮಾಡಲಾಗಿದೆ ಎಂಬ ಕಾರಣಕ್ಕೇ ಅವರು ತಪ್ಪಿತಸ್ಥರು ಎಂದು ಸಾಬೀತಾಗುವುದಿಲ್ಲ. ಈವಾಗ ನನ್ನ ವಿರುದ್ಧ ಯಾರೋ ಆರೋಪ ಮಾಡಿದರೆ ನಾನೇನು ಮಾಡಬೇಕು? ಆರೋಪದ ಸತ್ಯಾಸತ್ಯತೆ ಸ್ಪಷ್ಟವಾಗುವವರೆಗೂ ನಾನು ಪತ್ರಿಕೆ ನಿಲ್ಲಿಸಿ ಮನೆಗೆ ಹೋಗಬೇಕಾ? ನೀನ್ಯಾರು ಅಂತ ನನಗೆ ಗೊತ್ತಿಲ್ಲ. ಆದರೂ ಈಗ ನಿನ್ನ ವಿರುದ್ಧ ಆರೋಪ ಮಾಡುತ್ತೇನೆ. ನೀನು ಸರ್ಕಾರದಿಂದ ಸೈಟ್ ಪಡೆದಿದ್ದೀಯ ಎಂದೂ, ನಿನ್ನ ಚಾನೆಲ್‌ನಲ್ಲಿ ಯಾವುದೋ ಒಂದು ಕಾರ್ಯಕ್ರಮವನ್ನು ಪ್ರಸಾರ ಮಾಡಲು ಅಥವಾ ಮಾಡದಿರಲು ನೀನು ಹಣ ಪಡೆದಿದ್ದೀಯ ಅಂತೀನಿ. ಆಗ ನೀನೇನು ಮಾಡುತ್ತೀಯಾ? ನಿನ್ನ ಕೆಲಸ ಬಿಟ್ಟು ಮನೆಗೆ ಹೋಗುತ್ತೀಯಾ?" ಅಂತ ಕೇಳಿದೆ.

ಅದಕ್ಕೆ ಆತ ಮತ್ತೊಮ್ಮೆ "ಅಲ್ಲಾ ಜಾರ್ಜ್ ವಿರುದ್ಧ ಮೂರ್ನಾಲ್ಕು ಬಾರಿ ಆರೋಪ ಬಂದಿದೆ" ಎಂದು ಮತ್ತೊಮ್ಮೆ ಹೇಳಿದ.

"ಹೌದಾ? ನನಗೆ ಗೊತ್ತಿಲ್ಲ? ಯಾವುವು ಆ ಮೂರ್ನಾಲ್ಕು ಪ್ರಕರಣಗಳು?" ಎಂದೆ.

"ಡಿ.ಕೆ.ರವಿ ಕೇಸಲ್ಲೂ ಅವರ ಹೆಸರು ಕೇಳಿಬಂದಿತ್ತು"

"ಹೌದಾ? ಯಾರು ಆ ಕೇಸಲ್ಲಿ ಜಾರ್ಜ್ ವಿರುದ್ಧ ಆರೋಪ ಮಾಡಿದ್ದು? ಸ್ವತಃ ರವಿ ಅವರಾ? ಅವರ ಹೆಂಡತಿಯಾ? ಅವರ ಹೆತ್ತವರಾ? ಅವರ ಮಾವನಾ?" ಎಂದು ಮರುಪ್ರಶ್ನಿಸಿದೆ. ಅದಕ್ಕೆ ಅವನಲ್ಲಿ ಉತ್ತರವಿರಲಿಲ್ಲ.


"ನೆನಪು ಮಾಡಿಕೋ, ಆಗ ಜಾರ್ಜ್ ಅವರ ಹೆಸರನ್ನು ಪ್ರಸ್ತಾಪಿಸಿದ್ದು ಮಾಧ್ಯಮಗಳೇ ಹೊರತು ಬೇರೆ ಯಾರೂ ಅಲ್ಲ. ಈಗ ನೀನೇ ಇನ್ನೆರಡು ಪ್ರಕರಣಗಳನ್ನು ಕಲ್ಪಿಸಿಕೊಂಡು 'ಮೂರ್ನಾಲ್ಕು ಬಾರಿ' ಎಂದು ಆರೋಪ ಮಾಡುತ್ತಿದ್ದೀಯ. ಇರಲಿ. ಗಣಪತಿ ಅವರು ಮಾಡಿರುವ ಆರೋಪಗಳ ಸತ್ಯಾಸತ್ಯತೆ ತನಿಖೆಯಾಗಲಿ. ಆಗ ಜಾರ್ಜ್ ಆಗಲಿ, ಇತರ ಅಧಿಕಾರಿಗಳಾಗಲಿ ತಪ್ಪು ಎಸಗಿದ್ದರು ಎಂದು ಸಾಬೀತಾದರೆ ಅವರ ರಾಜೀನಾಮೆಗೆ ಮಾತ್ರವಲ್ಲ, ಅವರಿಗೆ ಶಿಕ್ಷೆ ಆಗುವಂತೆ ಒತ್ತಾಯಿಸುವವರಲ್ಲಿ ನಾನು ಮುಂಚೂಣಿಯಲ್ಲಿರುತ್ತೇನೆ. ಆದರೆ ತನಿಖೆ ಆಗದೆ ಶಿಕ್ಷೆ ಆಗಲಿ ಎಂದು ನಾನು ಹೇಳುವುದಿಲ್ಲ. ನಿನ್ನಂತಹ ಟಿವಿ ಚಾನೆಲ್‌ನವರು ಯಾವುದೇ ತನಿಖೆ ಇಲ್ಲದೆ ಡಿವೈಎಸ್‌ಪಿ ಕಲ್ಲಪ್ಪ ಹಂಡಿಬಾಗ್ ಅವರು ಭ್ರಷ್ಟ ಎಂದು ತೀರ್ಪು ನೀಡಿದ್ದರಿಂದ ಆತ ಖಿನ್ನತೆಯಿಂದ ತನ್ನ ಪ್ರಾಣವನ್ನೇ ಕಳೆದುಕೊಂಡ. ನಿಮ್ಮೆಲ್ಲರಂತೆ ನಾನು ಪೂರ್ವಾಗ್ರಹಪೀಡಿತಳಾಗಿ ನನ್ನ ಕೈಗಳಿಗೆ ಬೇರೆಯವರ ರಕ್ತವನ್ನು ಮೆತ್ತಿಕೊಳ್ಳಲಾರೆ" ಎಂದೆ.

ಇರಲಿ, ಇದನ್ನು ಬರೆಯುವ ಹೊತ್ತಿಗೆ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಡಿವೈಎಸ್‌ಪಿ ಗಣಪತಿ ಅವರ ಆತ್ಮಹತ್ಯೆ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸುವುದಾಗಿ ಹೇಳಿದರು. ಆದರೆ ಗಣಪತಿ ಸಾವನ್ನೇ ತಮ್ಮ ಕುತಂತ್ರ ರಾಜಕಾರಣಕ್ಕೆ ಬಂಡವಾಳ ಮಾಡಿಕೊಂಡು ಕಳೆದ ಎರಡು ದಿನಗಳಿಂದ ಹಾದಿರಂಪ ಬೀದಿರಂಪದಲ್ಲಿ ತೊಡಗಿರುವ ಬಿಜೆಪಿಗಳು ಅದನ್ನು ಒಪ್ಪಲು ಸಿದ್ಧರಿಲ್ಲ. ಬದಲಾಗಿ ಸಿಬಿಐ ತನಿಖೆಯೇ ಬೇಕೆಂದು ಚೀರಾಡುತ್ತಿದ್ದಾರೆ. ವಿಧಾನಸಭೆಯಲ್ಲೇ ಅಹೋರಾತ್ರಿ ಧರಣಿ ಮಾಡುವುದಾಗಿ ಹೇಳುತ್ತಿದ್ದಾರೆ. (ಅವರಲ್ಲಿ ಯಾರಾದರೂ ಬಿರಿಯಾನಿ ಅಥವಾ ಕಬಾಬ್ ತಿನ್ನುತ್ತಾರಾ ಎಂಬ ಗುಮಾನಿ ನನ್ನಂಥವರನ್ನು ಕಾಡುತ್ತಿದ್ದರೆ ಅದರಲ್ಲಿ ಅಚ್ಚರಿ ಇಲ್ಲ!)

ಬಿಜೆಪಿಗೆ ರಾಜ್ಯದಲ್ಲಿ ಎಂತಹ ದುರ್ಗತಿ ಬಂದಿದೆ ಎಂದರೆ ಅವರು ಸತ್ತ ಜನರ ಹೆಣಗಳ ಮೇಲೆ ರಾಜಕಾರಣವನ್ನು ಮಾಡಲೂ ಹೇಸದಂತಹ ಸ್ಥಿತಿಯನ್ನು ತಲುಪಿದ್ದಾರೆ. ಇಂತಹ ಪಕ್ಷವನ್ನು ಮತದಾರರು ಮತ್ತೊಮ್ಮೆ ರಾಜ್ಯದಲ್ಲಿ ಅಧಿಕಾರಕ್ಕೆ ತರುವ ಬದಲಾಗಿ ಅವರನ್ನು ಶಾಶ್ವತವಾಗಿ ಸ್ಮಶಾನಕ್ಕೆ ಕಳುಹಿಸುವುದು ಒಳ್ಳೆಯದಲ್ಲವೇ?

* * * *

ಜುಲೈ 11ರಂದು ಮಹಾರಾಷ್ಟ್ರದ ನಾಗಪುರದಲ್ಲಿ ಒಂದು ಮದುವೆ ಅಪರೂಪದ ರೀತಿಯಲ್ಲಿ ಜರುಗಿತು. ಸಾಮಾನ್ಯವಾಗಿ ಮದುವೆ ಸಮಾರಂಭಗಳಲ್ಲಿರುವ ಪೂಜಾ ವಿಧಾನಗಳಾಗಲಿ, ಆಡಂಬರವಾಗಲಿ, ಬ್ಯಾಂಡು ಇತ್ಯಾದಿಗಳಾಗಲಿ ಅಲ್ಲಿ ಇರಲಿಲ್ಲ. ಬದಲಾಗಿ ಅಲ್ಲಿ ಇದ್ದದ್ದು ಸಾಮಾಜಿಕ ಕಾಳಜಿ ಮತ್ತು ದುಂದುವೆಚ್ಚದ ವಿರುದ್ಧದ ನಿಲುವು.



ಅಭಯ್ ದೇವಾರೆ ಎಂಬ ಯುವಕ ಇತ್ತೀಚೆಗೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಪಾಸ್ ಆಗಿ ಈಗ ಕಂದಾಯ ಇಲಾಖೆಗೆ ಆಯ್ಕೆಯಾಗಿದ್ದಾನೆ. ಹಾಗೆಯೇ ಪ್ರೀತಿ ಕುಂಭಾರೆ ಎಂಬ ಯುವತಿ ಐಡಿಬಿಐ ಬ್ಯಾಂಕ್‌ನಲ್ಲಿ ನೌಕರಿ ಮಾಡುತ್ತಿದ್ದಾಳೆ. ಅವರಿಬ್ಬರು ಯುಪಿಎಸ್‌ಸಿ ಮತ್ತು ಎಂಪಿಎಸ್‌ಸಿ ಪರೀಕ್ಷೆಗಳನ್ನು ಬರೆಯಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾಗ ಪರಸ್ಪರ ಭೇಟಿಯಾಗಿ ಅವರ ನಡುವೆ ಪ್ರೇಮಾಂಕುರವಾಗಿತ್ತು. ಅವರಿಬ್ಬರೂ ಹಲವಾರು ರೈತರು ಆತ್ಮಹತ್ಯೆ ಮಾಡಿಕೊಂಡಿರುವ ವಿದರ್ಭಾ ಪ್ರದೇಶದಲ್ಲಿ ಬರುವ ಅಮರಾವತಿ ಮತ್ತು ಯಾವತ್ಮಾಲ್ ಜಿಲ್ಲೆಯವರು.

ಅಭಯ್ ಮತ್ತು ಪ್ರೀತಿ ದಲಿತರೋ ಅಲ್ಲವೋ ಗೊತ್ತಿಲ್ಲ, ಆದರೆ ಅವರಿಬ್ಬರೂ ಅಂಬೇಡ್ಕರ್ ಮತ್ತು ಬುದ್ಧನ ಅನುಯಾಯಿಗಳು ಎಂಬುದನ್ನು ಅವರ ಫೇಸ್‌ಬುಕ್ ಪುಟಗಳು ಸ್ಪಷ್ಟಪಡಿಸುತ್ತವೆ. ಅಂಬೇಡ್ಕರ್ ಅವರು 'ಸಮಾಜಕ್ಕೆ ನೀನು ಪಡೆದದ್ದನ್ನು ಹಾವತಿಸು' ಎಂದು ಕರೆಕೊಟ್ಟಿದ್ದರಿಂದ ಅದನ್ನು ಪಾಲಿಸಲು ಅವರಿಬ್ಬರೂ ಮುಂದಾದರು.

ತಮ್ಮ ರಾಜ್ಯದ, ಅದರಲ್ಲೂ ತಾವು ಬೆಳೆದುಬಂದ ಜಿಲ್ಲೆಗಳ ರೈತರು ವಿವಿಧ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ; ಅಂತಹ ಹಲವು ಕಾರಣಗಳಲ್ಲಿ ಮಕ್ಕಳ ಮದುವೆ ಮಾಡಲೆಂದು ರೈತರು ಮಾಡಿಕೊಳ್ಳುವ ಆರ್ಥಿಕ ನಷ್ಟವೂ ಒಂದಾಗಿದೆ ಎಂಬುದನ್ನು ಅರಿತ ಅಭಯ್ ಮತ್ತು ಪ್ರೀತಿ ತಾವು ದುಡಿದು ಗಳಿಸಿದ್ದ ಮತ್ತು ತಮ್ಮ ಮದುವೆಗೆಂದು ಸಂಗ್ರಹಿಸಿದ್ದ ಹಣವನ್ನೇ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ನೀಡಲು ನಿರ್ಧರಿಸಿದರು.

ಸಾಮಾಜಿಕ ಕಾರ್ಯಕರ್ತರ ನೆರವಿನಿಂದ ಒಟ್ಟು ಹತ್ತು ರೈತರ ಕುಟುಂಬಗಳನ್ನು ಆಯ್ಕೆ ಮಾಡಿ, ಪ್ರತಿ ಕುಟುಂಬಕ್ಕೆ 20,000 ರೂಪಾಯಿಗಳನ್ನು ಕೊಟ್ಟಿದ್ದಾರೆ. ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ಗ್ರಾಮೀಣ ಪ್ರದೇಶಗಳ ಯುವಕರಿಗೆ ನೆರವಾಗಲು ಒಟ್ಟು 52,000 ರೂಪಾಯಿ ಬೆಲೆಬಾಳುವ ಪುಸ್ತಕಗಳನ್ನು ಅಮರಾವತಿಯ ಐದು ಗ್ರಂಥಾಲಯಗಳಿಗೆ ದಾನ ಮಾಡಿದ್ದಾರೆ.

ಅವರ ಮದುವೆ ಎಷ್ಟು ಸರಳವಾಗಿತ್ತೆಂದರೆ ಅವರಿಬ್ಬರಿಗೆ ಅತಿಥಿಗಳಿಗೆ ಊಟ ಹಾಕುವ ಇಚ್ಛೆಯೂ ಇರಲಿಲ್ಲ. ಆದರೆ ತಮ್ಮ ದೂರದ ಊರುಗಳಿಂದ ಮದುವೆಗೆಂದು ಜನರು ಬಂದಿದ್ದರಿಂದ ವಿಧಿ ಇಲ್ಲದೆ ಎಲ್ಲರಿಗೂ ಊಟ ಹಾಕಿಸಬೇಕಾಯಿತು. ಹಾಗಾಗಿ ಅವರು ಅತಿಥಿಗಳಿಗೆ ಚಪಾತಿ, ಅನ್ನ, ಸಾರು ಮತ್ತು ಒಂದು ಪಲ್ಯ ಮಾತ್ರ ಬಡಿಸಿದರೆ ಹೊರತು ಒಂದು ಸಿಹಿ ಪದಾರ್ಥವನ್ನೂ ಹಂಚಲಿಲ್ಲ.


ಮದುವೆ ಸಂದರ್ಭದಲ್ಲಿ ವೇದಿಕೆಯಲ್ಲಿ ಇದ್ದದ್ದು ಅಂಬೇಡ್ಕರ್ ಅವರ ಭಾವಚಿತ್ರ ಮತ್ತು ಅವರು 'ಪೇ ಬ್ಯಾಕ್ ಟು ಸೊಸೈಟಿ' ಎಂದು ಕೊಟ್ಟಿದ್ದ ಕರೆಯನ್ನು ಹೊಂದಿದ್ದ ಒಂದು ಫ್ಲೆಕ್ಸ್ ಮಾತ್ರ. ತಮ್ಮ ಈ ಸಾಮಾಜಿಕ ಕಾಳಜಿಯನ್ನು ಮದುವೆ ಸಮಾರಂಭಕ್ಕೆ ಮಾತ್ರ ಸೀಮಿತಗೊಳಿಸದೆ ಮುಂದೆಯೂ ರೈತರ ಮಕ್ಕಳ ಶಿಕ್ಷಣದ ವೆಚ್ಚವನ್ನು ಭರಿಸಲು ನಿರ್ಧರಿಸಿದ್ದಾರೆ.


"ಇಂತಹ ಸಾಮಾಜಿಕ ಕೆಲಸಗಳನ್ನು ನಮ್ಮಂತಹ ವಿದ್ಯಾವಂತ ಯುವಜನತೆ ಪ್ರಾರಂಭಿಸದಿದ್ದರೆ ನಾವು ವಿದ್ಯೆ ಪಡೆದೂ ಏನು ಪ್ರಯೋಜನ? ನಮಗೂ ಸಾಮಾಜಿಕ ಜವಾಬ್ದಾರಿಗಳಿವೆ ಎಂಬುದು ನಮ್ಮೆಲ್ಲರಿಗೆ ಅರ್ಥವಾಗಬೇಕು" ಎಂದಿದ್ದಾನೆ ವರ ಅಭಯ್.

ಈ ಯುವ ಜೋಡಿಯನ್ನು ಇತರರೂ ಅನುಸರಿಸಲಿ ಎಂಬುದು ಎಲ್ಲಾ ಪ್ರಜ್ಞಾವಂತರ ಆಶಯವಾಗಿದೆ. ■

ಚಿತ್ರದುರ್ಗ: ದರೋಡೆ ಹಿಂದಿದೆ ಭಯಾನಕ ಸ

‘ಖೋಟಾ’ ನೋಟಿನ ‘ಮಾಚಂಗೋ’ ಗ್ಯಾಂಗ್







ಅದು ಜೂನ್ 28ನೇ ತಾರೀಖು. ಸಮಯ ಸುಮಾರು ಮಧ್ಯಾಹ್ನ ಹನ್ನೆರಡು ಗಂಟೆ. ಚಿತ್ರದುರ್ಗದ ಮಹಾವೀರ ಬಡಾವಣೆಯ ಆ ಭಾರೀ ಬಂಗಲೆಯೊಳಕ್ಕೆ ನುಗ್ಗಿದ ದರೋಡೆಕೋರರ ಗುಂಪೊಂದು ವಾಚ್‌ಮನ್ ಪಾಪಣ್ಣನನ್ನು ಹಿಗ್ಗಾಮುಗ್ಗಾ ಬಡಿದು, ಮನೆಯಲ್ಲಿದ್ದವರ ನೆತ್ತಿಗಳಿಗೆ ಪಾಯಿಂಟ್‌ಬ್ಲಾಂಕ್‌ನಲ್ಲಿ ಗನ್ ತೋರಿಸಿ ಕೈಗೆ ಸಿಕ್ಕ ರೊಕ್ಕದ ಸೂಟ್‌ಕೇಸ್ ಗೆಬರಿಕೊಂಡು ಪರಾರಿಯಾಗುವ ತಯಾರಿಯಲ್ಲಿದ್ದರು. ಏಟುತಿಂದ ವಾಚ್‌ಮನ್ ಪಾಪಣ್ಣನ ಕೂಗಾಟ ಕೇಳಿಸಿಕೊಂಡು ಅಕ್ಕಪಕ್ಕದವರು ಜಮಾಯಿಸಿದ್ದರಿಂದ ದರೋಡೆಕೋರರಲ್ಲಿ ಇಬ್ಬರು ತಮ್ಮ ಗನ್‌ಗಳ ಸಮೇತ ಪೊಲೀಸರ ಅತಿಥಿಯಾಗಿದ್ದರೆ, ಇನ್ನುಳಿದವರ ತಲಾಷಿಗೆ ಪೊಲೀಸರು ‘ಹಗಲಿರುಳು’(!) ಶ್ರಮಿಸುತ್ತಿದ್ದಾರೆ.

ಮೇಲ್ನೋಟಕ್ಕೆ ಇದೊಂದು ಸೀದಾಸಾದಾ ದರೋಡೆ ಪ್ರಕರಣ. ಚಿತ್ರದುರ್ಗದ ಪೊಲೀಸ್ನೋರು ಕೂಡಾ ಇದೇ ಧಾಟಿಯಲ್ಲಿ ಎಫ್‌ಐಆರ್ ಬರೆದುಕೊಂಡು ಪ್ರಕರಣಕ್ಕೆ ‘ಶುಭಂ’ ಕಾರ್ಡ್ ತೋರಿಸುವ ಉಮೇದಿನಲ್ಲಿದ್ದಾರೆ. ಆದರೆ ಸಮಸ್ತ ಕೃತ್ಯದ ಹಿಂಜಾಡು ಭಯಾನಕವಾಗಿದೆ. ದರೋಡೆಗೆ ತುತ್ತಾದ ಮನೆಯ ಒಡೆಯನ ಕ್ರಿಮಿನಲ್ ಹಿಸ್ಟರಿ, ಉತ್ತರ ಪ್ರದೇಶದಿಂದ ಹಾರಿಬಂದ ದರೋಡೆಕೋರರ ಹೀನಸುಳಿ, ಕದ್ದೊಯ್ದ ಹಣದ ಅಸಲಿಯತ್ತು, ದುರ್ಗದಲ್ಲಿ ಇತ್ತೀಚೆಗೆ ಕದಲಾಡುತ್ತಿರುವ ಕರಾಳ ದಂಧೆಗಳನ್ನೆಲ್ಲ ತಾಳೆ ಹಾಕಿ ನೋಡಿದರೆ ಇದು ಪೊಲೀಸರು ಉಸುರುತ್ತಿರುವಂತೆ ‘ಮಾಮೂಲಿ’ ದರೋಡೆ ಪ್ರಕರಣವಲ್ಲ ಅನ್ನೋದು ಎಂತವರಿಗೂ ಖಾತ್ರಿಯಾಗುತ್ತದೆ. ಹೌದು, ಅವತ್ತು ಮಹಾವೀರ ಬಡಾವಣೆಯ ಆ ಐಷಾರಾಮಿ ಬಂಗಲೆಯಲ್ಲಿ ನಡೆದ ಅಷ್ಟೂ ಹೈಡ್ರಾಮಾದ ಹಿಂದಿರುವುದು ಖೋಟಾನೋಟು ಕಂ ಡಬ್ಲಿಂಗ್ ದಂಧೆಯ ಕರಾಳ ಸತ್ಯ!

ಉತ್ತರ ಪ್ರದೇಶದ ಆ ಪಾತಕಿಗಳ ಜಾಲ ಜಾಲಾಡಿ, ದುರ್ಗದ ದಂಧೆವಾಲಾಗಳ ಬೇರುಗಳನ್ನು ಕಿತ್ತೆಸೆಯುವ ಉಸಾಬರಿ ಚಿತ್ರದುರ್ಗದ ಪೊಲೀಸರಿಗೆ ಬೇಕಾಗಿಲ್ಲ ಅಥವಾ ಅಂತದ್ದೊಂದು ಸಾಹಸಕ್ಕೆ ಕೈಹಾಕಿದರೆ ತಮಗೆ ಬಂದುಬೀಳುವ ಆದಾಯ ಎಲ್ಲಿ ಗೋತಾ ಆಗುತ್ತೊ ಅನ್ನೋ ಮುನ್ನೆಚ್ಚರಿಕೆಯೂ ಈ ಖಾಕಿ ಮಂದಿಗಿರಬಹುದು. ಅದಕ್ಕಾಗಿ ಡಿವೈಎಸ್ಪಿ ಕವಳಪ್ಪನ ನೇತೃತ್ವದಲ್ಲಿ ಪ್ರಕರಣದ ಭೀಕರತೆಯನ್ನು ದರೋಡೆಯ ಸಾಧಾರಣತೆಗೆ ಇಳಿಸುವ ಪ್ರೊಫೆಷನಲ್ ಕಸರತ್ತುಗಳು ನಡೆಯುತ್ತಿವೆ.

ಅವನು ಖೋಟಾ ದಂಧೆಯ ಹ'ಮ್ಮಾರ

ಜೂನ್ 28ರಂದು ತನ್ನ ಐದಾರು ಮಂದಿ ಸಹಚರರೊಡನೆ ಆ ಬಂಗಲೆಗೆ ದಾಂಗುಡಿಯಿಟ್ಟ ಉತ್ತರ ಪ್ರದೇಶದ ಪಕ್ಕಾ ಕ್ರಿಮಿನಲ್ ವಿಕ್ಕಿ ಶ್ರೀವಾತ್ಸವನಿಗೆ ಹಣ ಕದಿಯುವ ಪಿಲ್ಲಿ ಉದ್ದೇಶವೇ ಇರಲಿಲ್ಲ, ಅವರೆಲ್ಲರ ಕೈಯಲ್ಲಿದ್ದ ಗನ್ನುಗಳು ಹಾತೊರೆಯುತ್ತಿದ್ದುದು ಆ ಮನೆಯ ಒಡೆಯ ಮಾರನ ನೆತ್ತರಿಗಾಗಿ. ಇಲ್ಲದಿದ್ದರೆ ದರೋಡೆಯಂತಹ ಕಾಯಕಕ್ಕಾಗಿ ಉತ್ತರ ಪ್ರದೇಶದಿಂದ ಅವರು ಕರ್ನಾಟಕಕ್ಕೆ ಬರುವ ಜರೂರೇ ಇರಲಿಲ್ಲ, ಯಾಕೆಂದರೆ ಹೇಳಿಕೇಳಿ ಉತ್ತರ ಪ್ರದೇಶ, ಪಕ್ಕದ ಬಿಹಾರ, ಜಾರ್ಖಂಡ್ ರಾಜ್ಯಗಳೇ ಅಂತದ್ದಕ್ಕೆಲ್ಲ ಹೇಳಿಮಾಡಿಸಿದ ನೆಲಗಳು. ಆಕಸ್ಮಾತ್ ಮಾರ ಮನೆಯಲ್ಲಿ ಇದ್ದಿದ್ದರೆ ಅವನ ಹೆಣ ಅನಾಯಾಸವಾಗಿ ನೆಲಕಚ್ಚುತ್ತಿತ್ತು! ಅದೃಷ್ಟವಶಾತ್ ಮಾರ ಅಂದು ತನ್ನ ಪಾರ್ಟ್ನರ್, ಚಿತ್ರದುರ್ಗ ನಗರಸಭೆಯ 4ನೇ ವಾರ್ಡಿನ ಕಾರ್ಪೋರೇಟರ್ ಚಂದ್ರ ಅಲಿಯಾಸ್ ಡಬ್ಲಿಂಗ್ ಚಂದ್ರ ಸ್ಥಾಯಿ ಸಮಿತಿ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಳ್ಳುವ ಸಮಾರಂಭದಲ್ಲಿ ಭಾಗವಹಿಸಲಿಕ್ಕೆಂದು ಮನೆಯಿಂದ ಹೊರಬದ್ದಿದ್ದ. ಹಾಗಾಗಿ ಅವನ ಪ್ರಾಣಪಕ್ಷಿ ಸದ್ಯಕ್ಕೆ ಉಳಿದುಕೊಂಡಂತಾಗಿದೆ.

ಚಿತ್ರದುರ್ಗದ ಒಂದೊಂದು ಹೆಬ್ಬಂಡೆಗು ಮಾರನ ಡಬ್ಲಿಂಗ್ ದಂಧೆಯ ಮಹಿಮೆ ತಿಳಿದಿದೆ. ಜೆಡಿಎಸ್ ಕಾರ್ಪೋರೇಟರ್ ಚಂದ್ರ, ಗೋಪಿ ಎಂಬಿಬ್ಬರು ಖತರ್ನಾಕ್ ಪಾಲುದಾರರ ಜೊತೆ ಸೇರಿಕೊಂಡು ಮಾರ ನಡೆಸುತ್ತಿರುವ ಖೋಟಾ ನೋಟಿನ ವ್ಯವಹಾರವನ್ನು ಸುಭದ್ರವಾಗಿ ಕಾಪಾಡಲೆಂದು ಸಕಲಷ್ಟು ಪಾರ್ಟಿಗಳ ಪ್ರಭಾವಿ ಲೀಡರ್‌ಗಳು, ಖಾಕಿ ಪಡೆಯೇ ಸನ್ನದ್ಧವಾಗಿ ನಿಂತಿರೋದು ದುರ್ಗದ ಮಟ್ಟಿಗೆ ನಗ್ನಸತ್ಯ, ಅದರಲ್ಲೂ ಜೆಡಿಎಸ್ ಕಾರ್ಪೋರೇಟರ್ ಚಂದ್ರನಿಗಂತು ಮಾಜಿ ಶಾಸಕ ಎಸ್.ಕೆ. ಬಸವರಾಜನ್‌ನೇ ಗಾಡ್‌ಫಾದರ್. ಅದೇರೀತಿ ನಗರಸಭೆಯ ಮಾಜಿ ಅಧ್ಯಕ್ಷ ಕಾಂತರಾಜ್ ಚಂದ್ರನನ್ನು ಎಂಥಾ ಅಪಾಯದಿಂದಾದರೂ ರಕ್ಷಿಸುವ ಧೂತ. ಇನ್ನು ಅನುಚೇತನ್‌ನಂತಹ ಮೆತ್ತಗ್ಗ ಎಸ್‌ಪಿಯನ್ನೇ ಓವರ್‌ಟೇಕ್ ಮಾಡಿ ಇಡೀ ಜಿಲ್ಲೆಯ ಖಾಕಿ ಪಡೆಯನ್ನೇ ತನ್ನ ಅಂಗೈಯಲ್ಲಿ ಹಿಡಿದಿಟ್ಟುಕೊಂಡಿರುವ ಡಿವೈಎಸ್ಪಿ ಕವಳಪ್ಪನಂತು ಇವರ ದಂಧೆಗಳ ಕಾಯಂ ರಾಜಿ ಪಂಚಾಯ್ತಿ ಗಿರಾಕಿ. ಈ ಪರಿ ವ್ಯವಸ್ಥಿತ ಹೊಂದಾಣಿಕೆಯೊಂದಿಗೆ ಸಾಗುತ್ತಿರುವ ಡಬ್ಲಿಂಗ್ ದಂಧೆಯನ್ನು ‘ಮಾಚಂಗೋ’ (ಮಾರ, ಚಂದ್ರ, ಗೋಪಿ) ತ್ರಿಮೂರ್ತಿ ಜೋಡಿ ಪಕ್ಕದ ಆಂಧ್ರ, ತೆಲಂಗಾಣ, ಮಹಾರಾಷ್ಟ್ರ, ಗೋವಾಗಳನ್ನು ಹಾದು ದೂರದ ಉತ್ತರ ಪ್ರದೇಶದವರೆಗೂ ವಿಸ್ತರಿಸಿಬಿಟ್ಟಿದ್ದಾರೆ. ಖೋಟಾ ನೋಟಿನ ನೆಪದಲ್ಲಿ ಇವರಿಂದ ಉಂಡೆನಾಮ ತಿಕ್ಕಿಸಿಕೊಂಡ ಖದೀಮರ ಸಂಖ್ಯೆಗೆ ಲೆಕ್ಕವೇ ಇಲ್ಲ, ಅವತ್ತು ಮಾರನ ಮನೆಯ ಮೇಲೆ ಅಟ್ಯಾಕ್ ಮಾಡಿದ್ದ ವಿಕ್ಕಿ ಶ್ರೀವಾತ್ಸವ್ ಕೂಡಾ ಅಂತವರಲ್ಲಿ ಒಬ್ಬ.

ಕಳ್ಳ ನೋಟು-ನಕಲಿ ಪೊಲೀಸರು

‘ಮಾಚಂಗೋ’ ಗ್ಯಾಂಗು ಖೋಟಾ ನೋಟಿನ ಕಳ್ಳ ವ್ಯವಹಾರವನ್ನು ನಡೆಸುವ ತಂತ್ರವೇ ಕುತೂಹಲಕಾರಿಯಾದದ್ದು, ದುರ್ಗದ ಈ ಕ್ರಿಮಿನಲ್ ತ್ರಿವಿಕ್ರಮರ ಖೋಟಾ ವ್ಯವಹಾರವನ್ನು ಕೇಳಿ ತಿಳಿದ ದೂರದ ರಾಜ್ಯದ ಕೆಲವೊಂದಷ್ಟು ದಂಧೆವಾಲಾಗಳು ಇವರನ್ನು ಹುಡುಕಿಕೊಂಡು ಇಲ್ಲಿಗೆ ಬರುತ್ತಾರೆ. ಹಾಗೆ ಬಂದವರು ಮೊದಲು ಭೇಟಿಯಾಗಬೇಕಾದ್ದು ಮಾರನನ್ನು. ಬಂದವನ ಕೈಗೆ ‘ಇದು ನಾವೇ ಪ್ರಿಂಟ್ ಹಾಕಿದ ನಕಲಿ ನೋಟು, ಇದು ನಕಲಿ ಅಂತ ಯಾರೊಬ್ಬರಿಗೂ ಅನುಮಾನ ಬರುವುದಿಲ್ಲ, ಅಷ್ಟು ಸಾಚಾ ನೋಟಿನಂತೆ ಪ್ರಿಂಟ್ ಮಾಡಿದ್ದೇವೆ. ಬೇಕಾದರೆ ನೀನೆ ಹೊರಗಡೆ ಹೋಗಿ ಇದನ್ನು ಚಲಾವಣೆ ಮಾಡು, ಯಾರೂ ಕಂಡುಹಿಡಿಯುವುದಿಲ್ಲ’ ಅಂತೇಳಿ ಗಾಂಧಿ ಚಿತ್ರವಿರುವ 1 ಸಾವಿರ ರೂಪಾಯಿಯ ನೋಟೊಂದನ್ನು ಕೊಡುತ್ತಾರೆ. ವಿಷಯ ಏನಪ್ಪಾ ಅಂದ್ರೆ, ಅದು ಅವರೇಳಿದಂತೆ ಖೋಟಾ ನೋಟೇ ಅಲ್ಲ; ಆರ್‌ಬಿಐ ಪ್ರಿಂಟ್ ಮಾಡಿಸಿದ ಅಪ್ಪಟ ಅಸಲೀ ನೋಟು! ಅವರೇಳಿದಂತೆಯೇ ಆತ ಅದನ್ನು ಹೊರಗಡೆ ಚಲಾವಣೆ ಮಾಡುತ್ತಾನೆ. ಅಸಲಿ ನೋಟಾದ್ದರಿಂದ ಯಾರೂ ಅನುಮಾನಿಸದೆ ಅದನ್ನು ಪಡೆಯುತ್ತಾರೆ. ಅಲ್ಲಿಗೆ ಬಂದ ದಂಧೆವಾಲಾ, ಖೋಟಾನೋಟು ಗ್ಯಾರಂಟಿಯಾಗಿ ಬಕರಿಯಾಗುತ್ತೆ ಅ ಭರವಸೆ ಮೂಡಿಸಿಕೊಂಡು ಬಿಡುತ್ತಾನೆ. ಮಾಚಂ ಜೋಡಿಯ ವಂಚನೆ ಶುರುವಾಗುವುದೇ ಅಲ್ಲಿಂದ

ತಮ್ಮ ಮೇಲೆ ನಂಬಿಕೆ ಮೂಡಿರುವುದು ಖಾತ್ರಿ ಕೂಡಲೇ ವಂಚನೆಯ ಎರಡನೇ ಎಪಿಸೋ ಶುರುಹಚ್ಚಿಕೊಳ್ಳುತ್ತಾರೆ. ಇಂತಿಷ್ಟು ಅಸಲೀ ರೊಕ್ಕ ಕೊ ಅದಕ್ಕೆ ಪ್ರತಿಯಾಗಿ ಇಷ್ಟು ಮೌಲ್ಯದ ನಕಲಿ ನೋಟು ಪ್ರಿಂಟಿಸಿ ಕೊಡುತ್ತೇವೆ ಅನ್ನೋ ತಮ್ಮ ಪ್ರೊಫೆ ಮೆನು ಕಾರ್ಡನ್ನು ಅವರ ಮುಂದಿಡುತ್ತಾರೆ. ಉದಾಹ 10 ಲಕ್ಷ ಅಸಲೀ ರೊಕ್ಕ ಕೊಟ್ಟರೆ, ಅದಕ್ಕೆ ಪ್ರತಿ ಐವತ್ತು ಲಕ್ಷ ಮೌಲ್ಯದ ಖೋಟಾ ನೋಟುಗ ನೀಡುತ್ತಾರೆ. ಅಷ್ಟರಲ್ಲಾಗಲೆ ಅವರ ಖೋಟಾನೋ (ಅದು ಅಸಲೀ ನೋಟು) ಮೇಲೆ ವಿಪರೀತ ನ ಬಂದಿರುವ ದಂಧೆವಾಲಾಗಳು ಸುಲಭವಾಗಿ ಆ ಡಿ ಓಕೆ ಅಂದುಬಿಡುತ್ತಾರೆ.

ಆಮೇಲೆ ಅವರ ಮೂರನೇ ಎಪಿಸೋ ಶುರುವಾಗುತ್ತೆ, ಅಷ್ಟೊಂದು ಖೋಟಾ ನೋಟು ಸದ್ಯಕ್ಕೆ ನಮ್ಮತ್ರ ಸ್ಟಾಕ್ ಇಲ್ಲ, ಇಂತ ದಿನಕ್ಕೆ ಸರಿ ಇಂತ ಸ್ಥಳಕ್ಕೆ ಅಸಲೀ ಅಮೌಂಟಿನೊಂದಿಗೆ ಬ ಪ್ರಿಂಟಿಸಿದ ಖೋಟಾ ನೋಟುಗಳನ್ನು ಕೊಡುತ್ತೇವೆ ಒಪ್ಪಿಸುತ್ತಾರೆ. ಅವರು ಹೇಳಿದಂತೆಯೇ ಗಿರಾಕಿ ಒರಿಜ ಕರೆನ್ಸಿ ಸಮೇತ ಸ್ಪಾಟ್‌ಗೆ ಬಂದು ಹಣವನ್ನು ‘ಮಾಚಂ ಟೀಮಿನ ಕೈಗಿಡುತ್ತಿದ್ದಂತೆಯೇ ಮೊದಲೇ ಪ್ಲಾನ್ ಮಾಡಿ ಪೊಲೀಸರ ಜೀಪೊಂದು ಗುಯ್ಯ್‌ಗುಡುತ್ತಾ ದಾಂಗುಡಿಯಿಡುತ್ತೆ, ತಾವು ಗಾಬರಿ ಬಿದ್ದವರಂತೆ ನಟಿಸ ಹಣ ತಂದ ಗಿರಾಕಿಯನ್ನೂ ಗಾಬರಿಬೀಳಿಸಿ ಆ ಎಸ್ಕೇಪಾದರೆ ಸಾಕು ಅನ್ನೋಹಾಗೆ ಪಲಾ ಮಾಡಿಸಿಬಿಡುತ್ತಾರೆ. ಅಸಲಿ ವಿಷಯ ಏನಂದ್ರೆ, ಕ ಒರಿಜಿನಲ್ ಕರೆನ್ಸಿ ಮಾಚಂಗೋ ಗ್ಯಾಂಗ್ ತಲ ಸಮಯಕ್ಕೆ ಅಲ್ಲಿಗೆ ಬಂದಿಳಿಯುವ ಪೊಲೀಸ್ ವ್ಯಾ ಅಥವಾ ಅದರೊಳಗಿರುವ ಖಾಕಿಮಂದಿಯಾಗಲಿ ನಿಜ ಪೊಲೀಸರೇ ಅಲ್ಲ! ಪೊಲೀಸ್ ಡ್ರೆಸ್‌ನಲ್ಲಿ ‘ಮಾಚಂಗೋ’ ಟೀಮಿನ ಕದೀಮರು!! ನಕಲಿ ಪೊ ಆಟ ಆಡಲೆಂದೇ ಈ ಮಾಚಂಗೋ ಗ್ಯಾಂಗ್‌ನ ಡುಮ್ಮಾ ಸೂರಿ ನೇತೃತ್ವದ ಹದಿನೈದು ಜನರ ಟೀ ಮಾರ, ಗೋಪಿ, ಚಂದ್ರ ಈ ಮೂರೂ ಡಬ್ಲಿಂಗ್ ಗ್ಯಾ ಬಳಕೆಯಾಗೋದು ಇದೇ ನಕಲಿ ಪೊಲೀಸ್ ಟೀ

ಹೀಗೆ ಒಮ್ಮೆ ಒರಿಜಿನಲ್ ಹಣ ಇವರ ಕೈಸೇ ಮುಗಿಯಿತು. ಆಮೇಲೆ ಅತ್ತ ಹಣವೂ ಇಲ್ಲ, ಖೋಟಾನೋಟೂ ಇಲ್ಲ ಹಾಗೆ ಮಾಡಿಬಿಡು ಮೊದಲೇ ಅದು ಕರಾಳ ದಂಧೆಯಾದ್ದರಿಂದ ಪೊ ಕಂಪ್ಲೆಂಟ್ ಕೊಡುವ ಹಾಗಿಲ್ಲ. ಹೇಳಿಕೇಳಿ ಇವರು ಕುದುರಿಸೋದು ದೂರದ ರಾಜ್ಯಗಳ ಕದೀಮರ ಅಲ್ಲಿಂದ ಅವರು ದಂಡುದಾಳಿ ಸಮೇತ ಬಂದು ಅ ಮಾಡುವ ಧೈರ್ಯವೂ ಅವರಿಗಿರುವುದಿಲ್ಲ, ವ್ಯ ಗಪ್‌ಚುಪ್ ಆಗಿಬಿಡುತ್ತೆ. ಹೀಗೆ ಮಾಡಿಯೇ ಚಿತ್ರ ಬಸವೇಶ್ವರ ಮೆಡಿಕಲ್ ಕಾಲೇಜಿನ ಅಡುಗೆ ಭಟ್ಟನ ಲಕ್ಷ ಮಾರ ಯಾಮಾರಿಸಿರುವ ವರ್ತಮಾ ಕೇಳಿಬರುತ್ತಿದೆ. ಮಾನದ ಪ್ರಶ್ನೆ, ಜೊತೆಗೆ ಕಳೆದುಕೊಳ್ಳುವ ಭಯದಿಂದ ಭಟ್ಟ ಭಾನಗಡಿಯನ್ನು ಬಂ ಮಾಡಲು ಹೋಗಿಲ್ಲ. ‘ಮಾಚಂಗೋ’ ಗ್ಯಾಂಗ್ ನಡೆ ಇಂಥಾ ವಂಚನೆಗಳಿಗೆ ಲೆಕ್ಕವೇ ಇಲ್ಲ.

ಅಂದರ್ ಆಗಿದ್ದ ಮಾರ

ಉತ್ತರ ಪ್ರದೇಶದ ವಿಕ್ಕಿ ಶ್ರೀವಾತ್ಸವನಿಗೂ




ಡಬ್ಲಿಂಗ್ ಮಾರ ಮತ್ತು ಹೋಂ ಮಿನಿಸ್ಟ್ರ ಪರಮೇಶ್ವರ!


ಚಿತ್ರದುರ್ಗದಲ್ಲಿ ಮಾಚಂಗೋ (ಮಾರ-ಚಂದ್ರ-ಗೋಪಿ) ಗ್ಯಾಂಗಿನದೇ ಹವಾ. ಈ ಮೂವರಿಗೂ ರಾಜಕಾರಣಿಗಳ ಶ್ರೀರಕ್ಷೆಯಿದೆ.


ಉದಾಹರಣೆಗೆ: ಕೈ ಪಾರ್ಟಿಯ ರಾಜ್ಯಾಧ್ಯಕ್ಷ ಡಾ.ಜಿ. ಪರಮೇಶ್ವರ್ ಆದಾಗ ತಾನೇ ಗೃಹಮಂತ್ರಿ ಹುದ್ದೆ ಅಲಂಕರಿಸಿದ್ದ ಸಂದರ್ಭ ಅದು. ಯಾವುದೋ ಕಾರ್ಯಕ್ರಮ ನಿಮಿತ್ತ ಪರಮೇಶ್ವರ ಸಾಹೇಬರು ದುರ್ಗಕ್ಕೆ ಭೇಟಿ ನೀಡಿದ್ದರು. ಆಗ ಅವರು ನೇರವಾಗಿ ಚಿತ್ರದುರ್ಗದ ಸರ್ಕಾರಿ ಆಸ್ಪತ್ರೆಗೆ ಬಂದು ಬೆಡ್ ಒಂದರಲ್ಲಿ ಮಲಗಿದ್ದ ರೋಗಿಯನ್ನು ಬಹಳ ಆಸ್ಥೆಯಿಂದ ವಿಚಾರಿಸಿದ್ದರು. ಆ ರೋಗಿ ಬೇರಾರೂ ಅಲ್ಲ, ಡಬ್ಲಿಂಗ್ ಮಾರನ ಮಗ! ಅಪ್ಪನಂತೆಯೇ ಯಾವುದೋ ಅಪರಾತಪರಾ ವ್ಯವಹಾರಕ್ಕೆ ಕೈಹಾಕಿ ಎದುರಾಳಿಗಳಿಂದ ಹಿಗ್ಗಾಮುಗ್ಗ ಏಟು ತಿಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮಾರನ ಮಗನನ್ನು ಗೃಹಮಂತ್ರಿಗಳು ವಿಚಾರಿಸಲು ಹೋಗಿದ್ದುದು ಎಲ್ಲರ ಹುಬ್ಬೇರುವಂತೆ ಮಾಡಿತ್ತು.


ಅಸಲಿಗೆ ಮಾರ ಯಾರು, ಆತನ ಮಗ ಯಾಕೆ ಆಸ್ಪತ್ರೆ ಸೇರಿದ್ದಾನೆ ಎಂಬ ಸಂಗತಿಗಳು ಪರಮೇಶ್ವರರಿಗೆ ಗೊತ್ತಿರಲಿಕ್ಕೆ ಸಾಧ್ಯವಿರಲಿಲ್ಲ, ಆದರೂ ಒಳಮರ್ಮ ಏನೆಂದರೆ ಪರಮೇಶ್ವರರನ್ನು ಕರೆತಂದದ್ದು ಮಾಜಿ ಶಾಸಕ ಎಸ್.ಕೆ. ಬಸವರಾಜನ್. ಇದು ದುರ್ಗದ ತುಂಬಾ ಚರ್ಚೆಗೆ ಗ್ರಾಸವಾಗಿತ್ತು. ಈ ಮಾರ-ಗೋಪಿ-ಚಂದ್ರ ಎಂಬ ಮಸೆಮುರುಕರಿಗೆ ಎಸ್.ಕೆ. ಬಸವರಾಜನ್ ಮತ್ತು ಅವನ ಹೆಂಡತಿ ಹಾಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಸೌಭಾಗ್ಯ ದಂಪತಿಗಳು ಬೆಂಗಾವಲಾಗಿರೋದು ಆದರಿಂದ ಸಾಬೀತಾಗಿತ್ತು.

ಇನ್ನು ಕಾಂತರಾಜನಂತು ಈ ತ್ರಿಮೂರ್ತಿಗಳ ಪಾಲಿಗೆ ನಗರಸಭೆಯ ರಾಜಕಾರಣದ ಮಟ್ಟಿಗೆ ಗಾಡ್‌ಫಾದರ್. ತಮ್ಮ ಡಬ್ಲಿಂಗ್ ದಂಧೆಗೋಸ್ಕರ ಎಂಥಾ ದುಸ್ಸಾಹಸಕ್ಕೂ ಕೈಹಾಕಲು ರೆಡಿ. ಇದೇ ಮಾರ ‘ನಮ್ಮ ಕೆಲಸಕ್ಕೆ ಅಡ್ಡಿ ಬರುವುದಾದರೆ ಜಿಲ್ಲೆಯ ಎಸ್‌ಪಿ ಅನುಚೇತ್‌ರನ್ನು ಎತ್ತಂಗಡಿ ಮಾಡಲು ಒಂದು ಕೋಟಿ ತೆರಲೂ ಸಿದ್ಧ’ ಅಂತ ಅನುಚೇತ್ ಹೊಸದಾಗಿ ಬಂದಾಗ ಮಾತಾಡಿಕೊಂಡು ತಿರುಗಾಡುತ್ತಿದ್ದ. ಆದರೆ ಡಿವೈಎಸ್ಪಿ ಕವಳಪ್ಪ ಮಾರನಿಗೆ ಅಂತ ರಿಸ್ಕನ್ನೇ ಕೊಡಲಿಲ್ಲ. ಸದ್ಯ ಮಾರ-ಗೋಪಿ-ಚಂದ್ರರು ಚಿತ್ರದುರ್ಗದ ರಾಜಕಾರಣದಲ್ಲಿ ಮಿಂಚಲು ಶುರುವಾಗಿದ್ದಾರೆ. ಇಂಥಾ ಪಾತಕಿಗಳು ದುರ್ಗದ ಚುನಾಯಿತ ಪ್ರತಿನಿಧಿಗಳು ಅನ್ನೋದ ಪ್ರಸ್ತುತ ರಾಜಕಾರಣದ ದುರಂತ ವಾಸ್ತವ!


ಎಸ್.ಕೆ. ಬಸವರಾಜನ್


ಸೌಭಾಗ್ಯ ಬಸವರಾಜನ್


ಕಾಂತರಾಜ್



ಡುಮ್ಮ ಸೂರಿ

ದೇರೀತಿ ನಾಮ ತೀಡಿದ್ದ. ನಾಲ್ಕು ಲಕ್ಷ ಸಾಚಾ ಕರೆನ್ಸಿಗೆ ದಲಾಗಿ 15 ಲಕ್ಷ ಖೋಟಾನೋಟು ನೀಡ್ತೀನಿ ಅಂತ ೀಲ್ ಕುದುರಿಸಿಕೊಂಡಿದ್ದ ಮಾರನ ಗುಂಪು ತಮ್ಮ ಥಾಕಥಿತ ಶೈಲಿಯ ಡ್ರಾಮಾ ಮಾಡಿ ಅವರಿಂದ ರಿಜಿನಲ್ ಹಣವನ್ನು ಎಗರಿಸಿಕೊಂಡು ಬಂದಿತ್ತು. ಹಾಗೆ ಂದ ಸಾಚಾನೋಟಿಗೆ ಬದಲಾಗಿ ನಕಲಿ ನೋಟು ೀಡುವುದು ತಡವಾಗಿದ್ದಲ್ಲದೇ ಮಾರ ಉಡಾಫೆ ಉತ್ತರ ೊಟ್ಟಿದ್ದರಿಂದ ರೋಸಿಹೋದ ವಿಕ್ಕಿ ಶ್ರೀವಾತ್ಸವ್ ತನ್ನ ಹಚರ ಶಾರುಕ್ ಅಹ್ಮದ್ ಜೊತೆಗೂಡಿ ಪಕ್ಕಾ ಬಿಹಾರಿ ್ಯಲಿನಲ್ಲಿ ಮಾರಣ್ಣನ ಮಾರಣಹೋಮ ನಡೆಸಲು ಂದೂಕು ಸಮೇತ ದಾಳಿ ಮಾಡಿದ್ದ. ಮಾರ ಇಂತಹ ಂಧೆಗಳಲ್ಲಿ ಅದೆಂತಹ ಪಳಗಿದ ಕೈ ಎನ್ನುವುದಕ್ಕೆ ಅವತ್ತು ಕ್ಕಿ ಮತ್ತವನ ಸಂಗಡಿಗರು ಮಾರನ ಮನೆಯಿಂದ ಪಟಾಯಿಸಿಕೊಂಡು ಬಂದಿದ್ದ ಹಣದ ಸೂಟ್‌ಕೇಸೇ ತ್ಯಕ್ಷ ಸಾಕ್ಷಿ. ಯಾಕೆಂದರೆ ಯಾವ ಸೂಟ್‌ಕೇಸ್‌ನ ತುಂಬಾ ರಿಗರಿ ನೋಟುಗಳು ತುಂಬಿಕೊಂಡಿವೆಯೆಂದು ವಿಕ್ಕಿ ೀಮು ಎಗರಿಸಿತ್ತೋ ಆ ಸೂಟ್‌ಕೇಸ್‌ನಲ್ಲಿ ಇದ್ದದ್ದು ವಿರ ರೂಪಾಯಿ ನೋಟಿನ ಸೈಜಿಗೆ ಕಟ್‌ಮಾಡಿಟ್ಟಿದ್ದ ಳಿಹಾಳೆಯ ಬಂಡಲ್‌ಗಳು! ಪ್ರತಿ ಬಂಡಲ್‌ನ ಮೇಲೆ ಂದೊಂದು ಒರಿಜಿನಲ್ ಸಾವಿರ ರೂಪಾಯಿ ನೋಟನ್ನಿಟ್ಟು ೂರಿಗೋ ಯಾಮಾರಿಸಲೆಂದು ಮಾರ ಸಿದ್ಧಮಾಡಿಟ್ಟು ೊಂಡಿದ್ದ ಸೂಟ್‌ಕೇಸ್ ಅದಾಗಿತ್ತು. ತರಾತುರಿಯಲ್ಲಿ ವಿಕ್ಕಿ ದನ್ನು ಗಮನಿಸಲಾಗದೆ ಅಸಲೀ ನೋಟೆಂದು ಗರಿಸಿಕೊಂಡು ಬಂದು ಪೊಲೀಸರ ಅತಿಥಿಯಾಗಿದ್ದಾನೆ.

ಇಂಥಾ ಖತರ್ನಾಕ್ ದಂಧೆಯಲ್ಲೇ ಕಾಸು ಾಡಿಕೊಂಡಿರುವ ಈ 'ಮಾಚಂಗೋ' ಖದೀಮರು ಆ ಹಣವನ್ನೆಲ್ಲ ತಮ್ಮ ಪೊಲಿಟಿಕಲ್ ತೆವಲಿಗೆ ಚೆಲ್ಲಾಡುತ್ತಿದ್ದಾರೆ. ಚಂದ್ರ ಅಂತದ್ದೇ ಹಣದಿಂದ ಜೆಡಿಎಸ್ ಪಕ್ಷದಿಂದ ಗೆದ್ದು ನಗರಸಭಾ ಸದಸ್ಯನಾಗಿದ್ದಲ್ಲದೇ ಸ್ಥಾಯಿ ಸಮಿತಿ ಅಧ್ಯಕ್ಷನಾಗಿಯೂ ಠಳಾಯಿಸಿದ್ದರೆ, ಗೋಪಿ ಕೂಡಾ 34ನೇ ವಾರ್ಡಿನಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ. ಆದರೆ ವಿಜಯಲಕ್ಷ್ಮಿ ಅವನ ಕೈಹಿಡಿಯಲಿಲ್ಲ. ಮಾರ ನೇರ ಚುನಾವಣೆಗೆ ಸ್ಪರ್ಧಿಸದಿದ್ದರೂ ದುರ್ಗದ ಬಹುಪಾಲು ಪೊಲಿಟಿಕಲ್ ಲೀಡರ್‌ಗಳಿಗೆ ಬೇನಾಮಿ ಫೈನಾನ್ಷಿಯರ್!

ಅಂದಹಾಗೆ, ಇದೇ ಮಾರನನ್ನು ಹಿಂದೊಮ್ಮೆ ಮುಂಬೈ ಪೊಲೀಸರು ಅರೆಸ್ಟ್ ಮಾಡಿ ಆರು ತಿಂಗಳು ಜೈಲಿಗೆ ಗದುಮಿದ್ದರು. ಮುಂಬೈ ಮಹಾನಗರದ ಬ್ಯಾಂಕೊಂದರ ಎಟಿಎಂಗೆ ಹಣ ತುಂಬುವ ಗುತ್ತಿಗೆ ಪಡೆದಿದ್ದವನೊಬ್ಬ ಮಾರನ ಡಬ್ಲಿಂಗ್ ದಂಧೆಗೆ ಬಲಿಯಾಗಿ ಎಟಿಎಂಗೆ ಹಾಕುವ ಹತ್ತು ಲಕ್ಷ ಹಣವನ್ನು ಮಾರನ ಕೈಗಿಟ್ಟಿದ್ದ. ಅವನಿಗೆ ಐವತ್ತು ಲಕ್ಷ ಮೌಲ್ಯದ ಖೋಟಾನೋಟು ಕೊಡ್ತೀನಿ ಅಂತ ಮಾರ ಯಾಮಾರಿಸಿದ್ದ. ಎಟಿಎಂಗೆ ತುಂಬಬೇಕಿದ್ದ ಹಣ ನಾಪತ್ತೆಯಾದ್ದರಿಂದ ಬ್ಯಾಂಕ್‌ನವರು ಕೊಟ್ಟ ಕಂಪ್ಲೆಂಟ್ ಮೇಲೆ ತನಿಖೆ ಶುರು ಮಾಡಿದ್ದ ಮುಂಬೈ ಪೊಲೀಸರು ಸೀದಾ ಬಂದು ನಿಂತದ್ದು ದುರ್ಗದ ಮಾರನ ಮನೆಯ ಮುಂದೆ. ಹಾಗೆ ಬಂದವರು ಮಾರನನ್ನು ಅರೆಸ್ಟ್ ಮಾಡಿ 6 ತಿಂಗಳು ಮುಂಬೈ ಜೈಲಿನಲ್ಲಿ ಚೆನ್ನಾಗಿ ರುಬ್ಬಿದ್ದರು. ರಿಲೀಸ್ ಆಗಿ ಬಂದ ಮಾರ, ಜಾಲಿ ಟ್ರಿಪ್ ಹೋಗಿಬಂದವನಂತೆ ಮೆರೆದಾಡಿದ್ದು ವಿಪರ್ಯಾಸದ ಸಂಗತಿ.


ಎಸ್ಪಿ ಅನುಚೇತ್


ಡಿವೈಎಸ್ಪಿ ಕವಳಪ್ಪ

'ಮಾಚಂಗೋ' ಗ್ಯಾಂಗಿನ ಭರಪೂರ ಆಮದನಿಯನ್ನು ಕಂಡು ಮಾರುಹೋಗಿರುವ ನರಸಿಂಹ ಎಂಬ ಇನ್ನೊಬ್ಬ ಮನೆಮುರುಕ ತನ್ನ ಹೊಸ ಅಡ್ಡೆಯನ್ನು ತೆರೆಯುತ್ತಿರುವ ಸುದ್ದಿಯೂ ಕೇಳಿಬರುತ್ತಿದೆ. ದುರ್ಗದಲ್ಲಿ ಈಗಾಗಲೇ ಈ ಮೂವರ ನೆಟ್‌ವರ್ಕ್ ಬಲಾಢ್ಯವಾಗಿ ಬೆಳೆದಿರುವುದರಿಂದ ಅವರ ಎದುರು ಸ್ಪರ್ಧಿಸಲಾಗದ ನರಸಿಂಹ ದಾವಣಗೆರೆಯ ಚೇತನಾ ಹೊಟೇಲ್ ರೂಂನಲ್ಲಿ ತನ್ನ ದಂಧೆ ಶುರುಹಚ್ಚಿದ್ದಾನೆ. ಇತ್ತೀಚೆಗೆ ಇವನ ಚಿತ್ರದುರ್ಗದ ಮನೆಗೆ ನುಗ್ಗಿದ ಪೊಲೀಸರು ನರಸಿಂಹನ ಮಗ ಯಶವಂತನನ್ನು ಬಂಧಿಸಿದರಾದರೂ ನಂತರ ಕೇಸು ಹಳ್ಳಹಿಡಿದದ್ದು ಯಾರಿಗೂ ಗೊತ್ತಾಗಲೇ ಇಲ್ಲ.

ಸತ್ತುಬಿದ್ದ ಪೊಲೀಸ್ ವ್ಯವಸ್ಥೆ

ಚಿತ್ರದುರ್ಗದಲ್ಲಿ ಇಷ್ಟೆಲ್ಲಾ ದಂಧೆಗಳು ನಡೆಯುತ್ತಿದ್ದರೂ ಪೊಲೀಸರು ಕೈಕಟ್ಟಿ ಕೂತಿರುವುದನ್ನು ನೋಡಿದರೆ ಜಿಲ್ಲೆಯಲ್ಲಿ ಎಸ್ಪಿ ಇದ್ದಾರಾ ಎನ್ನುವ ಅನುಮಾನ ಕಾಡುತ್ತೆ. ಹಾಡುಹಗಲೇ ಉತ್ತರ ಪ್ರದೇಶದ ಪಾತಕಿಗಳು ಮಾರನ ಮನೆಗೆ ನುಗ್ಗಿ ಬಂದೂಕು ಹಿಡಿದು ಬೆದರಿಕೆ ಹಾಕಿ ದರೋಡೆಗೆ ಯತ್ನಿಸಿರುವುದು ಸಣ್ಣ ವಿಷಯವೇನಲ್ಲ. ಮಾರ ಇಂಥವನೆನ್ನುವುದು ಇಲಾಖೆಗೆ ಮೊದಲೇ ಗೊತ್ತಿತ್ತು, ಆದರೂ ಅವನ ಮೇಲೆ ಕ್ರಮಕೈಗೊಳ್ಳದೇ ಇದ್ದದ್ದೇ ಇದಕ್ಕೆಲ್ಲ ಕಾರಣ. ಈಗಲಾದರೂ ಪೊಲೀಸರು ಎಚ್ಚೆತ್ತುಕೊಳ್ಳದಿದ್ದರೆ 'ಮಾಚಂಗೋ' ಲಂಪಟರು ಅದ್ಯಾರ್ಯಾರನ್ನು ವಂಚಿಸಿದ್ದಾರೋ ಆ ಅಂತರರಾಜ್ಯ ಕುಖ್ಯಾತರೆಲ್ಲ ದುರ್ಗಕ್ಕೆ ನುಗ್ಗಿ ಜಿಲ್ಲೆಯ ಕಾನೂನು ಸುವ್ಯವಸ್ಥೆಯನ್ನೇ ಹಾಳುಗೆಡವುದರಲ್ಲಿ ಸಂಶಯವೇ ಇಲ್ಲ. ವಿಕ್ಕಿ ಶ್ರೀವಾತ್ಸವ್ ಟೀಮ್‌ನ ದಾಳಿಯನ್ನು ದರೋಡೆ ಅಂತ ಪೊಲೀಸರು ಸದ್ಯಕ್ಕೆ ಇತಿಶ್ರೀ ಹಾಡಬಹುದು, ಆದರೆ ಆ ಪ್ರಕರಣ ಮುಂಬರುವ ಭಯಾನಕ ಅನಾಹುತಗಳ ಮುನ್ನೆಚ್ಚರಿಕೆ ಅನ್ನೋದನ್ನು ಪೊಲೀಸರು ಮರೆಯಬಾರದು.

ಚಿತ್ರದುರ್ಗದ ಮಾರನಿಗೂ ಉತ್ತರ ಪ್ರದೇಶದ ನಟೋರಿಯಸ್ ಕ್ರಿಮಿನಲ್‌ಗಳಿಗೂ ಏನಂತಾ ನಂಟು ಎನ್ನುವ ಸಣ್ಣ ಎಳೆಯೊಂದರ ಮೇಲೆ ತನಿಖೆ ಮುಂದುವರೆಸಿದ್ದೇ ಆದಲ್ಲಿ ಬಲಾಢ್ಯ ಖೋಟಾನೋಟಿನ ಜಾಲವನ್ನೇ ದುರ್ಗದ ಪೊಲೀಸರು ಚಿತ್ತಲಾಗಿಸಬಹುದು. ಆದರೆ ಅಷ್ಟೆಲ್ಲಾ ರಿಸ್ಕು ಯಾವಾನಿಗ್ರಿ ಬೇಕು ಅನ್ನೋ ಶೈಲಿಯಲ್ಲಿ ಕೋಟೆ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಮಂಜುನಾಥ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಫಯಾಝುಲ್ಲಾರು ಮಾತನಾಡುತ್ತಿದ್ದಾರೆ. ಅಸಲಿಗೆ ಅವ್ಯಾವುವೂ ಅವರ ಬಾಯಿಂದ ಹೊರಬೀಳುತ್ತಿರುವ ಮಾತುಗಳಲ್ಲ. ಡಿವೈಎಸ್‌ಪಿ ಕವಳಪ್ಪ ಆಡಿಸುತ್ತಿರುವ ಮಾತುಗಳು. ಚಿತ್ರದುರ್ಗದಲ್ಲಿ ಎಂತೆಂಥಾ ಮನೆಮುರುಕ ದಂಧೆಗಳು ನಡೆಯುತ್ತವೆ, ಯಾವ ಏರಿಯಾದಲ್ಲಿ ಎಂಥಾ ಪಾತಕಿ ಆಕ್ಟೀವ್ ಆಗಿದ್ದಾನೆ ಎನ್ನುವ ಇಂಚಿಂಚು ಮಾಹಿತಿಯೂ ಈ ಕವಳಪ್ಪನಿಗೆ ಗೊತ್ತು. ಹಾಗೆ ನೋಡಿದರೆ ಮಾರ-ಗೋಪಿ-ಚಂದ್ರರ ಮೇಲೆ ಮುಗಿಬಿದ್ದ ಹೊರರಾಜ್ಯದ ಪಾತಕಿಗಳು ಮತ್ತು ಈ ಗುಂಪುಗಳ ನಡುವೆ ಡಿವೈಎಸ್‌ಪಿ ಕವಳಪ್ಪ ರಾಜಿ ಪಂಚಾಯ್ತಿ ಮಾಡುವ ದಂಡನಾಯಕನ ಕೆಲಸ ನಿರ್ವಹಿಸುತ್ತಿದ್ದಾನೆ.


ಚಿತ್ರದುರ್ಗದ ನಗರ ದೇವತೆ ಉಚ್ಚಂಗಿ ಎಲ್ಲಮ್ಮನ ಗುಡಿಯ ಹತ್ತಿರವೇ ಚಂದ್ರ ಅಲಿಯಾಸ್ ಡಬ್ಲಿಂಗ್ ಚಂದ್ರನ ಮನೆಯ ಮೇಲೆ ಆಗಾಗ ಪೊಲೀಸರು ಕರ್ತವ್ಯಪ್ರಜ್ಞೆಯ ನೆಪದಲ್ಲಿ ರೇಡು ಬೀಳುವುದು ಬಿಟ್ಟರೆ ಇದುವರೆಗು ಯಾರನ್ನೂ ಜೈಲಿಗಟ್ಟಿಲ್ಲ. ಒಂದೆರಡು ಪ್ರಕರಣಗಳಲ್ಲಿ 'ಮಾಚಂಗೋ' ಗ್ಯಾಂಗಿನಿಂದ ನಾಮ ತೀಡಿಸಿಕೊಂಡ ಆಂಧ್ರದ ದಂಧೆವಾಲಾಗಳು ಮಾರ-ಚಂದ್ರನ ಮನೆ ಮೇಲೆ ದಾಳಿ ಮಾಡಿದ್ದ ಘಟನೆಗಳನ್ನು ಸುದ್ದಿಯಾಗದಂತೆ ಮುಚ್ಚಿಹಾಕುವಲ್ಲಿ ತೋರಿದ ಅರ್ಧದಷ್ಟಾದರು ಬದ್ಧತೆಯನ್ನು ಅವರನ್ನು ಮಟ್ಟಹಾಕುವಲ್ಲಿ ತೋರಿಸಿದ್ದರೆ ಇಷ್ಟೊತ್ತಿಗಾಗಲೆ 'ಮಾಚಂಗೋ' ಗ್ಯಾಂಗು ಮನೆ ಸೇರುತ್ತಿತ್ತು.

ಇನ್ನು ಹೆಸರಿಗೆ ಅನುಚೇತ್ ಎಂಬ ಹೆಸರಿನ ಎಸ್‌ಪಿ ಚಿತ್ರದುರ್ಗ ಜಿಲ್ಲೆಯಲ್ಲಿದ್ದಾರಾದರು ಬಹುತೇಕ ಜನರಿಗೆ ಅವರ ಬಗ್ಗೆ ಹೆಚ್ಚಿನ ಮಾಹಿತಿಯೇ ಇಲ್ಲ. ಹಾಗಂತ ಅವರೇನೂ ಭ್ರಷ್ಟರಲ್ಲ. ಪ್ರಾಮಾಣಿಕ ವ್ಯಕ್ತಿಯಾದರು ಅವರ ಮೃದು ಸ್ವಭಾವವೇ ಅವರ ವೃತ್ತಿಗೊಂದು ವೀಕ್ನೆಸ್. ಅದನ್ನೇ ತನ್ನ ಬಂಡವಾಳ ಮಾಡಿಕೊಂಡಿರುವ ಸಿರಿಗೆರೆ ಸಾಧು-ಸದ್ಧರ್ಮ ಮಠದ ವಾಚ್‌ಮನ್ ಡಿವೈಎಸ್‌ಪಿ ಕವಳಪ್ಪ ಎಸ್‌ಪಿಗೆ ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೇ ಬಿಡುತ್ತಿಲ್ಲ. ಹಾಗೆ ನೋಡಿದರೆ, ಎಸ್‌ಪಿ ಅನುಚೇತ್ ಪ್ರಭಾವಿ ಕುಟುಂಬದ ವ್ಯಕ್ತಿ. ಅವರ ತಂದೆ ಐ.ಜಿ.ಪಿ.ಯಾಗಿದ್ದ ನಾರಾಯಣಗೌಡರು, ಅಲ್ಲದೇ ದೇವೇಗೌಡರ ಪರಮಾಪ್ತರು. ಅಂಥವರನ್ನೂ ಈ ಕವಳಪ್ಪ ಓವರ್‌ಟೇಕ್ ಮಾಡಿದ್ದಾನೆಂದರೆ ಏನೆನ್ನಬೇಕು.


■ ಟಿ.ಎನ್. ಷಣ್ಮುಖ



ವಿಕೃತ ವಿಮಾ ಯೋಜನೆಯೂ ರೈತರಿಗೆ ಮೋದಿ ಮೋಸವೂ!


ಮೋದಿ

ಆಳುವ ಖೂಳರು ಬೆಳೆ ವಿಮೆ ಜಾರಿಗೊಳಿಸುವಾಗ ರೈತರನ್ನು ಮತ್ತು ಸಾಲ ಕೊಡುವ ಸಹಕಾರ ಸಂಘಗಳನ್ನು ಕಡೆಗಣಿಸಿ ಕತ್ತಲಲ್ಲಿಟ್ಟು ಕಾರ್ಯಾಚರಣೆ ನಡೆಸಿದ್ದಾರೆ. ರೈತರಿಗೆ-ಸಹಕಾರ ಸಂಘಗಳಿಗೆ ಪಿಎಂ ಫಸಲ್ ಬಿಮಾದ ತಲೆಬುಡವೇ ಗೊತ್ತಾಗುತ್ತಿಲ್ಲ. ಕೃಷಿ ಬೆಳೆಗಳಾದ ಭತ್ತ, ರಾಗಿ, ಜೋಳ ಮುಂತಾದವುಗಳು ಮತ್ತು ವಾಣಿಜ್ಯ ಫಸಲಾದ ಅಡಿಕೆ, ಕಾಳುಮೆಣಸು, ಮಾವು, ಕಂದುಬಾಳೆ, ಅಂಗಾಂಶ ಬಾಳೆ, ಶುಂಠಿ ವಿಮಾ ಲಿಸ್ಟ್‌ನಲ್ಲಿ ನಮೂದಿಸಲಾಗಿದೆ. ಕಿಸಾನ್ ಕ್ರೆಡಿಟ್ ಕಾರ್ಡ್ (ಬೆಳೆ ಸಾಲ) ಪಡೆವ ರೈತರಿಗೆ ಈ ವಿಮೆ ಕಡ್ಡಾಯ; ಸಾಲ ಪಡೆಯದವರಿಗೆ ಐಚ್ಛಿಕ ಮಾಡಲಾಗಿದೆ. ಏಕಾಏಕಿ ಬೆಳೆ ಸಾಲಕ್ಕೆ ವಿಮೆ ಕಡ್ಡಾಯ ಮಾಡಿ ಯೋಜನೆ ಹೇರಿರುವುದು ರೈತರನ್ನು ಕಂಗಾಲಾಗಿಸಿಬಿಟ್ಟಿದೆ; ಸಹಕಾರ ಸಂಘಗಳಿಗಂತೂ ದಿಕ್ಕೇ ತೋಚದಂತಾಗಿದೆ.


ಕೃಷ್ಣಬೈರೇಗೌಡ

ಮೋದಿ ಮಹಾತ್ಮ ಮತ್ತಾತನ ಸಂಘ ಪರಿವಾರ ಸದಾ ಹೇಳೋದು ಒಂದು; ಮಾಡೋದು ಮಾತ್ರ ಮತ್ತೊಂದು. 'ಮೇಕ್ ಇನ್ ಇಂಡಿಯಾ' ಎಂದು ಗಂಟಲು ಹರಿವಂತೆ ಬೊಂಬಡಾ ಬಜಾಯಿಸುತ್ತಿರುವ ಪ್ರಧಾನಿ ಮೋದಿ ವಿದೇಶಿ ಅಡಿಕೆ ಆಮದು ಮಾಡಿಕೊಳ್ಳುತ್ತ ದೇಶಿ ತೋಟಿಗರಿಗೆ ನೇಣು ಬಿಗಿಯುತ್ತಿರುವುದು ಜಗಜ್ಜಾಹೀರಾಗಿ ಹೋಗಿದೆ. ಈ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ -ಪ್ರಧಾನ ಮಂತ್ರಿ ಫಸಲ್ ಬಿಮಾ- ಮೂಲಕ ಮೋದಿಯ ಮತ್ತೊಂದು ರೈತ ವಿರೋಧಿ ಮುಖವಾಡ ಕಳಚಿ ಬಿದ್ದಿದೆ.

ನಿರಂತರ ವಿದೇಶ ನೆಗೆದಾಟದಲ್ಲಿ ನಿರತನಾಗಿರುವ ಈ ಶೋಕಿಲಾಲ ದೇಶದ ರೈತರ ನಾಡಿಮಿಡಿತ ಅರಿವ ಸಣ್ಣ ಪ್ರಯತ್ನವೂ ಮಾಡುತ್ತಿಲ್ಲ. ಆತನೆಂದೂ ಕಾರ್ಪೊರೇಟ್ ಲಾಬಿಯ ಪಕ್ಷಪಾತಿಯೇ ಹೊರತು ದೇಶದ ಬೆನ್ನೆಲುಬಾದ ರೈತ ಹಿತ ರಕ್ಷಕನಲ್ಲ ಎಂಬುದಕ್ಕೆ ತೀರಾ ಮೊನ್ನೆ-ಮೊನ್ನೆಯಷ್ಟೇ ಘೋಷಣೆಯಾಗಿರುವ ಫಸಲು ವಿಮಾ ಯೋಜನೆ ಒಂದೇ ಸಾಕು! ಅಸಹಾಯಕ-ಅಮಾಯಕ ರೈತರಲ್ಲಿ ಹಲವು ಆಸೆ-ಭರವಸೆ ಮೂಡಿಸಿದ್ದ ಬಹು ನಿರೀಕ್ಷಿತ ಈ ವಿಮಾ ಯೋಜನೆ ಕೃಷಿಕರ ಸುಲಿದು ವಿಮಾ ಕಂಪನಿ ಕೊಬ್ಬಿಸುವ ಅಪ್ಪಟ ರೈತ ವಿರೋಧಿ ಕಾರ್ಯಕ್ರಮದಂತಿದೆ!

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಮತೂಕ ಸಹಯೋಗದ ಯೋಜನೆಯಿದು. ಇದಕ್ಕೆ ಪಿಎಂ-ಸಿಎಂ ಫಸಲು ಬಿಮಾ ಯೋಜನೆ ಎಂದು ಹೆಸರಿಡುವುದು ಯಥೋಚಿತವಾಗಿತ್ತು, ಆದರದು ಮೋದಿ ರಾಜಕೀಯ ಬಿಡಿ. ಆದರೆ ರೈತರಿಗೆ ಸ್ವರ್ಗ ತೋರಿಸುವ ತಂತ್ರಗಾರಿಕೆಯ ಸದ್ರಿ ವಿಮಾ ಯೋಜನೆಯಿಂದ ಪ್ರಾಕೃತಿಕ ಅನಿಶ್ಚಿತತೆಯಲ್ಲಿ ತೂಗಾಡುತ್ತಿರುವ ಭಾರತದ ಕೃಷಿಕ ವರ್ಗಕ್ಕೇನಾದರೂ ಪ್ರಯೋಜನವಿದೆಯಾ ಎಂದರೆ, ಊಹುಂ.... ಅದೂ ಇಲ್ಲ! ಸುಳ್ಳನ್ನು ಆಕರ್ಷಕವಾಗಿ ಮಾರ್ಕೆಟ್ ಮಾಡುವ ಕುಕಲಾ ಪಂಡಿತ ಮೋದಿಯ ಫಸಲು ವಿಮಾ ಯೋಜನೆ ಹೊರನೋಟಕ್ಕೆ ಅದ್ಭುತ ರೈತೋದ್ಧಾರದ ಪರಿಕಲ್ಪನೆಯಂತೆ ಭಾಸವಾಗುತ್ತದೆ! ಕೃಷಿ ಮತ್ತು ತೋಟಗಾರಿಕಾ ಬೆಳೆಗಳೆರಡಕ್ಕೂ ಅನ್ವಯವಾಗುವ ಈ ಮೋದಿ ಪ್ಲಾನ್‌ನ ವಿನ್ಯಾಸ ಮತ್ತು ಸಾಧಕ-ಬಾಧಕ ಸೂಕ್ಷ್ಮವಾಗಿ ಅವಲೋಕಿಸಿದರೆ ರೈತರ ಪಾಲಿಗಿದೊಂದು ಪಕ್ಕಾ ಲೊಳಲೊಟ್ಟೆ ಕಾರ್ಯಕ್ರಮ ಎಂಬುದು ಖಾತ್ರಿಯಾಗುತ್ತದೆ.

ರಾಜ್ಯ ಸರ್ಕಾರ ಸದ್ರಿ ವಿಮಾ ಯೋಜನೆಯನ್ನು ಮರು ವಿನ್ಯಾಸಗೊಳಿಸಿ ಜಾರಿಗೊಳಿಸಬಹುದಾದರೂ "ಮೋದಿ ಛಾಪು" ಅಳಿಸುವುದು ಅಷ್ಟು ಸುಲಭವೇನಲ್ಲ. ಮೋದಿ ಪುನೀತ ವಿಮಾ ಯೋಜನೆಯ ಯಾವ ಎಳೆ ಹಿಡಿದು ಎತ್ತಿಂದೆತ್ತ ಅಭ್ಯಸಿಸಿದರೂ ಇದೊಂದು ಅಪ್ರಯೋಗಿಕ, ಅಪ್ರಯೋಜಕ, ಅಸ್ಪಷ್ಟ ಮತ್ತು ಅವಸರದ ರಾಜಕೀಯ ಕಾರ್ಯಕ್ರಮ ಎಂಬುದು ನೇಗಿಲ ಯೋಗಿಗಷ್ಟೇ ಅಲ್ಲ, ಕೃಷಿತಜ್ಞರಿಗೂ ನಿಸ್ಸಂಶಯವಾಗಿ ಸಾಬೀತಾಗುವಷ್ಟು ಸರಳವಾಗಿದೆ! ಮಳೆ-ಚಳಿ-ಬಿಸಿಲಿಗೆ ಮೈಯೊಡ್ಡಿ ಮಣ್ಣು ಹೊನ್ನಾಗಿಸುವ ಕೃಷಿಕರ ಕಷ್ಟ-ನಷ್ಟ, ಲಾಭ-ಹಾನಿ ಹವಾನಿಯಂತ್ರಿತ ಕೋಣೆಯಲ್ಲಿ ಕುಳಿತು ವಿಮಾಯೋಜನೆ ಸಿದ್ಧಪಡಿಸಿರುವ ಮೋದಿ ಮತ್ತವನ ಮಂತ್ರಿ-ಅಧಿಕಾರಿ ಗಣಕ್ಕೆ ಅದ್ಹೇಗೆ ಅರ್ಥವಾದೀತು?!

ಆಳುವ ಖೂಳರು ಬೆಳೆ ವಿಮೆ ಜಾರಿಗೊಳಿಸುವಾಗ ರೈತರನ್ನು ಮತ್ತು ಸಾಲ ಕೊಡುವ ಸಹಕಾರ ಸಂಘಗಳನ್ನು ಕಡೆಗಣಿಸಿ ಕತ್ತಲಲ್ಲಿಟ್ಟು ಕಾರ್ಯಾಚರಣೆ ನಡೆಸಿದ್ದಾರೆ. ರೈತರಿಗೆ-ಸಹಕಾರ ಸಂಘಗಳಿಗೆ ಪಿಎಂ ಫಸಲ್ ಬಿಮಾದ ತಲೆ ಬುಡವೇ ಗೊತ್ತಾಗುತ್ತಿಲ್ಲ. ಕೃಷಿ ಬೆಳೆಗಳಾದ ಭತ್ತ ರಾಗಿ, ಜೋಳ ಮುಂತಾದವುಗಳು ಮತ್ತು ವಾಣಿಜ್ಯ ಫಸಲಾದ ಅಡಿಕೆ, ಕಾಳುಮೆಣಸು, ಮಾವು, ಕಂದುಬಾಳೆ, ಅಂಗಾಂಶ ಬಾಳೆ, ಶುಂಠಿ ವಿಮಾ ಲಿಸ್ಟ್‌ನಲ್ಲಿ ನಮೂದಿಸಲಾಗಿದೆ. ಕಿಸಾನ್ ಕ್ರೆಡಿಟ್ ಕಾರ್ಡ್ (ಬೆಳೆ ಸಾಲ) ಪಡೆವ ರೈತರಿಗೆ ಈ ವಿಮೆ ಕಡ್ಡಾಯ; ಸಾಲ ಪಡೆಯದವರಿಗೆ ಐಚ್ಛಿಕ ಮಾಡಲಾಗಿದೆ. ಏಕಾಏಕಿ ಬೆಳೆ ಸಾಲಕ್ಕೆ ವಿಮೆ ಕಡ್ಡಾಯ ಮಾಡಿ ಯೋಜನೆ ಹೇರಿರುವುದು ರೈತರನ್ನು ಕಂಗಾಲಾಗಿಸಿಬಿಟ್ಟಿದೆ; ಸಹಕಾರ ಸಂಘಗಳಿಗಂತೂ ದಿಕ್ಕೇ ತೋಚದಂತಾಗಿದೆ.

ಮೋದಿ ಮಾಮನ ರೈತೋದ್ಧಾರದ ಪ್ರಾಜೆಕ್ಟ್‌ನಲ್ಲಿ ದೊಡ್ಡ ದೋಷವಿದೆ. ರೈತರಿಗೆ ಲಾಭ ಆಗುವುದಿರಲಿ, ಹಾನಿಯೇ ಹೆಚ್ಚಾಗಲಿದೆ. ಸದ್ರಿ ವಿಮಾ ಯೋಜನೆಯಲ್ಲಿ ರೈತರನ್ನು ಗೊಂದಲಕ್ಕೆ- ಇಕ್ಕಟ್ಟಿಗೆ ಸಿಲುಕಿಸುವ ಷರತ್ತು-ನಿಯಮ ಅಡಿಗಡಿಗೂ ಹಾಸುಹೊಕ್ಕಾಗಿದೆ. ಬೆಳೆ ಸಾಲ ಕೊಡುವ ಸಹಕಾರ ಸಂಘಗಳಿಗೆ ವಿಮಾ ಯೋಜನೆಯ ಸುತ್ತೋಲೆ ಆದೇಶ ಬಂದಿರುವುದು ಜೂನ್ 17ಕ್ಕೆ. ವಿಮಾ ಯೋಜನೆಗೆ ಜೂನ್ 30 ಕೊನೆಯ ದಿನವಾಗಿತ್ತು, ಬೆಳೆ ಸಾಲ ನೀಡುವಾಗ ಸಹಕಾರಿ ಸಂಘಗಳು ವಿಮಾ ಕಂತನ್ನು ಮುರಿದುಕೊಂಡು ರೈತರಿಗೆ ಉಳಿದ ಹಣ ಕೊಡಬೇಕು. ಇದು ವಿಮಾ ನಿಯಮ. ಆದರೆ ಸಹಕಾರಿ ಸಂಘಗಳು ಕರಾವಳಿ-ಮಲೆನಾಡಲ್ಲಿ ಏಪ್ರಿಲ್‌ನಿಂದಲೇ ಬೆಳೆ ಸಾಲ ವಿತರಿಸುತ್ತವೆ. ಈ ಸುತ್ತೋಲೆ ಬರುವ ಹೊತ್ತಿಗೆ ಮುಕ್ಕಾಲು ಪಾಲು ಬೆಳೆ ಸಾಲ ವಿತರಣೆ ಮುಗಿದಾಗಿತ್ತು, ಈಗ ಸಾಲಗಾರರಿಂದ ವಿಮಾಕಂತು ವಸೂಲಿ ಮಾಡೋದು ಹೇಗೆಂಬ ಸಂದಿಗ್ಧಕ್ಕೆ ಸಹಕಾರ ಸಂಘಗಳು ಬಿದ್ದು ಒದ್ದಾಡುತ್ತಿವೆ. ಸಂಘದ ಸದಸ್ಯರ (ಗ್ರಾಹಕರ) ಒಪ್ಪಿಗೆ ಇಲ್ಲದೆ ಅವರ ಖಾತೆಗೆ ಖರ್ಚು ಹಾಕುವ ಅಧಿಕಾರ ಇಲ್ಲ; ಸುತ್ತೋಲೆ ಪೂರ್ವಾನ್ವಯ ಮಾಡೋದು ಹೇಗೆಂಬ ಚಿಂತೆಗೆ ಸಹಕಾರ ಸಂಘಗಳು ಬಿದ್ದಿವೆ.

ಬೆಳೆ ಸಾಲ ಪಡೆಯುವ ಅಡಿಕೆ ಬೆಳೆಗಾರರಿಗಂತೂ ಈ ವಿಮೆ ತಲೆ ಶೂಲೆಯಾಗಿ ಕಾಡುತ್ತಿದೆ. ಮೋದಿಯ ವಿಮಾ ಯೋಜನೆ ಅದೆಷ್ಟು ಎಡವಟ್ಟಾಗಿದೆ ನೋಡಿ. ಇದು ಪಕ್ಕಾ ಹವಮಾನ ಆಧಾರಿತ ಸ್ಕೀಮು. ವಿಮೆ ಸಿಗಬೇಕಾದದ್ದು ಬೆಳೆ ನಾಶವಾದಾಗ. ಆದರೆ ಮೋದಿ ವಿಮಾದಲ್ಲಿ ಹವಾಮಾನ, ಮಳೆ ಪ್ರಮಾಣ ಆಧರಿಸಿ ವಿಮೆ ಬಟಾವಡೆ ಮಾಡಲಾಗುತ್ತದಂತೆ. ಈ ದಗಾಕೋರತನ, ವಂಚನೆ, ಮೋಸ ಇಲ್ಲಿಗೆ ನಿಲ್ಲುವುದಿಲ್ಲ, ವಿಮೆ ಪರಿಹಾರ ನೀಡೋದು ಪರಿಣಾಮಕ್ಕೆ ಅಲ್ಲ; ಕಾರಣಕ್ಕೆ. ಎಷ್ಟು ಅಡಿಕೆ ಹಾನಿಯಾಯ್ತು, ಎಷ್ಟು ಭತ್ತದ ಫಸಲು ನಾಶವಾಯ್ತೆಂಬುದು ವಿಮಾ ಪ್ರಭೃತಿಗಳಿಗೆ ಮುಖ್ಯವೇ ಅಲ್ಲ. ಯಾಕೆ ಹಾನಿ ಆಯ್ತೆಂಬುದು ಇವರ ತರ್ಕ! ಈ ಆಧಾರದ ಮೇಲೆ ಪರಿಹಾರ ನಿರ್ಧಾರವಾಗುತ್ತದೆ.

ಪ್ರಕೃತಿ ವಿಕೋಪಗಳಾದ ಪ್ರವಾಹ, ಆಲಿಕಲ್ಲು ವ
ಭೂಕುಸಿತ ಮತ್ತು ಬೆಳೆ ಮುಳುಗಡೆಯಾದಾಗ ಪರಿಹ
ಕೊಡಲಾಗುತ್ತದಂತೆ. ವಾಸ್ತವವಾಗಿ ಅಡಿಕೆ ಬೆಳೆಗಾರ
ಇಂಥ ಕಾರಣದಿಂದ ಹಾನಿ ಆಗೋದೇ ಇಲ್ಲ,
ಮುಳುಗಡೆ ಆಗಬೇಕೆಂದರೆ 20-40 ಅಡಿ ನಿ
ತೋಟದಲ್ಲಿ ನಿಲ್ಲಬೇಕು. ಅದಾಗೋದೇ ಇಲ್ಲ! ವಿ
ಯೋಜನೆಯ ವಿವರವೆಲ್ಲವೂ ಅಸ್ಪಷ್ಟ-ಅನಾಹುತಕಾ
ಬೆಳೆ ವಿಮೆಗೆ ಸಂಬಂಧಿಸಿದ ಸುತ್ತೋಲೆ ಜತೆ ಲಗತ್ತಿಸಲ
ಟರ್ಮ್‌ಶೀಟಲ್ಲಿ ಪರಿಹಾರ ನೀಡಿಕೆಯ ಯಾವ ತಾ
ವಿವರಗಳೂ ಇಲ್ಲ. ರೈತರ ತಿಳಿವಳಿಕೆಗೆ ಹೊರಡಿಸಲ
ಕರಪತ್ರದಲ್ಲೂ ಯಾವ ಕಾರಣಕ್ಕೆ, ಎಷ್ಟು ನಷ್ಟಕ್ಕೆ ಎ
ಪರಿಹಾರ ಎಂಬ ಸ್ಪಷ್ಟತೆಯಿಲ್ಲ, ಆದರೆ ಯಾವ ಬೆ
ಎಷ್ಟು ವಿಮಾ ಕಂತು ಎಂದು ತಿಳಿಸಲಾಗಿದೆ. ಈ ಸಕ
ನೋಡಿದರೆ, ಬೆಳೆವಿಮೆ ನೆಪದಲ್ಲಿ ರೈತರ ಮುಂಡಾಮೋ
ಬಂಡವಾಳಶಾಹಿ ವಿಮಾ ಕಂಪನಿಗಳಿಗೆ ಭರ್ಜರಿ ಲ
ಮಾಡಿಕೊಡುವ ಹುನ್ನಾರ ಮೋದಿ ವಿಮಾದ ವಿನ್ಯಾಸ
ಅಡಗಿರುವುದು ಅರ್ಥವಾಗುತ್ತದೆ.


ಕೃಷಿ ಬೆಳೆಗಳಿಗೆ ಶೇ.2ರಷ್ಟು ಮತ್ತು ತೋಟಗಾರ
ಫಸಲಿಗೆ ಶೇ.5ರಷ್ಟು ವಿಮೆ ನಿಗದಿಸಲಾಗಿದೆ. ಮ
ಅಂದರೆ ಈ ವಿಮಾ ಮೊತ್ತಕ್ಕೆ ಸ್ಕೇಲ್ ಆಫ್ ಫೈನಾ
ಹೊಂದಿಕೆಯೇ ಆಗದು. ಬೆಳೆ ಸಾಲವನ್ನು ಎಕರೆ ಅ
ತೋಟಕ್ಕೆ 90 ಸಾವಿರ ಮತ್ತು ಒಂದು ಎಕರೆ ಭ
ಗದ್ದೆಗೆ 15 ಸಾವಿರದಂತೆ ಸಹಕಾರ ಸಂಘಗಳು ಸಕಾ
ನಿಯಮದಂತೆ ನೀಡುತ್ತಿವೆ. ಆದರೆ ಮೋದಿಯ ಮೋ
ವಿಮಾ ವಿವರದಲ್ಲಿ ಒಂದು ಎಕರೆ ಅಡಿಕೆಗೆ 91 ಸಾ
ಮತ್ತು ಭತ್ತದ ಒಂದು ಎಕರೆಗೆ 20,400 ರೂ. ಎಂ
ನಮೂದಿಸಲಾಗಿದೆ. ಇದರಂತೆ ಲೆಕ್ಕ ಹಾಕಿದರೆ ಸಿಗ
ಸಾಲಕ್ಕೂ ವಿಮಾ ಯೋಜನೆಯ ಸಾಲದ ಮೊತ್ತ
ಹಾನಿಕಾರಕ ವ್ಯತ್ಯಾಸ ಕಂಡುಬರುತ್ತದೆ. ಭತ್ತದ ಬೆಳೆ
ತಾವು ಪಡೆದ ಸಾಲಕ್ಕಿಂತ ಹೆಚ್ಚಿಗೆ ಹಣ (5,400 ರ
ಮತ್ತು ಅಡಿಕೆ ತೋಟಿಗೆ 1 ಸಾವಿರ ಹೆಚ್ಚಿಗೆ ಮೊ
ವಿಮೆಕಂತು ತುಂಬಬೇಕಾಗಿದೆ. ಇದು ಉತ್ತರ ಕ
ವಿಮಾ ಲೆಕ್ಕ. ಈ ವಿಮಾ ಮೊತ್ತ ಒಂದೊಂದು ಜಿ
ಒಂದೊಂದು ಮಾನದಂಡದಿಂದ ನಿಗದಿಸಲಾಗಿದೆ!

ಸಾಲದ ಮೊತ್ತದ ಬದಲಿಗೆ ಮಂಜೂರಿ ಕ್ಷೇ
ವಿಮೆ ನಿರ್ಧರಿಸುವುದಿದೆಯಲ್ಲ, ಅದು ಮೋದಿಯ
ಪರ ಕಾಳಜಿಗೆ ಜ್ವಲಂತ ನಿದರ್ಶನದಂತಿದೆ. ಅಷ್ಟೇ
3 ಲಕ್ಷ ರೂ.ವರೆಗೆ ಬಡ್ಡಿರಹಿತವಾಗಿ ರಾಜ್ಯ ಸಕಾ
ಕೊಡುತ್ತಿರುವ ಬೆಳೆ ಸಾಲದ ಲಾಭಕ್ಕೂ ಈ ವಿಮೆ ಸಂಚ
ತರುತ್ತಿದೆ. ಪರೋಕ್ಷವಾಗಿ ಶೇ.5ರಷ್ಟು ವಿಮೆ ರೂಪ
ರೈತನಿಗೆ ಹಾನಿ ಆಗುತ್ತದೆ. ಸಾಲ ಪಡೆಯುವವ
ಹಾನಿಕಾರಕ ವಿಮೆ ಕಡ್ಡಾಯ. ವಿಮೆ ಇಲ್ಲದಿದ್ದರೆ
ಕೊಡಲಾಗುವುದಿಲ್ಲ ಎಂಬ ಧಮಕಿ ಧೋರಣೆಯಿ
ಈ ಬೋಗಸ್ ವಿಮಾ ಯೋಜನೆ ಸಾಲಗಾ
ದೃಷ್ಟಿಯಲ್ಲಿಟ್ಟು ರಚಿಸಲಾಗಿದೆಯೇ ಹೊರತು ಅಸಹಾ
ಬಡ ರೈತನ ಸಂರಕ್ಷಿಸುವ ದೂರಾಲೋಚನೆಯಲ್ಲಿ ಅ
ಅಲ್ಲ, ಇದು ಮೋದಿ ಮಾಮನ ಕೃಷಿ ಚಿಂತನ-ಮ
ಶೈಲಿ!! ಸಾಲಗಾರನಿಗಾದರೂ ಹಾನಿಯಾದರೆ ಪರಿ
ಸರಳವಾಗಿ ಕೈಗೆಟುಕವುದೂ ಅನುಮಾನವೇ. ಆನ್‌ಲ
ಮೂಲಕ ಪರಿಹಾರ ವಿತರಿಸಲಾಗುತ್ತದಂತೆ. ಸಹ
ಸಂಘಗಳಲ್ಲಿನ ರೈತರ ಖಾತೆಗೆ ಆನ್‌ಲೈನ್ ವ್ಯವಸ್ಥೆ
ವಿಮಾ ಪರಿಹಾರ ಬೇಕಿದ್ದರೆ ಸಾಲಗಾರ ಕೃಷಿಕ
ಮಧ್ಯವರ್ತಿ ಬ್ಯಾಂಕ್‌ನಲ್ಲಿ ಉಳಿತಾಯ
ಮಾಡಿಕೊಳ್ಳಬೇಕು. ಇಲ್ಲಿ ಸಾಲ ಕೊಟ್ಟ ಸಹಕಾರ ಸಂಸ್ಥೆ





ಜೋಳ ರಾಗಿ
ಅಡಿಕೆ ತೋಟ ಭತ್ತದ ಗದ್ದೆ



ಸಿದ್ದರಾಮಯ್ಯ

…ೋಟಿಬಾ ಪರಿಹಾರ ನೇರವಾಗಿ ರೈತನ ಅಕೌಂಟ್‌ನಲ್ಲಿ …ೀಳುವುದರಿಂದ ಸಾಲ ಕೊಟ್ಟ ಸಂಸ್ಥೆಗೆ ಮರುಪಾವತಿ …ಮಾಡಿಕೊಳ್ಳುವಾಗ ತಿಪ್ಪರಲಾಗ ಹಾಕಬೇಕಾಗುತ್ತದೆ.

ಮೋದಿಯ ವಿಮಾ ಯೋಜನೆ ತೋಟಿಗರ ಪಾಲಿಗೆ …ತಾಯಿಸುವ-ಸುಲಿಯುವ ಕಾರ್ಯಕ್ರಮವೇ! ಭತ್ತ, ರಾಗಿ… …ುಂತಾದ ಮುಳುಗುವ ಬೆಳೆ ಬೆಳೆಯುವವರಿಗೆ ಅಡಿಕೆ, …ಳುಮೆಣಸು, ಬಾಳೆಯಂಥ ರೋಗ ಬಾಧಿಸುವ ಫಸಲಿನ …ೋಟಿಗರಷ್ಟು ಗಂಡಾಂತರಕಾರಿಯಲ್ಲದಿದ್ದರೂ ದೊಡ್ಡ …ಾಭ-ಅನುಕೂಲ ಅಷ್ಟಕ್ಕಷ್ಟೇ. ವಿಮಾ ಕ್ಲೇಮು ಪಡೆಯಲು …ೋಟಿಗರು ಹುಚ್ಚು ನಿಯಮಾವಳಿ ಪರತ್ತು ಪೂರೈಸಲು …ಾಧ್ಯವೇ ಇಲ್ಲ. ಅಡಿಕೆಗೆ ಸಾಮಾನ್ಯವಾಗಿ ಬರುವುದು …ೊಳೆ ರೋಗ. ಒಮ್ಮೊಮ್ಮೆ ಸಣ್ಣ ಮಳೆಗೂ ದೊಡ್ಡ …ೊಳೆ ರೋಗ ಒಂದು ಅಡಿಕೆ ಸಂಪೂರ್ಣ ನಾಶವಾಗುತ್ತದೆ. …ಗೀಗಂತೂ ಮಂಗನಂಥ ಕಾಡು ಪ್ರಾಣಿಗಳು ಅಡಿಕೆಗೆ …ಮರಿಕೊಂಡು ಹಾನಿ ಮಾಡುತ್ತಿವೆ.

ಪಿಎಂ ಫಸಲ್ ಬಿಮಾ ಯೋಜನೆ ವಿಮಾ ಕಂಪನಿಗಳಿಗೆ …ಾಭ ಮಾಡಿಕೊಟ್ಟು ಕಮೀಷನ್ ಪಡೆಯಲು ಜಾರಿಗೆ …ದ ಕಾರ್ಯಕ್ರಮವಾ ಎಂಬ ಅನುಮಾನವೀಗ ರೈತರನ್ನು …ಡತೊಡಗಿದೆ. ಯೋಜನೆಯ ತಾಂತ್ರಿಕ ವಿನ್ಯಾಸ ಅನುಷ್ಠಾನ …ವಸರ ಇದನ್ನು ಖಾತ್ರಿಪಡಿಸುತ್ತದೆ. ಇನ್ಶೂರೆನ್ಸ್ ಕಂಪನಿಗೆ …ೋಟಿ-ಕೋಟಿ ಬಾಚಲು ಅವಕಾಶ ಮಾಡಿಕೊಟ್ಟವರಿಗೆ …ಾವ-ಯಾವ ರೂಪದಲ್ಲಿ ಪ್ರತಿಫಲ ಸಿಗುತ್ತದೆ ಎಂಬ …ತೂಹಲ ಮೂಡಿದೆ. ಒಂದು ಅಂದಾಜಿನಂತೆ ಉತ್ತರ …ನ್ನಡ ಜಿಲ್ಲೆ ಒಂದರಲ್ಲೇ ಅಡಿಕೆ ಬೆಳೆಗಾರರ ಪ್ರೀಮಿಯಂ …ೊತ್ತ 30 ಕೋಟಿ ಆಗುತ್ತದೆ. ಇದಕ್ಕಿಂತ ಹೆಚ್ಚು ದಕ್ಷಿಣ …ನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಜಮೆಯಾಗಲಿದೆ. …ಮಾ ಕಂಪನಿಗಳು ವಿಮೆ ಕಡ್ಡಾಯ ಮಾಡುವುದು …ಪರಾಧ. ಹಾಗಾಗಿ ಮೋದಿಯ ಪರ್ಯಾವರಣ ಪಂಡಿತರು …ಮೆ ಬೆಳೆ ಸಾಲಕ್ಕೆ ಟ್ಯಾಗ್ ಮಾಡಿದ್ದಾರೆ. ಸಾಲ ಬೇಕಾದವರು …ಮೆ ಮಾಡಲೇಬೇಕು. ಮಧ್ಯಮ ಮತ್ತು ಬಡ ಕೃಷಿಕರೇ …ವಸಾಯ ವಲಯದಲ್ಲಿ ಹೆಚ್ಚಿದ್ದಾರೆ. ಇವರಿಗೆಲ್ಲ ಸಾಲ …ೇಕೇಬೇಕು. ಇದು 'ಯುನಿವರ್ಸಲ್ ಸೋಂಪು' ಇನ್ಶೂರೆನ್ಸ್ …ಪನಿಯಂಥ ದಗಾಕೋರ ವಿಮಾ ಕಂಪನಿಗಳ ದೆಸೆಯನ್ನೇ …ದಲಿಸುವ ದುರಂತ ಸಂಕೇತ ಬಿತ್ತರಿಸುತ್ತಿದೆ.

ಈಗಲಾದರೂ ಸಿದ್ದು ಸರ್ಕಾರ ಎಚ್ಚೆತ್ತುಕೊಳ್ಳಬೇಕಿದೆ. …ಷಿ ಮಂತ್ರಿ ಕೃಷ್ಣ ಭೈರೇಗೌಡ ಮೋದಿಯ ಎಡವಟ್ಟು …ಮಾ ಯೋಜನೆಯನ್ನು ರೈತ ಸ್ನೇಹಿಯಾಗಿ ಮರು …ನ್ಯಾಸಗೊಳಿಸಲು ಗಂಭೀರ ಚಿಂತನೆ ನಡೆಸಬೇಕಿದೆ. …ತರೊಂದಿಗೆ, ಕೃಷಿ ತಜ್ಞರೊಂದಿಗೆ ಮುಖಾಮುಖಿ ಚರ್ಚೆ …ಸಿ ನಿಯಮ ರೂಪಿಸಬೇಕಿದೆ. ಕೃಷಿಕರ ಕಷ್ಟ-ನಷ್ಟ- …ನಿವಾರ್ಯತೆ ಮತ್ತು ಪ್ರಾಯೋಗಿಕ ಅನುಭವ ಮಾನದಂಡ …ಮಾಡಿಕೊಂಡು ಕೃಷಿ ಮಂತ್ರಿಗಳು ಬೆಳೆವಿಮೆ …ಯೋಜನೆಯನ್ನು ಪುನರ್ ರೂಪಿಸುವ ಅನಿವಾರ್ಯತೆ …ದುರಾಗಿದೆ. ಸಹಕಾರಿ ಸಂಘಗಳ ವಿಮೆ ಆಧಾರಿತ ಸಾಲ …ಡಲು ಹಿಂಜರಿಯದಂತೆ ಸರಳ ವಿಮೆ ಯೋಜನೆ …ರಿಗೆ ಬಂದಾಗಷ್ಟೆ ಫಸಲ್ ಬಿಮಾಕ್ಕೊಂದು ಅರ್ಥ …ರಬಹುದು.

ಈ ಗೊಂದಲ-ಗಲಾಟೆ ಉತ್ಸಾಹಿ ಕೃಷಿ ಮಂತ್ರಿ ಕೃಷ್ಣ …ರೇಗೌಡರಿಗೆ ಗೊತ್ತಿದೆಯಾ? ಯಾವ್ಯಾವ ಜಿಲ್ಲೆಯಲ್ಲಿ …ತೆಂಥ ಹವಾಮಾನವಿದೆ, ಸ್ಥಳೀಯ ಸಮಸ್ಯೆ-ಸಂಕಷ್ಟವಿದೆ …ಬ ಮೂಲಭೂತ ಗುಣ-ಲಕ್ಷಣ ಅರಿಯದ …ಧಿಕಪ್ರಸಂಗಿ ಅಧಿಕಾರಿಗಳು-ಆಳುವವರು ಹವಾಮಾನ …ಧಾರಿತ ಬೆಳೆ ವಿಮೆ ಯೋಜನೆ ಜಾರಿ ಮಾಡುತ್ತೇವೆಂದು …ರಡುವುದೇ ವಿಕಟ ವ್ಯಂಗ್ಯ! ಮೋದಿಯ ವಿಮಾ …ಯೋಜನೆಯಲ್ಲಿನ ಮೂರ್ಖತನ, ರೈತ ವಿರೋಧಿ ರಗಳೆ …ಂದ್ರ ಸರ್ಕಾರಕ್ಕೆ ಎತ್ತಿ ತೋರಿಸುವ ತಾಕತ್ತು ಕೃಷ್ಣ …ರೇಗೌಡರಿಗೆ ಇದೆಯಾ? ಈ ಗೊಂದಲ-ಅವಾಂತರಕ್ಕೆ …ಂದ್ರ ಸರ್ಕಾರವೇ ತಿದ್ದುಪಡಿ ತರುವಂತೆ ಸಿದ್ದು ಸರ್ಕಾರ …ಾಡಬೇಕಾಗಿದೆ. ಇಲ್ಲದಿದ್ದರೆ ಮೋದಿ ಯೋಜನೆಗೆ ರಾಜ್ಯ …ರ್ಕಾರ ಕೊಡುವ ಪಾಲು ಇನ್ಶೂರೆನ್ಸ್ ಕಂಪನಿಗಳ ಪಾಲಾಗಿ …ರಿಗೆ ಪಂಗನಾಮ ಬೀಳೋದು ಗ್ಯಾರಂಟಿ!


■ ನಹುಷ


ಮೌಢ್ಯದ ಬೇರು ಸಡಿಲಗೊಳ್ಳುವುದೇ?

ಮೂಢನಂಬಿಕೆ ಪ್ರತಿಬಂಧಕ ಕಾಯ್ದೆ ಕುರಿತು ಕಳೆದ ಎರಡು ಮೂರು ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ವೈಯಕ್ತಿಕ ಬದುಕಿನಲ್ಲಿ ಎದುರುಗೊಂಡ ಆತ್ಮೀಯರಿಬ್ಬರ ಅನುಭವಗಳು ಮೂಢನಂಬಿಕೆ ಪ್ರತಿಬಂಧಕ ಕಾಯ್ದೆ ಜಾರಿಯನ್ನು ಬಲವಾಗಿ ಸಮರ್ಥಿಸಿಕೊಳ್ಳುವಂತೆ ನನ್ನನ್ನು ಪ್ರೇರೇಪಿಸುತ್ತಿವೆ.

ಹತ್ತಿರದ ಸಂಬಂಧಿಯೊಬ್ಬರ ಮೈಮೇಲೆ ದೇವರು ಆಗಾಗ ಪ್ರತ್ಯಕ್ಷವಾಗುತ್ತಿತ್ತು. ಹಾಗೆ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗುತ್ತಿದ್ದ ದೇವರು ಆ ವ್ಯಕ್ತಿಯ ಮೂಲಕ ಇನ್ನುಳಿದ ಹುಲುಮಾನವರಿಗೆ ಏನೇನೋ ಸೂಚನೆಗಳನ್ನು ನೀಡುತ್ತಿತ್ತು. ತನ್ನ ಮೈಮೇಲೆ ಬರುವ ದೇವರಿಂದ ಬಿಡುಗಡೆ ಪಡೆಯುವ ಸಲುವಾಗಿ ಅವರು, ಮೈಮೇಲೆ ದೇವರನ್ನು ಆವಾಹಿಸಿಕೊಳ್ಳುವ ಮತ್ತೊಬ್ಬನ ಮೊರೆ ಹೋದರು. ಈ ರೀತಿ ಮೈಮೇಲೆ ಬರುವ ದೇವರು-ದೆವ್ವಗಳನ್ನು ಬಿಡಿದೋಡಿಸುವುದು ಆ ವ್ಯಕ್ತಿಯ ಕಾಯಕವಾಗಿತ್ತು. ಅದಕ್ಕೊಂದು ಪುಟ್ಟ ಗುಡಿಯನ್ನೂ ಕಟ್ಟಿಕೊಂಡಿದ್ದ. ನಮ್ಮ ಸಂಬಂಧಿಯ ಮೈಮೇಲೆ ಆಗಾಗ ದೇವರು ಬರುವುದು, ಅವರು ಆ ಪೂಜಾರಿಯ ಬಳಿ ಹೋಗಿ ತಮ್ಮ ಈ ಸಮಸ್ಯೆ ಪರಿಹರಿಸುವಂತೆ ಬೇಡಿಕೊಳ್ಳುವುದು ನಡೆದೇ ಇತ್ತು. ಹೀಗೆ ಹತ್ತಾರು ವರ್ಷಗಳ ಕಾಲ ದೇವರು ಮೈಮೇಲೆ ಬರುವುದೆಂಬ ಮಾನಸಿಕ ಕ್ಷೋಭೆಗೊಳಗಾದ ಅವರು ಕಡೆಗೊಂದು ದಿನ ಆತ್ಮಹತ್ಯೆಯ ಹಾದಿ ಹಿಡಿದು ಬದುಕಿಗೆ ವಿದಾಯ ಹೇಳಿದರು.

-ಸ್ನೇಹಿತನೊಬ್ಬನ ಬದುಕಿನಲ್ಲಿ ಜರುಗುತ್ತಿರುವ ಬೆಳವಣಿಗೆಗಳನ್ನು ಗಮನಿಸಿದಾಗಲೂ ಮನಸ್ಸಿಗೆ ಕಸಿವಿಸಿಯಾಗುತ್ತದೆ. ತನ್ನ ಭಾವನೆಗಳನ್ನು ಅರ್ಥೈಸಿಕೊಳ್ಳುವ ವ್ಯವಧಾನ ಮನೆಯವರಿಗಿಲ್ಲ, ತನ್ನ ಯಾವುದೇ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳುವುದು ಸಾಧ್ಯವಿಲ್ಲವೆಂದು ನಿರ್ಣಯಿಸಿದ ಅವನು ಮೂರ್ನಾಲ್ಕು ವರ್ಷಗಳ ಹಿಂದೆ ಆತ್ಮಹತ್ಯೆಗೆ ಯತ್ನಿಸಿದ್ದ. ಅದೃಷ್ಟವಶಾತ್ ಅವನ ಯತ್ನ ವಿಫಲಗೊಂಡು ಬದುಕಿಕೊಂಡ. ಮಗನ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ಮುಕ್ತ ಮನಸ್ಸು ಹೊಂದಿರದ ಅವನ ಪೋಷಕರಿಗೆ ಮಗ ಇದ್ದಕ್ಕಿದ್ದಂತೆ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾದದ್ದು ಬಿಡಿಸಲಾಗದ ಒಗಟಾಗಿ ಗೋಚರಿಸಿತು. ಇದಕ್ಕೆಲ್ಲ ಯಾವುದೋ ದೈವಶಕ್ತಿಯೇ ಕಾರಣವಿರಬಹುದೆಂದು ಬಲವಾಗಿ ನಂಬಿದ ಅವರು, ಇಂತಹ ವಿಚಾರಗಳ ಕುರಿತು ಸಾಕಷ್ಟು ತಿಳಿದುಕೊಂಡಿರುವೆನೆಂದು ತನ್ನನ್ನು ತಾನು ಬಿಂಬಿಸಿಕೊಳ್ಳುವ ವ್ಯಕ್ತಿಯೊಬ್ಬನ ಮೊರೆ ಹೋದರು. ಆತ ನಿಮ್ಮ ಮಗನ ಆತ್ಮಹತ್ಯೆ ಯತ್ನದ ಹಿಂದೆ ಕಾಣದ ಶಕ್ತಿಯೊಂದರ ಕೈವಾಡವಿದೆ. ಯಾವುದಕ್ಕೂ ಇನ್ನು ಕೆಲವು ದಿನ ಜಾಗ್ರತೆಯಿಂದಿರಿ. ಅಮಾವಾಸ್ಯೆ ದಿನಗಳಲ್ಲಿ ಮಗ ಹೊರಗೆಲ್ಲ ಹೆಚ್ಚೆಚ್ಚು ಅಡ್ಡಾಡದಿರುವಂತೆ ನೋಡಿಕೊಳ್ಳಿ ಅಂತೆಲ್ಲ ಹೇಳಿದ. ಅವನ ಮಾತನ್ನು ಪೂರ್ಣವಾಗಿ ನಂಬಿದ ಸ್ನೇಹಿತನ ಪೋಷಕರು ಒಂದಷ್ಟು ವಿಶೇಷ ಪೂಜೆಗಳನ್ನು ಕೈಗೊಂಡು ಮಗನನ್ನು ಉಳಿಸಿಕೊಳ್ಳುವ ಯತ್ನ ಮಾಡಿದರು. ಸ್ವತಃ





ಆರ್ಥಿಕವಾಗಿ ಸಂಕಷ್ಟ ಎದುರಿಸುತ್ತಿದ್ದರೂ ಇಂದಿಗೂ ದೇವರ ಕಾರ್ಯಗಳಿಗೆ ಸಾಲ ಮಾಡಿಯಾದರೂ ಹಣ ವ್ಯಯಿಸುತ್ತಲೇ ಇದ್ದಾರೆ. ಸ್ನೇಹಿತನ ಸಮಸ್ಯೆಗಳು ದಿನದಿಂದ ದಿನಕ್ಕೆ ಇನ್ನಷ್ಟು ಕಗ್ಗಂಟಾಗುತ್ತಿವೆ. ದೇವರ ಮೊರೆ ಹೋಗುತ್ತಿರುವ ಅವನ ಪೋಷಕರಿಗೆ ಮಗನ ಅಸಲಿ ಸಮಸ್ಯೆಗಳಾದರೂ ಯಾವುವು ಎಂದು ತಾಳ್ಮೆಯಿಂದ ಕೇಳುವ ವ್ಯವಧಾನವೂ ಇಲ್ಲವಾಗಿದೆ.

ಸಂಬಂಧಿ ಮತ್ತು ಸ್ನೇಹಿತನ ಬದುಕಿನಲ್ಲಿ ಎದುರಾದ ಸಮಸ್ಯೆಗಳನ್ನು ಹತ್ತಿರದಿಂದ ಗಮನಿಸಿದ ನನಗೆ, ಇವರೆಲ್ಲ ದೇವರು ಅಥವಾ ದೇವರು-ದೆವ್ವಗಳೊಂದಿಗೆ ಅನುಸಂಧಾನ ನಡೆಸುತ್ತೇವೆಂದು ತಮ್ಮನ್ನು ತಾವು ಬಿಂಬಿಸಿಕೊಳ್ಳುವ ಪೂಜಾರಿಗಳೆಂಬ ಮಧ್ಯವರ್ತಿಗಳ ಮೊರೆ ಹೋಗದೆ ಮನೋವೈದ್ಯರ ಬಳಿ ತಪಾಸಣೆಗೆ ಒಳಪಟ್ಟಿದ್ದರೆ ಅವರ ಸಮಸ್ಯೆಗಳು ಬಗೆಹರಿಯುತ್ತಿದ್ದವೇನೊ ಎಂದೆನಿಸುತ್ತದೆ.

ಮೂಢನಂಬಿಕೆ ಪ್ರತಿಬಂಧಕ ಕಾಯ್ದೆ ಜಾರಿಯಾದ ಮಾತ್ರಕ್ಕೆ ಎಲ್ಲವೂ ಒಂದೇ ಏಟಿಗೆ ಬದಲಾಗಿ ಬಿಡುತ್ತದೆ; ದೇವರು-ದೆವ್ವಗಳ ಅವಕೃಪೆಗೆ ತುತ್ತಾಗಿದ್ದೇವೆಂದು ಭಾವಿಸಿಕೊಂಡು ಅಥವಾ ಬಿಂಬಿಸಿಕೊಂಡು ಹೋಗುತ್ತಿರುವವರ ಬದುಕಿನಲ್ಲಿ ನೆಮ್ಮದಿ ನೆಲೆಗೊಳ್ಳುತ್ತದೆ ಎನ್ನಲಾಗದಿದ್ದರೂ, ಈಗಿರುವ ಪರಿಸ್ಥಿತಿಯಲ್ಲಿ ಕೆಲವು ಸುಧಾರಣೆಗಳಾದರೂ ಸಾಧ್ಯವಾಗುತ್ತದೆ ಎಂಬ ಆಶಾಭಾವ ಹೊಂದಲು ಅಡ್ಡಿಯಿಲ್ಲ.

ಮೈಮೇಲೆ ಸ್ವತಃ ದೇವರನ್ನು ಬರಿಸಿಕೊಳ್ಳುತ್ತೇವೆ ಎಂದು ತಮ್ಮನ್ನು ತಾವು ಬಿಂಬಿಸಿಕೊಂಡು, ಜನರ ಸಕಲ ಸಮಸ್ಯೆಗಳಿಗೂ ಪರಿಹಾರ ಒದಗಿಸುವ ಸಲುವಾಗಿ ದೇವಸ್ಥಾನಗಳನ್ನು ತೆರೆದು ಮೌಢ್ಯ ಬಿತ್ತಿ ಜನರ ನೆಮ್ಮದಿ ಹಾಳು ಮಾಡಿ ಹಣ ಸಂಪಾದಿಸುವವರ ಕ್ರೌರ್ಯಕ್ಕೆ ಕೊನೆ ಪಕ್ಷ ಕಾನೂನಿನ ಮೂಲಕವಾದರೂ ಅಂಕುಶ ಬೀಳುತ್ತದೆ. ಇಂತಹ ಕೇಂದ್ರಗಳು ಬಹಿರಂಗವಾಗಿ ತಲೆ ಎತ್ತಿ ನಿಲ್ಲದಂತಾದರೆ ಅದು ಕೂಡ ದೊಡ್ಡ ಮಟ್ಟದ ಸುಧಾರಣೆಯೇ.

ಕಾಯ್ದೆ ಜಾರಿಗಿಂತ ಜನರಲ್ಲಿ ಜಾಗೃತಿ ಮೂಡಿಸುವುದು ಮುಖ್ಯವೆಂಬ ವಾದ ಒಪ್ಪತಕ್ಕದ್ದೇ ಆದರೂ, ಹಾಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮೂಢನಂಬಿಕೆ ಪ್ರತಿಬಂಧಕ ಕಾಯ್ದೆಯ ಜಾರಿ ಮೊದಲ ಹೆಜ್ಜೆಯಾಗಬಹುದು.

'ನಂಬಿಕೆ-ಮೂಢನಂಬಿಕೆಯ ನಡುವೆ ತೆಳುವಾದ ಗೆರೆ ಇದೆ. ಜನರ ಭಾವನೆಗಳೊಂದಿಗೆ ಸರ್ಕಾರ ಆಟ ಆಡಬಾರದು. ಬಹುಸಂಖ್ಯಾತರ ಭಾವನೆಗಳನ್ನು ಗೌರವಿಸಬೇಕು' ಅಂತೆಲ್ಲ ಅಪಸ್ವರ ಎತ್ತುತ್ತಿರುವವರು, ಮನುಷ್ಯರ ನೆಮ್ಮದಿ ಕಸಿದುಕೊಳ್ಳುತ್ತಿರುವ, ಮಾನವ ಘನತೆಗೆ ಚ್ಯುತಿ ತರುವ, ಸಾವಿನ ಮನೆಗೆ ದೂಡುತ್ತಿರುವ ನಂಬಿಕೆಗಳೇ ಮೂಢನಂಬಿಕೆಗಳು ಎಂಬುದನ್ನು ಅರಿತೂ ಅರಿಯದಂತೆ ವರ್ತಿಸುತ್ತಿದ್ದಾರೆ.

ಇನ್ನು ಕೆಲವರು ತಮ್ಮ ಸ್ವಹಿತಾಸಕ್ತಿ ಸಾಧಿಸಿಕೊಳ್ಳುವ ಸಲುವಾಗಿಯೇ ಕಾಯ್ದೆ ಜಾರಿಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಕಾಯ್ದೆಯಲ್ಲಿ ಏನಿದೆ ಏನಿಲ್ಲವೆಂದು ಪರಿಶೀಲಿಸುವ ವ್ಯವಧಾನ ತೋರದೆ, ಇದು ಎಡಪಂಥೀಯ ಬುದ್ಧಿಜೀವಿಗಳ ಕುತಂತ್ರ ಅಂತೆಲ್ಲ ಬಿಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ.


ಜನರ ಮನಸ್ಸಿಗೆ ನೆಮ್ಮದಿ ದಯಪಾಲಿಸುವಂತಹ ದೇವರು, ಧರ್ಮ ಮತ್ತು ಆಚರಣೆಗಳು ಇದ್ದಲ್ಲಿ ಸಮಸ್ಯೆಯಿಲ್ಲ, ಆದರೆ ಸಕಲ ಸಮಸ್ಯೆಗಳಿಗೂ ದೇವರ ಬಳಿಯೇ ಪರಿಹಾರವಿದೆ, ದೇವರನ್ನು ಒಲಿಸಿಕೊಳ್ಳಬೇಕೆಂದರೆ ತಾವು ಸೂಚಿಸಿದ್ದನ್ನೆಲ್ಲ ಮಾಡಬೇಕೆಂದು ನಂಬಿಸುವವರ ಅಟಾಟೋಪಕ್ಕೆ ಕಡಿವಾಣ ವಿಧಿಸಲೇಬೇಕಿದೆ.

ಮೇಲ್ನೋಟಕ್ಕೆ ಕೇವಲ ಜನರ ನಂಬಿಕೆ ಮತ್ತು ಭಾವನೆಗಳಿಗೆ ಸಂಬಂಧಿಸಿದಂತೆ ಗೋಚರಿಸುವ ಧಾರ್ಮಿಕ ಆಚರಣೆಗಳು, ಹಲವರ ಬದುಕನ್ನೇ ಕಸಿದುಕೊಳ್ಳುವಷ್ಟು ಪ್ರಬಲವಾಗಿವೆ. ಧರ್ಮ ರಕ್ಷಣೆ ಎಂದರೆ, ಆಯಾ ಧರ್ಮಗಳ ಭಾಗವಾಗಿರುವ ಮೌಢ್ಯಗಳನ್ನು ಹಾಗೆಯೇ ಉಳಿಸಿಕೊಳ್ಳುವ ಭಂಡತನವಲ್ಲ ಎಂಬುದನ್ನು ಸ್ವಯಂ ಘೋಷಿತ ಧರ್ಮ ರಕ್ಷಕರು ಅರಿತುಕೊಳ್ಳಬೇಕಿದೆ.

ಯಾವುದೇ ವಾದ-ವಿವಾದ, ಸಿದ್ಧಾಂತಗಳಿಗೂ ತಮ್ಮನ್ನು ತೆರೆದುಕೊಳ್ಳದೇ ತಮ್ಮ ಪಾಡಿಗೆ ತಾವು ದೇವರನ್ನು ಒಲಿಸಿಕೊಳ್ಳುವ ಮೂಲಕ ತಮ್ಮ ಸಂಕಷ್ಟಗಳಿಂದ ಪಾರಾಗಲು ಹಂಬಲಿಸುವವರ ಮುಗ್ಧತೆಯನ್ನೇ ಬಂಡವಾಳ ಮಾಡಿಕೊಂಡು ಬದುಕುತ್ತಿರುವವರ ಬುಡ ಅಲುಗಿಸುವಲ್ಲಿ ಈ ಕಾಯ್ದೆ ಸ್ವಲ್ಪ ಮಟ್ಟಿಗಾದರೂ ಯಶ ಕಾಣಬಹುದೇನೊ ಅನ್ನುವ ಆಶಾಭಾವದೊಂದಿಗೆ ಕಾಯ್ದೆಯ ಪರ ದನಿ ಎತ್ತಬಹುದಲ್ಲವೇ?

■ ಎಚ್.ಕೆ. ಶರತ್

ಹಾವೇರಿ: ವಸತಿ ಸಚಿವನ ಅರಣ್ಯ ಸ್ವಾಹಾ!


ರುದ್ರಪ್ಪ ಲಮಾಣಿ

ನಿರ್ಗತಿಕರಿಗೆ ಸೂರು ಕಲ್ಪಿಸಿಕೊಡುವ ಜವಾಬ್ದಾರಿಯುತ ವಸತಿ ಇಲಾಖೆಗೆ ಗ್ರಹಣದಂತೆ ಹಿಡಿದಿದ್ದ ಬಿಹಾರಾಮಿ ಉಡಾಫೆಯ ಅಂಬರೀಷ್ ತೊಲಗಿದ ನಂತರ ರಾಜ್ಯದ ಜನ ಕೊಂಚ ನಿಟ್ಟುಸಿರು ಬಿಟ್ಟದ್ದು ಸುಳ್ಳಲ್ಲ. ತನ್ನ ಮೂರು ವರ್ಷದ ಅಧಿಕಾರಾವಧಿಯಲ್ಲಿ ಒಬ್ಬೇ ಒಬ್ಬ ನಿರ್ವಸತಿಗನ ತಲೆ ಮೇಲೆ ಸೂರು ಕಟ್ಟದ ಅಂಬಿಗೆ ಜನರಿಂದ ಇನ್ನೆಂಥ ವಿದಾಯ ಸಿಗಲು ಸಾಧ್ಯ. ಇನ್ಮುಂದಾದರೂ ಒಂದಷ್ಟು ವಸತಿ ಯೋಜನೆಗಳು ಜನರಿಗೆ ತಲುಪಬಹುದೆನ್ನುವುದೇ ಜನರ ನಿಟ್ಟುಸಿರಿನ ಆಶಯವಾಗಿತ್ತು. ಆದರೆ, ಅದ್ಯಾಕೊ ಅಂಬಿ ತೊಲಗಿದರು ವಸತಿ ಇಲಾಖೆ ಮೇಲೆ ಕವಿದಿರುವ ಗ್ರಹಣ ದೂರ ಸರಿಯುವಂತೆ ಕಾಣುತ್ತಿಲ್ಲ. ಯಾಕೆಂದರೆ, ಆ ಖಾತೆಗೆ ವಕ್ಕರಿಸಿರೋದು ರುದ್ರಪ್ಪ ಲಮಾಣಿ ಎಂಬ ಭೂಬಾಕ!


ನೋ ಡೌಟ್, ಮೇಲ್ನೋಟಕ್ಕೆ ರುದ್ರಪ್ಪ ಲಮಾಣಿ ಶಾಂತ ಸ್ವಭಾವದ ರಾಜಕಾರಣಿ. ಸುಮಾರು ಮೂರೂವರೆ ದಶಕದ ತನ್ನ ರಾಜಕೀಯ ಬದುಕಿನುದ್ದಕ್ಕೂ ಎಂದೂ ಕುತಂತ್ರ ರಾಜಕಾರಣದಿಂದ ಚರ್ಚೆಗೆ ಬಂದ ಆಸಾಮಿಯೇ ಅಲ್ಲ. ಆದರೆ, ಮನುಷ್ಯನಿಗೆ ಒಂದೇ ಮುಖವಿರಲು ಸಾಧ್ಯವೇ? ಅದರಲ್ಲೂ ರಾಜಕಾರಣಿ ಅಂದಮೇಲೆ ಮುಖಕ್ಕಿಂತ ಮುಖವಾಡಗಳ ಸಂಖ್ಯೆಯೇ ಜಾಸ್ತಿ. ಹಾವೇರಿ ಶಾಸಕ ರುದ್ರಪ್ಪ ಲಮಾಣಿ ಕೂಡಾ ಇದಕ್ಕೆ ಹೊರತಾದವನಲ್ಲ. ಎಷ್ಟೇ ಸಭ್ಯನಂತೆ ಫೋಜು ಕೊಟ್ಟರೂ ಅನಾಮತ್ತು 60 ಎಕರೆ ಅರಣ್ಯ ಭೂಮಿಯನ್ನು ಸ್ವಾಹಾ ಮಾಡಿದ ಕರ್ಮಕಾಂಡವಿದೆಯಲ್ಲ ಅದರ ಮುಂದೆ ಲಮಾಣಿಯ ಮುಖವಾಡಗಳೆಲ್ಲ ಕಳಚಿಬಿದ್ದು ಆತನ ಭೂಗಳ್ಳತನದ ಅಸಲಿ ಮುಖ ಅನಾವರಣಗೊಳ್ಳುತ್ತೆ.


ಕಾಡಿಗೇ ಬೇಲಿ!

ಏಳು ತಾಲ್ಲೂಕುಗಳನ್ನು ಹೊಂದಿರುವ ಹಾವೇರಿ ಜಿಲ್ಲೆಯಲ್ಲಿ ಅರಣ್ಯ ಪ್ರದೇಶದ ವ್ಯಾಪ್ತಿಯೂ ದೊಡ್ಡದಿದೆ. ಪಶ್ಚಿಮಘಟ್ಟಗಳಷ್ಟು ದಟ್ಟವಾಗಿ ಬೆಳೆಯದಿದ್ದರೂ ಸೊಂಪಾಗಿ ಬೆಳೆದ ಮರಗಳು ಮತ್ತು ಕುರುಚಲು ಕಾಡುಗಳ ಅರಣ್ಯ ಇಲ್ಲಿ ಅನೇಕ ಪ್ರಾಣಿಪಕ್ಷಿಗಳಿಗೆ ಆಶ್ರಯ ಒದಗಿಸಿದೆ. ಅಂತಹ ಅರಣ್ಯ ಪ್ರದೇಶದಲ್ಲಿ ರಾಣೇಬೆನ್ನೂರು ತಾಲ್ಲೂಕಿನ ಖಂಡೇರಾಯನಹಳ್ಳಿ ತಾಂಡಾದ ಸರ್ವೇ ನಂಬರ್ 14ರ ಸುಮಾರು 60 ಎಕರೆ ಜಾಗ ಕೂಡಾ ಅರಣ್ಯ ಇಲಾಖೆಯ ಸ್ವಾಧೀನಕ್ಕೆ ಒಳಪಡುತ್ತದೆ. ಅಂದಹಾಗೆ, ಈ ಖಂಡೇರಾಯನಹಳ್ಳಿ ತಾಂಡಾ ರುದ್ರಪ್ಪ ಲಮಾಣಿಯ ಹುಟ್ಟೂರು.

ಖಾಲಿ ಬಿದ್ದಿದ್ದ ಈ ಜಾಗವನ್ನ ಸುಮಾರು 25 ವರ್ಷಗಳ ಹಿಂದೆಯೇ ಸರ್ಕಾರ ಅರಣ್ಯ ಇಲಾಖೆಗೆ ಸೇರ್ಪಡೆ ಮಾಡಿ ಅಧಿಸೂಚನೆಯನ್ನು ಹೊರಡಿಸಿದೆ. ಯಾವಾಗ ರುದ್ರಪ್ಪ ಲಮಾಣಿ ಮೊದಲ ಬಾರಿಗೆ ಬ್ಯಾಡಗಿ ಕ್ಷೇತ್ರದಿಂದ ಗೆದ್ದು ಎಂಎಲ್ಎ ಆದನೊ ಆಗಲೇ ಆತನ ಕಣ್ಣು ಈ ಅರಣ್ಯ ಪ್ರದೇಶದ ಮೇಲೆ ಬಿದ್ದಿತ್ತು. ಅರಣ್ಯ ಪ್ರದೇಶ ಅಂದರೆ ಅದು ಕಾಡೇನೂ ಅಲ್ಲ, ಅರಣ್ಯ ಇಲಾಖೆಗೆ ಒಳಪಟ್ಟ ಕುರುಚಲು ಗಿಡಗಳ ಬೀಳು ಜಾಗ. ಹಾಗಾಗಿ ಅಲ್ಲಿ ಜಮೀನು ಮಾಡಿಕೊಳ್ಳುವುದೊ ಅಥವಾ ಸೈಟುಗಳನ್ನಾಗಿಸಿಕೊಳ್ಳುವುದೋ ತುಂಬಾ ಸುಲಭ. ಈ ಲೆಕ್ಕಾಚಾರ ಹಾಕಿಯೇ ರುದ್ರಪ್ಪ ಲಮಾಣಿ ಆ ಸಮಸ್ತ ಜಾಗಕ್ಕೆ ಬೇಲಿ ಸುತ್ತಲು ಸ್ಕೆಚ್ ಹಾಕಿದ್ದ.

ಅಂತಹದ್ದೊಂದು ಆಲೋಚನೆ ತಲೆಯಲ್ಲಿ ಮೊಳೆತಿದ್ದೇ ರುದ್ರಪ್ಪ ಲಮಾಣಿ ತಡಮಾಡಲಿಲ್ಲ. ತನ್ನಲ್ಲಿದ್ದ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ತನ್ನ ತಮ್ಮ ಡಾಂಗೇಶ ಮತ್ತು ಅಳಿಯ ಠಾಕ್ರಪ್ಪ ಲಮಾಣಿಯ ಹೆಸರಿಗೆ ಒಟ್ಟು 9 ಎಕರೆ 45 ಗುಂಟೆ ಜಾಗವನ್ನು ಸುಳ್ಳು ದಾಖಲೆ ಸೃಷ್ಟಿಸಿ ರಿಜಿಸ್ಟರ್ ಮಾಡಿಸಿಯೇ ಬಿಟ್ಟ! ಅಷ್ಟಾದರು ಲಮಾಣಿಗೆ ಸಮಾಧಾನವಾಗಲಿಲ್ಲ. ಇನ್ನುಳಿದ ಸುಮಾರು 50 ಎಕರೆ ಜಮೀನನ್ನೂ ಲಪಟಾಯಿಸಲೇಬೇಕೆಂಬ ತೀರ್ಮಾನಕ್ಕೆ ಬಂದ ರುದ್ರಪ್ಪ ಲಮಾಣಿಯ ಹಾದಿ ಸುಗಮವಾಗೇನೂ ಇರಲಿಲ್ಲ. ಹೆಚ್ಚೆಂದರೆ ಐದೋ, ಹತ್ತೋ ಎಕರೆಯನ್ನು ಸುಳ್ಳು ದಾಖಲೆ ಸೃಷ್ಟಿಸಿ ಸುಲಭವಾಗಿ ಎಗರಿಸಿಬಿಡಬಹುದು. ಅದನ್ನಾತ ಆಗಲೇ ಮಾಡಿದ್ದ (ತಮ್ಮ ಮತ್ತು ಅಳಿಯನ ಹೆಸರಿನಲ್ಲಿ). ಅನಾಮತ್ತು ಐವತ್ತು ಎಕರೆ ಲಪಟಾಯಿಸುವುದು ಹೇಗೆ. ಆಗ ಲಮಾಣಿಯ ತಲೆಯಲ್ಲಿ ಮೊಳೆತದ್ದೇ 'ಮಠದ ಮಹಾತ್ಮೆ'ಯ ಐಡಿಯಾ.


ಮಠ ನಿರ್ಮಾಣಕ್ಕೆಂದು ದಲಿತರಿಂದ ಖರೀದಿಸಿದ ಜಮೀನಿನ ಕ್ರಯಪತ್ರ


ಕೃಷಿ ಹೊಂಡ ನಿರ್ಮಿಸಿವ್ವಾಗಿ ಡಾಂಗೇಶ ಸಲ್ಲಿಸಿದ ಅಫಿಡವಿಟ್

ದಿಢೀರ್ ದೇವಸ್ಥಾನ, ಜಬರ್‌ದಸ್ತ್ ಮಠ

ವಿವಾದಿತ ಅರವತ್ತು ಎಕರೆ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲೊಂದು ಶಿವ ದೇವಾಲಯವಿದೆ. ಖಂಡೇರಾಯನಹಳ್ಳಿ ತಾಂಡಾದಲ್ಲಿ ಐವತ್ತು ವರ್ಷಕ್ಕಿಂತ ಹೆಚ್ಚಾದ ವಯಸ್ಸಿನ ಯಾರನ್ನೇ ಕೇಳಿದರೂ ತಮ್ಮ ಬಾಲ್ಯದಲ್ಲಿ ಅಂತಹದ್ದೊಂದು ದೇಗುಲ ಅಲ್ಲಿದ್ದ ನೆನಪೇ ಅವರಿಗೆ ಬಾರುವುದಿಲ್ಲ. ಯಾಕೆಂದರೆ ರುದ್ರಪ್ಪ ಲಮಾಣಿಯ ತಲೆಯಲ್ಲಿ ಅರಣ್ಯ ಭೂಮಿಯನ್ನು ಲಪಟಾಯಿಸುವ ಐಡಿಯಾ ಹುಟ್ಟಿಕೊಂಡ ನಂತರ ರಾತ್ರೋರಾತ್ರಿ ಉದ್ಭವಿಸಿದ ಶಿವಲಿಂಗ ಅದು! ನಮ್ಮೂರಿನಲ್ಲಿ ಸಾಕ್ಷಾತ್ ಪರಶಿವನೇ ಅವತರಿಸಿಬಿಟ್ಟಿದ್ದಾನೆ ಅಂತ ಮುಗ್ಧ ಜನರನ್ನು ನಂಬಿಸುವುದು ಶಾಸಕನ ಪಟಾಲಮ್ಮಿಗೇನೂ ಕಷ್ಟವಾಗಲಿಲ್ಲ. ಆರಂಭದಲ್ಲಿ ಆ ಶಿವಲಿಂಗದ ಸುತ್ತ ಸಣ್ಣ ಗುಡಿಸಲನ್ನು ನಿರ್ಮಿಸಲಾಗಿತ್ತು, ಕೆಲವೇ ತಿಂಗಳ ಅಂತರದಲ್ಲಿ ಲಕ್ಷಾಂತರ ಖರ್ಚು ಮಾಡಿ ಅಲ್ಲೊಂದು ಕಾಂಕ್ರೀಟ್ ದೇವಾಲಯವನ್ನೇ ನಿರ್ಮಿಸಲಾಗಿತ್ತು, ಅರಣ್ಯ ಭೂಪ್ರದೇಶವನ್ನು ಹೋಲ್‌ಸೇಲಾಗಿ ಸ್ವಾಹಾ ಮಾಡುವ ಶಾಸಕನ ಹುನ್ನಾರ ಅದು.

ಹೀಗೆ ಹುಟ್ಟಿಕೊಂಡ ದೇವಸ್ಥಾನ ಹೆಚ್ಚೆಂದರೆ ಅರ್ಧ ಎಕರೆಯನ್ನೋ ಅಥವಾ ಒಂದು ಎಕರೆಯನ್ನೋ ಕಬಳಿಸ[illegible] ರುದ್ರಪ್ಪ ಲಮಾಣಿಯ ಟಾರ್ಗೆಟ್ ಇದ್ದದ್ದು [illegible] ಐವತ್ತು ಎಕರೆ. ಹಾಗಾಗಿ ಆತ ಆ ದೇವಸ್ಥಾನವನ್ನೇ ಮೂಲವಾಗಿಟ್ಟುಕೊಂಡು 'ಶ್ರೀ ಸದ್ಗುರು ಸಿದ್ಧಾರೂಢ ಮಠ'ವನ್ನೇ ನಿರ್ಮಿಸಿಬಿಟ್ಟರು. ಮಠ ಅಂದಮೇಲೆ ಅದಕ್ಕೊಬ್ಬ ಮಠಾಧಿಪತಿ ಇರಲೇಬೇಕಲ್ಲಾ, ಆ ಜಾಗಕ್ಕೆ ತಂದು ಕೂರಿಸಿದ್ದು ಹರಿಹರದ ಬಿರ್ಲಾ ಕಂಪನಿಯ ಕೆಲಸಗಾರ ನಾಗಾನಂದಯ್ಯ ಅಲಿಯಾಸ್ ನಾಗರಾಜನನ್ನು. ಈತನಿಗೆ ಮದುವೆಯಾಗಿ ಮೂರು ಮಕ್ಕಳಿದ್ದಾರೆ. ಈಗಲೂ ಆತ ತನ್ನ ಸಂಸಾರದಿಂದ ಬಿಡುಗಡೆ ಹೊಂದಿಲ್ಲ. ಮೊನ್ನೆಮೊನ್ನೆಯಷ್ಟೇ ಹೆಂಡತಿ ಮಕ್ಕಳ ಸೌಕರ್ಯಕ್ಕೆಂದು ಹರಿಹರದ ಮಜ್ಜಿಗೆ ಬಡಾವಣೆಯಲ್ಲಿ ಬರೋಬ್ಬರಿ 2 ಕೋಟಿಯ ದುಬಾರಿ ಬಂಗಲೆಯನ್ನು ಕಟ್ಟಿಸಿಕೊಟ್ಟಿದ್ದಾನೆ. ಅಂತವನಿಗೆ ಕಾವಿ ತೊಡಿಸಿ, ಸ್ವಾಮಿಯ ಗೆಟಪ್ ಹಾಕಿ ರುದ್ರಪ್ಪ ಲಮಾಣಿ ಮತ್ತವನ ತಮ್ಮ ಡಾಂಗೇಶ ಅರಣ್ಯದ ಸುಲಿಗೆಗೆ ನಿಂತಿದ್ದಾರೆ.

ದಲಿತರ ಭೂಮಿಗೂ ಕನ್ನ

ಆರಂಭದಲ್ಲೇ ಏಕಾಏಕಿ ಅರಣ್ಯ ಪ್ರದೇಶದಲ್ಲಿ ಮಠವನ್ನು ನಿರ್ಮಿಸಿಬಿಟ್ಟರೆ ಜನರಿಂದ, ಸರ್ಕಾರದಿಂದ ತಕರಾರು ಬಂದೀತೆಂದು ತಲೆ ಓಡಿಸಿದ ಲಾ ಓದಿಕೊಂಡಿರುವ ರುದ್ರಪ್ಪ ಲಮಾಣಿ ಮಠದ ನಿರ್ಮಾಣಕ್ಕೆಂದು ಒಂದು ಟ್ರಸ್ಟ್ ಮಾಡಿಕೊಂಡು (ಸದರಿ ಟ್ರಸ್ಟ್‌ನ ಬಹುತೇಕ ಸದಸ್ಯರು ರುದ್ರಪ್ಪ ಲಮಾಣಿ ಕುಟುಂಬಸ್ಥರೇ!) ಅದರ ಮೂಲಕ ಗ್ರಾಮದ ದಲಿತರಿಗೆ ಸೇರಿದ ಸುಮಾರು 2 ಎಕರೆ 3 ಗುಂಟೆ ಜಮೀನನ್ನು ,ಬಲವಂತವಾಗಿ ಖರೀದಿ ಮಾಡಿದ್ದ. ಆದರೆ ಇದುವರೆಗೂ ಆ ಜಾಗದಲ್ಲಿ ಮಠವಿರಲಿ, ಮಠಕ್ಕೆ ಸಂಬಂಧಿಸಿದ ಒಂದು ಇಟ್ಟಿಗೆಯೂ ಬಿದ್ದಿಲ್ಲ. ಖರೀದಿಸಿದ ಜಾಗದಿಂದ ಸುಮಾರಷ್ಟು ದೂರದಲ್ಲಿ ಅರಣ್ಯ ಪ್ರದೇಶದಲ್ಲಿ ಮಠವನ್ನು ಕಟ್ಟಿದ್ದಾರೆ. ಆ ಮಠ ಈಗಾಗಲೇ 20 ಎಕರೆಗೂ ಅಧಿಕ ಅರಣ್ಯ ಭೂಮಿಯನ್ನು ಸ್ವಾಹಾ ಮಾಡಿಕೊಂಡಿದೆ.

ಸ್ಥಳೀಯರೊಬ್ಬರು ಧೈರ್ಯ ಮಾಡಿ ಲಮಾಣಿ ಕುಟುಂಬದ ಅಕ್ರಮಗಳನ್ನು ಪ್ರಶ್ನಿಸಿ ದಾಖಲೆ ಸಮೇತ ನ್ಯಾಯಾಲಯದ ಮೆಟ್ಟಿಲೇರಿದಾಗ 'ಅದು ಅರಣ್ಯ ಇಲಾಖೆ ಸ್ಥಳ, ಹಾಗಾಗಿ ಕೂಡಲೇ ತೆರವು ಮಾಡಿ' ಎಂದು ಹಾವೇರಿ ಜಿಲ್ಲಾ ನ್ಯಾಯಾಲಯ ಆದೇಶವಿತ್ತಿತ್ತು (ಆದೇಶ ಸಂಖ್ಯೆ: ಎಲ್.ಜಿ.ಎಲ್. ಎಪಿ-2, 2012-13 ದಿನಾಂಕ 27.08.2012). ಅದನ್ನೇ ಆಧಾರವಾಗಿಟ್ಟುಕೊಂಡು ತೆರವು ಮಾಡುವಂತೆ ಜಿಲ್ಲಾಡಳಿತ ಪದೇಪದೇ ನೋಟಿಸ್ ಕೊಟ್ಟಿದ್ದರೂ ರುದ್ರಪ್ಪ ಲಮಾಣಿ ಅಲ್ಲಿಂದ ಕದಲಲಿಲ್ಲ. ಒಂದೆರಡು ಬಾರಿ ಅರಣ್ಯ ಇಲಾಖೆಯೇ ಮುಂದಾಗಿ ತನ್ನ ಸ್ವತ್ತಿನಲ್ಲಿ ಅಕ್ರಮವಾಗಿ ನಿರ್ಮಿಸಿರುವ ಮಠವನ್ನು ಕಿತ್ತು ಬಿಸಾಡಿ ಸುಟ್ಟು ಹಾಕಿದ್ದೂ ಉಂಟು. ಆದರೆ ಹಾಗೆ ಧ್ವಂಸ ಮಾಡಿದ ಪ್ರತಿಬಾರಿಯೂ ರುದ್ರಪ್ಪ ಲಮಾಣಿಯ ನೇತೃತ್ವದಲ್ಲಿ ಮಠ ಮತ್ತಷ್ಟು ಜಬರ್‌ದಸ್ತಾಗಿ ವಿಸ್ತಾರಗೊಳ್ಳುತ್ತಲೇ ಬಂದಿದೆಯೆಂದರೆ ಹಾವೇರಿಯಲ್ಲಿ ಲಮಾಣಿಯ ಆಟಾಟೋಪ ಅದಿನ್ನೆಂತದ್ದಿರಬೇಡ. ಸಾಲದೆಂಬಂತೆ ಅರಣ್ಯ ಪ್ರದೇಶದಲ್ಲಿ ನಿರ್ಮಾಣವಾಗಿರುವ ಮಠದ ಹಿಂಬದಿಯಲ್ಲೇ ಇರುವ ಸರ್ಕಾರಿ ಜಾಗದ ಕೋಟ್ಯಂತರ ಬೆಲೆಬಾಳುವ ಮಣ್ಣನ್ನು ಮಠಾಧೀಶ ನಾಗಾನಂದಯ್ಯನ ಜೊತೆ ಸೇರಿ ಲಮಾಣಿ ಮತ್ತು ಡಾಂಗೇಶ ಲೂಟಿ ಹೊಡೆಯುತ್ತಿದ್ದಾರೆ.

ನಕಲಿ ದಾಖಲೆಗೆ ಬ್ಯಾಂಕ್‌ನಲ್ಲಿ ಸ

ರುದ್ರಪ್ಪ ಲಮಾಣಿಯ ಅಪರಾತಪರಾಗಳು ಮುಗಿಯುವಂತವಲ್ಲ. ಸ್ವತಃ ಜಿಲ್ಲಾ ಸೆಷನ್ಸ್ ನ್ಯಾಯಾ ತೀರ್ಪು ನೀಡಿ ಅರಣ್ಯ ಇಲಾಖೆಗೆ ಸೇರಿದ ಜ ಅಕ್ರಮ ದಾಖಲೆ ಸೃಷ್ಟಿಸಿ ಆಕ್ರಮಿಸಿಕೊಂಡಿರೋದ ಅಂತ ಛೀಮಾರಿ ಹಾಕಿದ್ದರೂ, ಅದ್ಯಾವುದರ ಪರಿ ಇಲ್ಲದಂತೆ ಅದೇ ಸರ್ವೇ ನಂಬರ್ 14ರಲ್ಲಿ ನ ಜಮೀನಿದೆ ಅಂತ ಸುಳ್ಳು ದಾಖಲೆಗಳನ್ನೇ ಅಡವಿಟ್ಟಿರುವ ಲಮಾಣಿಯ ತಮ್ಮ ಡಾಂಗೇಶ ಕೋಳಿ ಫಾರಂ ತೆರೆಯುವುದಕ್ಕೆಂದು ಎಸ ಬ್ಯಾಂಕ್‌ನಿಂದ ಬರೋಬ್ಬರಿ 20 ಲಕ್ಷ ಎತ್ತಿಕೊಂಡಿದ್ದಾನೆ. ಈಗಾಗಲೇ ಆಕ್ರಮಿತ ಭೂಭಾಗದಲ್ಲಿ ಕೋಳಿ ಫಾರಂ ನಿರ್ಮಾ ಕಾಮಗಾರಿಯೂ ಶುರುವಾಗಿದೆ. ರುದ್ರಪ್ಪ ಲಮ ದಾದಾಗಿರಿ ದುನಿಯಾ ಕೋರ್ಟ್‌ನ ಆದೇಶಕ್ಕ ಎನ್ನಲಿಲ್ಲ ಅಂತಾದ ಮೇಲೆ ಪಾಪ, ಹಾವೇರಿಯ ಸ ಜನರ ಪಾಡೇನಾಗಿರಬೇಡ. ಶಾಸಕನ ಕುಟು ಅಕ್ರಮಗಳನ್ನು ಪ್ರಶ್ನಿಸಲು ಯಾರೊಬ್ಬರೂ ಮುಂದೆ ಬ ಭೀಕರ ಬಿಹಾರವನ್ನು ಲಮಾಣಿ ಸೃಷ್ಟಿಮಾಡಿಕೊಂಡಿದ್ದಾನೆ.


ಅದಕ್ಕೊಂದು ನಿದರ್ಶನವೆಂದರೆ, ಕೃಷಿ ನಿರ್ಮಾಣದ ಹೈಡ್ರಾಮಾ. ಖಂಡೇರಾಯನಹಳ್ಳಿ ತಾ ಅರಣ್ಯದ ಮತ್ತು ಗ್ರಾಮದ ಸುತ್ತಮುತ್ತಲಿನ ಪ್ರಾಣಿಪ ಕೃಷಿ ನೆರವಿಗೆಂದು ಕೃಷಿ ಹೊಂಡ ನಿರ್ಮಿಸುವ ಮಂಜೂರಾಗಿತ್ತು, ಶಾಸಕ ಲಮಾಣಿಯ ತಮ್ಮನ ಹೊಂಡ ನಿರ್ಮಿಸುವುದಾಗಿ ಗುತ್ತಿಗೆ ಹಿಡಿದಿದ್ದ. ಅದ ಸರ್ಕಾರ ಬರೋಬ್ಬರಿ ಎಂಟು ಲಕ್ಷ ರೂಪಾಯಿ ಬಿಡುಗಡೆ ಮಾಡಿದೆ. ಆದರೆ ಅರಣ್ಯಪೂರ ಹುಡು ಎಲ್ಲಿಯೂ ಕೃಷಿ ಹೊಂಡದ ಸುಳಿವೇ ಇಲ್ಲ. ಲೆಕ್ಕದ ಪುಸ್ತಕಗಳಲ್ಲಿ ಕೃಷಿ ಹೊಂಡದ ಕ ಇದೆಯಾದರೂ ಊರಿನ, ಕಾಡಿನ ಯಾವ ಮೂಲೆ ಅದರ ಅವಶೇಷವೂ ಇಲ್ಲ. ಇದು ಜನರಿಗೆ ಗ ಯಾರೂ ಅದನ್ನು ಪ್ರಶ್ನೆ ಮಾಡುತ್ತಿಲ್ಲ. ಇನ್ನು ಕುಮದ ಹುಣಸೇಕಟ್ಟೆ ಗ್ರಾಮದ ಸರ್ಕಾರಿ ಜಮೀನಿನಲ್ಲೇ ಲಮಾಣಿ ತನ್ನ ಕ್ರಶರ್‌ಗಳನ್ನಿಟ್ಟುಕೊಂಡು ವ್ಯ ನಡೆಸುತ್ತಿದ್ದಾನೆ. ಈ ಬಗ್ಗೆ ದೂರು ಬಂದಕಾರಣ ಎಸಿ, ತಹಸೀಲ್ದಾರ್, ಗ್ರಾಮ ಲೆಕ್ಕಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಲು ಹೋ ಸರ್ಕಾರಿ ಅಧಿಕಾರಿಗಳು ಎಂಬ ಕಿಂಚಿತ್ತು ಗೌ ಇಲ್ಲದಂತೆ ಅವರ ಮೇಲೆ ತಮ್ಮ ಚೇಲಾಗಳನ್ನು ದಾಂಧಲೆ ನಡೆಸಿದ್ದ. ಆಗ ರುದ್ರಪ್ಪ ಲಮಾಣಿಯ 23.11.2011ರಲ್ಲಿ ಅಪರಾಧ ಸಂಖ್ಯೆ 173/2011 353, 504, 506 ಐಪಿಸಿ ಸೆಕ್ಷನ್‌ಗಳಡಿಯಲ್ಲಿ ದಾಖಲಾಗಿತ್ತು.

ರುದ್ರಪ್ಪ ಲಮಾಣಿಯ ಗೂಂಡಾಗಿರಿ ಎಂತ ಅದೇ ಖಂಡೇರಾಯನಹಳ್ಳಿಯಲ್ಲಿ ರಾಮವ್ವ ಎಂಬ ಹೆಂಗಸೊಬ್ಬಳಿದ್ದಳು. ಆಕೆ ಜೀವಂತವಿದ್ದರೂ ದಾಖಲೆಗಳಲ್ಲಿ ಆಕೆ ಸತ್ತಿದ್ದಾಳೆಂದು ಬರೆಸಿ ದಾ ಹೆಸರಿನಲ್ಲಿ ಸರ್ವೇ ನಂಬರ್ 98ರಲ್ಲಿದ್ದ 18 ಎಕ ಗುಂಟೆ ಜಮೀನನ್ನು ತನ್ನ ಅಜ್ಜ ಲಚಮಪ್ಪನಿಗೆ ಮ ಮಾಡಿದ್ದಳೆಂದು ಲಪಟಾಯಿಸಿಕೊಂಡಿದ್ದ. ಕಡೆಗೆ ಕೊ ಕಟಕಟೆ ಏರಿದ ಆ ಕೇಸಿನಲ್ಲಿ ವಿಧವೆ ರಾಮವ್ವನ ಪ ನ್ಯಾಯಾಲಯ ತೀರ್ಪು ನೀಡಿತ್ತು.

ಈಗ ನೀವೇ ಯೋಚಿಸಿ, ನ್ಯಾಯಸಮ್ಮತವಾಗಿ ಇಲಾಖೆಗೆ ಸೇರಬೇಕಾದ ನೈಸರ್ಗಿಕ ಸಂಪತ್ತನ್ನೇ ಮನೆಯ ಆಸ್ತಿಯೆಂಬಂತೆ ದೇವಸ್ಥಾನ, ಮಠಗಳನ್ ಕೊಂಡು ಲೂಟಿ ಹೊಡೆಯುತ್ತಿರುವ ರುದ್ರಪ್ಪ ಲ ಯಂತಹ ಭೂಬಕಾಸುರನಿಂದ ನಿರ್ಗತಿಕರಿಗೆ ವ ಸಿಗುತ್ತವೆ ಅಂತ ಯಾರಾದರು ಭ್ರಮಿಸಲಾಗುತ್ತದ ಇದೊಂಥರಾ ಬಾಣಲೆಯಿಂದ ಬೆಂಕಿಗೆ ಬಿದ್ದಂತಹ ನಿ

■ ವರದಿ

ಕೊಡಗಿನಲ್ಲಿ ಚೆಡ್ಡಿಗಳಿಗೆ ಮರುಜೀವ ಕೊಟ್ಟ ಸಾವು



ಕೊಡಗು ಜಿಲ್ಲೆಯಲ್ಲಿ ಗಣಪತಿಯವರು ಆತ್ಮಹತ್ಯೆ ಮಾಡಿಕೊಂಡಿದ್ದು ಮತ್ತು ಗಣಪತಿ ಕೊಡಗಿನವರೇ ಆಗಿರುವುದು, ಜೊತೆಗೆ ಗಣಪತಿ ತನ್ನ ಕೊನೆಯ ಸಂದರ್ಶನದಲ್ಲಿ ಸಚಿವ ಕೆ.ಜೆ. ಜಾರ್ಜ್‌ರವರ ಹೆಸರನ್ನು ಹೇಳಿರುವುದು ರಾಜ್ಯ ಬಿಜೆಪಿಗೆ ಮತ್ತು ಕೊಡಗು ಜಿಲ್ಲಾ ಬಿಜೆಪಿಗೆ ಒಂದು ವರದಾನದಂತೆ ಆಗಿದೆ. ಜಾರ್ಜ್‌ರವರ ಹೆಸರು ಕೇಳಿದರೆ ಸಾಕು, ಕೊಡಗು ಜಿಲ್ಲೆಯ ಬಿಜೆಪಿ ಶಾಸಕರುಗಳಾದ ಕೆ.ಜಿ. ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್‌ರವರು ಮೈಮೇಲೆ ಬಂದಂತೆ ವರ್ತಿಸುತ್ತಾರೆ. ನಿದ್ರೆಯಲ್ಲಿಯೂ ಅವರಿಗೆ ಜಾರ್ಜ್ ಹೆಸರು ಕೇಳಬಾರದು.


ಜಾರ್ಜ್ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವೇಳೆಯಲ್ಲಿ ಈ ಇಬ್ಬರು ಶಾಸಕರು ಅವರೊಂದಿಗೆ ಸಂಘರ್ಷ ಮಾಡಿಕೊಂಡಿದ್ದರು, ಅವರಿಗೆ ಸಹಕಾರವನ್ನು ನೀಡಲಿಲ್ಲ, ಆರೋಪಗಳನ್ನು ಮಾಡುತ್ತಿದ್ದರು, ಸಂದರ್ಭ ಸಿಕ್ಕಾಗಲೆಲ್ಲಾ ಅವರನ್ನು ಜರೆಯುವ ಕೆಲಸವನ್ನು ತಪ್ಪದೇ ಮಾಡುತ್ತಾ ಬಂದಿದ್ದರು. ಜಾರ್ಜ್ ಕೂಡ ಎಂದೂ ಅವರಿಗೆ ಕ್ಯಾರೇ ಅನ್ನಲಿಲ್ಲ, ಅವರಿಗೆ ಸೆಡ್ಡು ಹೊಡೆದು ಕಾರ್ಯ ನಿರ್ವಹಿಸುತ್ತಾ ಬಂದಿದ್ದರು. ಈ ಇಬ್ಬರು ಶಾಸಕರು ಬಾರದಿದ್ದರೂ, ಸಹಕಾರ ನೀಡದಿದ್ದರೂ, ಜಿಲ್ಲೆಯ ಕಾರ್ಯವನ್ನು ಜಾರ್ಜ್ ಮಾಡುತ್ತಾ ಬಂದರು. ತಮ್ಮ ಕಾಲಿಗೆ ಜಾರ್ಜ್ ಬೀಳಲಿಲ್ಲ ಎಂಬ ಸಿಟ್ಟು ಅವರಿಬ್ಬರಲ್ಲಿ ಇತ್ತು, ಜಾರ್ಜ್ ಕೊಡಗಿನವರೇ ಆಗಿರುವುದು ಹಾಗೂ ಕೊಡಗಿನಲ್ಲಿ ಹೆಚ್ಚಿನ ಸಂಪರ್ಕ ಇರುವುದು ಈ ಶಾಸಕರುಗಳಿಗೆ ಸಮಸ್ಯೆಯಾಗಿತ್ತು.

ಉಸ್ತುವಾರಿ ಸಚಿವರ ಸ್ಥಾನ ಬದಲಾದ ಕೂಡಲೇ ನೆಮ್ಮದಿಯ ನಿಟ್ಟುಸಿರು ಬಿಟ್ಟವರು ಈ ಶಾಸಕರು ಮತ್ತು ಜಿಲ್ಲೆಯ ಕಾಂಗ್ರೆಸಿನ ಪ್ರಮುಖರು. ಯಾಕೆಂದರೆ ಚೆಡ್ಡಿ ಹಾಕಿಕೊಂಡೇ ಕಾಂಗ್ರೆಸಿನಲ್ಲಿ ಇರುವವರನ್ನು ಜಾರ್ಜ್ ದೂರ ಇಟ್ಟಿದ್ದರು.

ರಾಜ್ಯದಲ್ಲಿ ಬಿಜೆಪಿಯ ಗುಂಪುಗಾರಿಕೆ ಮತ್ತು ಕೊಡಗು ಜಿಲ್ಲೆಯಲ್ಲಿ ಬಿಜೆಪಿಯನ್ನು ಆಂತರಿಕವಾಗಿ ಇಬ್ಭಾಗ ಮಾಡಿರುವ ದೇವಟ್‌ಪರಂಬು ವಿಚಾರದಿಂದ ಪಕ್ಷ ಜರ್ಜರಿತವಾಗಿದೆ. ಇದರಿಂದ ಹೊರಬರಲು ಸಾಧ್ಯವಿಲ್ಲ ಎನ್ನುವಂತಹ ಪರಿಸ್ಥಿತಿಯಲ್ಲಿದ್ದ ಪಕ್ಷಕ್ಕೆ ಈಗ ತಾತ್ಕಾಲಿಕವಾಗಿಯಾದರೂ ಹೊರ ಬರಲು ಗಣಪತಿ ಆತ್ಮಹತ್ಯೆ ಬಿಜೆಪಿಗೆ ಸಹಾಯ ಮಾಡಿದೆ. ರಾಜ್ಯದಲ್ಲಿ ಯಡಿಯೂರಪ್ಪ ವಿರುದ್ಧ ದಂಗೆಗೆ ಬ್ರೇಕ್ ಬಿದ್ದಿದ್ದರೆ ಜಿಲ್ಲೆಯಲ್ಲಿ ಬಿಜೆಪಿಯ ಕೊಡವರು ಮತ್ತು ಅರೆಭಾಷೆ ಗೌಡರ ನಡುವೆ ಎದ್ದಿರುವ ಕಂದಕದ ನೆನಪು ಮಾಸಲು ಕಾರಣವಾಗಿದೆ.

ಆತ್ಮಹತ್ಯೆಗೂ ಮುನ್ನ ಗಣಪತಿ ತನಗೆ ಹಿರಿಯ ಅಧಿಕಾರಿಗಳು ಕಿರುಕುಳ ನೀಡಿದರು ಮತ್ತು ಹಿಂದೆ ಗೃಹ ಸಚಿವರಾಗಿದ್ದ ಕೆ.ಜೆ. ಜಾರ್ಜ್ ಕಿರುಕುಳ ನೀಡಿದ್ದರು ಎಂದಿದ್ದನ್ನೇ ಈಗ ಆಧಾರವಾಗಿಟ್ಟುಕೊಂಡು ಚೆಡ್ಡಿಗಳು ಪ್ರತಿಭಟಿಸುತ್ತಿದ್ದಾರೆ. ಆದರೆ ಹೀಗೆ ಪ್ರತಿಭಟಿಸುವ ನೈತಿಕತೆಯಾದರೂ ಅವರಿಗೆ ಇದೆಯೇ?

ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದು ಬೋಪಯ್ಯ ಸ್ಪೀಕರ್






ಆಗಿದ್ದ ವೇಳೆಯಲ್ಲಿ ಜಿಲ್ಲೆಯಲ್ಲಿ ಎಷ್ಟು ಅಧಿಕಾರಿಗಳಿಗೆ ಕಿರುಕುಳ ನೀಡಲಾಗಿತ್ತು; ಎಷ್ಟು ಅಧಿಕಾರಿಗಳು ಈ ಶಾಸಕರುಗಳ ಕಿರುಕುಳ ತಾಳಲಾರದೆ ವರ್ಗಾವಣೆಯನ್ನು ಪಡೆದುಕೊಂಡು ಹೋಗಿದ್ದರು ಎಂಬುದನ್ನು ಪಟ್ಟಿ ಮಾಡಿದರೆ ಅಚ್ಚರಿ ಆಗುತ್ತದೆ.

ವಿರಾಜಪೇಟೆಗೆ ಈಗ ಡಿವೈಎಸ್‌ಪಿ ಆಗಿ ಬಂದಿರುವ ನಾಗಪ್ಪ ಎಂಬ ವ್ಯಕ್ತಿ ಕುಶಾಲನಗರದಲ್ಲಿ ಡಿವೈಎಸ್‌ಪಿ ಆಗಿದ್ದ ವೇಳೆಯಲ್ಲಿ ಅವರಿಗೆ ಅಪ್ಪಚ್ಚು ರಂಜನ್ ನೀಡಿದ ಹಿಂಸೆ ಅಷ್ಟಿಷ್ಟಲ್ಲ, ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಜಿಲ್ಲಾ ಶಿಕ್ಷಣಾಧಿಕಾರಿ ಮಚ್ಚಾಡೋ ಕ್ರೈಸ್ತ ಎಂಬ ಕಾರಣಕ್ಕೆ ಮತ್ತು ಮಂಗಳೂರಿನಲ್ಲಿ ಈಗ ಜಿಲ್ಲಾಧಿಕಾರಿಯಾಗಿರುವ ಎ.ಬಿ. ಇಬ್ರಾಹಿಂ ಅವರು ಮುಸ್ಲಿಮ್ ಎಂಬ ಕಾರಣಕ್ಕೆ ಅಪ್ಪಚ್ಚು ರಂಜನ್ ಮತ್ತು ಬೋಪಯ್ಯ ನೀಡಿದ ಮಾನಸಿಕ ಕಿರುಕುಳ ಅಷ್ಟಿಷ್ಟಲ್ಲ, ಕೆಡಿಪಿ ಸಭೆಯೊಂದರಲ್ಲಿ ಸ್ಪೀಕರ್ ಆಗಿ ಉಪಸ್ಥಿತರಿದ್ದ ಬೋಪಯ್ಯ ಅರಣ್ಯ ಅಧಿಕಾರಿಯೊಬ್ಬರಿಗೆ "ಎದೆಗೆ ಒದೆಯುತ್ತೇನೆ" ಎಂದು ಹೇಳಿದ್ದೂ ಇದೆ.

2008ರಲ್ಲಿ ಕುಲಶೇಖರ ಚರ್ಚ್‌ನ ಮೇಲೆ ದಾಳಿ ನಡೆದ ಪ್ರಕರಣದಲ್ಲಿ ಗಣಪತಿಯವರು ಚರ್ಚಿನಲ್ಲಿ ಆರಾಧನೆ ನಡೆಸುತ್ತಿದ್ದ ಜನರ ಮೇಲೆ ಲಾಠಿ ಪ್ರಹಾರ ಮಾಡಿದ್ದರು ಎಂಬುದು ಅವರ ಮೇಲೆ ಇದ್ದಂತಹ ಒಂದು ಆರೋಪ. ಈ ಬಗ್ಗೆ ವೀಡಿಯೋ ಕ್ಲಿಪಿಂಗ್‌ಗಳು ಈಗ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಒಂದು ಕಡೆ ಈ ಬಗ್ಗೆ ದಕ್ಷಿಣ ಕನ್ನಡದ ಪತ್ರಕರ್ತ ನವೀನ್ ಸೂರಿಂಜೆ ಅಂದು ನಡೆದ ಘಟನಾವಳಿಯನ್ನು ನೆನಪಿಸಿದ್ದಾರೆ. ಮತ್ತೊಂದು ಕಡೆ ಈ ಘಟನೆಯ ನಂತರ ಸತ್ಯಾಸತ್ಯತೆಯನ್ನು ಪರಿಶೀಲಿಸಿ ವರದಿ ನೀಡಿದ ಜಸ್ಟೀಸ್ ಸಾಲ್ಡಾನರವರು ಪ್ರಕರಣದಲ್ಲಿ ಗಣಪತಿ ಆರೋಪಿ ಎಂದು ಹೇಳಿದ್ದರು. ನಕಲಿ ಎನ್‌ಕೌಂಟರ್ ಪ್ರಕರಣ ಮತ್ತು ಕಳ್ಳತನದ ಮಾಲನ್ನು ವಶಪಡಿಸಿಕೊಂಡರೂ ಸಂಪೂರ್ಣವಾಗಿ ಹಸ್ತಾಂತರಿಸದಿರುವ ಆರೋಪಗಳು ಅವರ ಮೇಲೆ ಇದ್ದು, ಇಲಾಖೆಯ ಪ್ರಕಾರ ಅದು ಸಾಬೀತಾಗಿದೆ. ಹಾಗಾಗಿ ಗಣಪತಿಯವರಿಗೆ ಅಮಾನತ್ತು ಕೂಡ ಆಗಿತ್ತು.



ಗಣಪತಿಯವರ ತಂದೆ ಕೊಡಗು ಜಿಲ್ಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಾಗಿ ಇದ್ದವರು. ಗಣಪತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ತನ್ನ ಹೆಚ್ಚಿನ ಸೇವಾವಧಿಯನ್ನು ಕಳೆದಂತಹ ವ್ಯಕ್ತಿ. ಪುತ್ತೂರು ಭಾಗದಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ವೇಳೆಯಲ್ಲಿ ಸಣ್ಣಪುಟ್ಟ ಘಟನೆ ನಡೆದರೂ ಯಾವ ಪಕ್ಷದ ಕಡೆ ವಾಲದೆ ಥಳಿಸುತ್ತಿದ್ದರು ಎಂದು ಅಲ್ಲಿನ ಜನ ನೆನಪಿಸಿಕೊಳ್ಳುತ್ತಾರೆ. ಆದರೆ ಗಣಪತಿ ಅವರಿಗೆ ಬಡ್ತಿ ದೊರಕಿದ ಮೇಲೆ ಆಡಳಿತ ನಡೆಸುವವರನ್ನು ಓಲೈಸುವುದಕ್ಕೋ ಅಥವ ದಕ್ಷಿಣ ಕನ್ನಡದಲ್ಲಿ ಇರುವಂತಹ ಸಂಘ ಪರಿವಾರದ ಪ್ರಭಾವಕ್ಕೆ ಬಲಿಯಾಗಿಯೋ ಅವರು ಹಿಂದೂತ್ವದತ್ತ ವಾಲಿದ್ದರು ಎಂಬುದು ಸ್ಪಷ್ಟವಾಗಿದೆ. ರಾಜಕಾರಣಿ ಮತ್ತು ಅಧಿಕಾರಿಗಳ ನಂಟು ಹೆಚ್ಚಾದಾಗ ಕೆಲವೊಮ್ಮೆ ಅಪಾಯವಾಗುತ್ತದೆ ಎಂಬುದಕ್ಕೆ ಗಣಪತಿಯವರ ಆತ್ಮಹತ್ಯೆ ಘಟನೆ ಒಂದು ನಿದರ್ಶನವಷ್ಟೇ.

ಕೊಡಗು ಜಿಲ್ಲೆಯಲ್ಲಿ ಬಿಜೆಪಿ ಸಕ್ರಿಯವಾಗಿ ಬೀದಿಗೆ ಇಳಿದಿದ್ದು, ರಾಜ್ಯ ಸರಕಾರದ ವಿರುದ್ಧ ಪ್ರತಿಭಟನೆಗೆ ಶಾಲಾ ಮತ್ತು ಕಾಲೇಜು ಮಕ್ಕಳನ್ನು ಕೂಡ ಬಳಸಿಕೊಳ್ಳುತ್ತಿದೆ. ಗಣಪತಿ ಸ್ಥಳೀಯ ಎನ್ನುವ ಕಾರಣಕ್ಕಾಗಿ ಈ ಪ್ರತಿಭಟನೆಯಾಗಿದ್ದರೆ ಅದಕ್ಕೆ ಗೌರವ ಇರುತ್ತಿತ್ತು. ಆದರೆ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಜಾರ್ಜ್‌ರವರನ್ನು ಹಣಿಯಲು ಈ ಪ್ರಕರಣವನ್ನು ಬಿಜೆಪಿ ಬಳಸಿಕೊಳ್ಳುತ್ತಿರುವುದು ಮತ್ತು ಸತ್ಯಾಸತ್ಯತೆಯನ್ನು ಅರಿತುಕೊಳ್ಳಲು ಜಿಲ್ಲೆಯ ಜನರಿಗೆ ಅವಕಾಶ ನೀಡದಿರುವುದು ಸರಿಯಲ್ಲ.

ಗಣಪತಿ ಅವರು ಆತ್ಮಹತ್ಯೆ ಮಾಡಿಕೊಂಡದ್ದು ಸರಿಯಲ್ಲ, ಆದರೆ ಈ ಆತ್ಮಹತ್ಯೆಯನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದೂ ಸರಿಯಲ್ಲ. ತನಗೆ ಸರ್ಕಾರ ಹುದ್ದೆ ನೀಡಲಿಲ್ಲ ಎಂಬುದು ಗಣಪತಿ ಅವರ ಆರೋಪಗಳಲ್ಲಿ ಒಂದು. ಆದರೆ ಅದು ಸುಳ್ಳು. ಸರ್ಕಾರ ಅವರಿಗೆ ಯಾವುದೇ ಸ್ಥಳ ನೀಡದೆ ಕೂರಿಸಿರಲಿಲ್ಲ, ಬದಲಾಗಿ ಅವರಿಗೆ ಎಡಿಜಿಪಿ ಕಚೇರಿಯಲ್ಲಿ ಅವಕಾಶ ನೀಡಲಾಗಿತ್ತು. ಆದರೆ ಯಾವಾಗಲೂ ತನಗೆ ಎಕ್ಸಿಕ್ಯೂಟಿವ್ ಹುದ್ದೆಯೇ ಬೇಕು ಎನ್ನುವುದು ಸರಿಯಲ್ಲ, ಇದನ್ನು ಕಿರುಕುಳ ಅಥವ ಒತ್ತಡ ಎಂದು ಹೇಳಲು ಸಾಧ್ಯವಿಲ್ಲ.

ಗಣಪತಿ ಅವರು ಮಾನಸಿಕವಾಗಿ ಸರಿಯಾಗಿ ಇದ್ದ ಪಕ್ಷದಲ್ಲಿ ಅವರು ಯಾವುದಕ್ಕೂ ಅಂಜದೆ, ಸತ್ಯಾಂಶವನ್ನು ಬಯಲಿಗೆಳೆಯಲು ಹೋರಾಟ ಮಾಡಬೇಕಿತ್ತು. ಅಧಿಕಾರದಲ್ಲಿ ಇದ್ದುಕೊಂಡೇ ಗಣಪತಿಯವರಿಗೆ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಬೇಕಾದಷ್ಟು ಅವಕಾಶಗಳು ಇದ್ದವು. ತನಗೆ ಅಧಿಕಾರಿಗಳಿಂದಾಗಲಿ, ರಾಜಕಾರಣಿಗಳಿಂದಾಗಲಿ ಕಿರುಕುಳ ಇದೆ ಎಂಬುದನ್ನು ಗಣಪತಿ ಸಾಬೀತು ಮಾಡಲು ಅವಕಾಶವಿತ್ತು. ಅದನ್ನು ಬಳಸಿಕೊಳ್ಳದೆ ಹೇಡಿಯ ರೀತಿಯಲ್ಲಿ ಅವರು ಆತ್ಮಹತ್ಯೆಗೆ ಶರಣಾಗಿದ್ದಾರೆ.

■ ಬಿ.ಎನ್. ಮನುಶೆಟ್ಟಿ

ಡಿವೈಎಸ್‌ಪಿ ಗಣಪತಿ

ಎಂಥಾ ವ್ಯಕ್ತಿತ್ವ? ಏನೆಲ್ಲಾ ಘನಕಾರ್ಯ?



“ಸತ್ತವರ ಬಗ್ಗೆ ಕೆಟ್ಟದ್ದು ಮಾತಾಡಬಾರದಂತೆ. ಅದು ಇಸ್ಲಾಂ ನಮಗೆ ಕಲಿಸಿಕೊಟ್ಟ ಪಾಠ. ಆದರೆ ಎಂ.ಕೆ. ಗಣಪತಿ ಬಗ್ಗೆ ಏನಾದರೂ ಒಳ್ಳೆಯದನ್ನು ಮಾತಾಡೋಣವೆಂದು ವಿಷಯಕ್ಕಾಗಿ ಹುಡುಕ ಹೊರಟರೆ ಒಂದಾದರೂ ಒಳ್ಳೆಯದು ಸಿಗಬೇಕಲ್ಲವೆ? ಊಹ್ಞು; ಆ ಮನುಷ್ಯನ ಬದುಕಲ್ಲಿ ಒಳ್ಳೆಯದು ಅಂತ ಇದ್ದರೆ ತಾನೆ? ಎಲ್ಲವೂ ಕೆಟ್ಟದ್ದೇ...! ಜೀವನಪರ್ಯಂತ ಬರೀ ಕೆಟ್ಟದ್ದನ್ನೇ ಮಾಡುತ್ತಾ ಬಂದರೆ ಅಂತಿಮವಾಗಿ ಅದು ಕೆಡುಕಿನಲ್ಲೇ ಅಂತ್ಯಗೊಳ್ಳುವಂತೆ, ಡಿವೈಎಸ್‌ಪಿ ಗಣಪತಿ ಹಿಡಿದ ದಾರಿ ಅವರನ್ನು ಎಲ್ಲಿಗೆ ಮುಟ್ಟಿಸಬೇಕೋ ಅಲ್ಲಿಗೆ ಮುಟ್ಟಿಸಿದೆ...”

ಇದು ಮಂಗಳೂರಿನ ಬಹುಭಾಷಾ ಸಾಹಿತಿ ಮೊಹಮ್ಮದ್ ಬಡ್ಡೂರರು ಹೇಳಿದ ಮಾತು. ನಿಜ; ಒಬ್ಬ ವ್ಯಕ್ತಿ ಸತ್ತ ನಂತರ ಆತನ ಒಳಿತನ್ನಷ್ಟೇ ನೆನೆಸಿಕೊಳ್ಳುವುದು ಮನುಷ್ಯತ್ವ. ಸದ್ಯ ಸಂಘ ಪರಿವಾರ ಕಲ್ಲಪ್ಪ ಹಂಡಿಭಾಗ ರಂಥವರ ಒಳಿತನ್ನು ಬದಿಗೊತ್ತಿ ಗಣಪತಿಯವರನ್ನು ಹುತಾತ್ಮನನ್ನಾಗಿಸಹೊರಟಿದೆ. ತನ್ನ ಆತ್ಮಹತ್ಯೆಗೂ ಮುನ್ನ ಗಣಪತಿ ಮಂಗಳೂರಿನ ಚಾನಲ್ ಒನ್ ಎಂಬ ಸ್ಥಳೀಯ ಕೇಬಲ್ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ 'ನನ್ನನ್ನು ಮುಗಿಸಲು ಮಂತ್ರಿ ಕೆ.ಜೆ. ಜಾರ್ಜ್, ಲೋಕಾಯುಕ್ತ ಡಿಐಜಿ ಪ್ರಣಬ್ ಮೊಹಂತಿ ಮತ್ತು ಗುಪ್ತದಳದ ಎಡಿಜಿಪಿ ಅತೀಕ್ ಮೋಹನ್ ಪ್ರಸಾದ್ ಕಿರುಕುಳ ನೀಡುತ್ತಿದ್ದಾರೆ, ನನಗೇನಾದರೂ ಹೆಚ್ಚೂಕಮ್ಮಿಯಾದರೆ ಈ ಮೂವರೇ ಕಾರಣ...' ಎಂದು ಆರೋಪಿಸಿಯೇ ನೇಣಿಗೆ ಶರಣಾಗಿದ್ದಾರೆ ನಿಜ.

ಸಚಿವ ಕೆ.ಜೆ. ಜಾರ್ಜ್ ಬಗೆಗಿನ ಆರೋಪಗಳು ಒತ್ತಟ್ಟಿಗಿರಲಿ. ಆದರೆ ಲೋಕಾಯುಕ್ತ ಡಿಐಜಿ ಪ್ರಣಬ್ ಮೊಹಂತಿ ಕರ್ನಾಟಕ ಕಂಡ ದಕ್ಷ ಅಧಿಕಾರಿಗಳಲ್ಲೊಬ್ಬರು. ಹಾಗೇ ಗುಪ್ತದಳದ ಎಡಿಜಿಪಿ ಅತೀಕ್ ಮೋಹನ್ ಪ್ರಸಾದ್ ಇದ್ದುದರಲ್ಲಿ ನಿಷ್ಠೂರಿ ಮತ್ತು ಸಭ್ಯರು. ತಮ್ಮ ಜನ್ಮಾಪಿ ದಕ್ಷತೆ ಮತ್ತು ನಿಷ್ಠೂರತೆಗೆಂದೇ ಹೆಸರಾದ ಈ ಇಬ್ಬರು ಅಧಿಕಾರಿಗಳ ಜೊತೆ ಸಚಿವ ಜಾರ್ಜ್‌ರ ಹೆಸರನ್ನೂ ಸೇರಿಸಿ ಆತ್ಮಹತ್ಯೆ ಮಾಡಿಕೊಳ್ಳುವಂತಹ ಅನಿವಾರ್ಯತೆಯಾದರೂ ಗಣಪತಿಗೇನಿತ್ತು? ಗಣಪತಿಯವರ ಪ್ರಕಾರವೇ 'ಕಿರುಕುಳ' ವೆಂದರೆ ಏನು? ಏಕೆಂದರೆ ಇವರ್‍ಯಾರು ಸದ್ಯದ ಅವರ ಪೊಲೀಸ್‌ಗಿರಿಗೆ ನೇರವಾಗಿ ಸಂಬಂಧಪಟ್ಟವರಲ್ಲದೆ ಹೋದರೂ ಏಕೆ ಈ ಮೂವರ ವಿರುದ್ಧವೇ ಗಣಪತಿಗೆ ಸಿಟ್ಟು?

ಇದಕ್ಕೆ ಸಂಬಂಧಪಟ್ಟಂತೆ ಡಿವೈಎಸ್‌ಪಿ ಗಣಪತಿಯ ವಿರುದ್ಧ ಒಂದು ಇಲಾಖೆ ತನಿಖೆ, ಲೋಕಾಯುಕ್ತದಲ್ಲಿ ಮತ್ತೊಂದು ಪ್ರಕರಣ ಸೇರಿದಂತೆ ಒಟ್ಟು ನಾಲ್ಕು ಪ್ರಕರಣಗಳು ಬಾಕಿಯಿವೆ. ಈ ಪೈಕಿ ಮೊದಲನೆಯದ್ದು 2008ರಲ್ಲಿ ಅವರು ಮಂಗಳೂರಿನ ಕದ್ರಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಆಗಿದ್ದಾಗ ಚರ್ಚ್‌ಗೆ ನುಗ್ಗಿ ಕ್ರೈಸ್ತ ಸನ್ಯಾಸಿನಿಯರ ಮೇಲೆ ದೌರ್ಜನ್ಯವೆಸಗಿದ್ದು, ಮತ್ತೊಂದು ಬೆಂಗಳೂರಿನ ರಾಜಗೋಪಾಲ ನಗರಕ್ಕೆ ಇನ್ಸ್‌ಪೆಕ್ಟರ್ ಆಗಿದ್ದಾಗ ಆರೋಪಿಯಿಂದ ವಶಪಡಿಸಿಕೊಂಡ ಲಕ್ಷಾಂತರ ರೂಪಾಯಿಗಳನ್ನು ಕಾನೂನುಬಾಹಿರವಾಗಿ ದುರುಪಯೋಗಪಡಿಸಿಕೊಂಡಿದ್ದು ಮತ್ತು ಮಡಿವಾಳ ಪೊಲೀಸ್ ಠಾಣೆಯಲ್ಲಿ ಪೊಲೀಸರು ವಶಪಡಿಸಿಕೊಂಡ ಕದ್ದ ಮಾಲುಗಳನ್ನು ದುರುಪಯೋಗಪಡಿಸಿಕೊಂಡಿದ್ದು. ಇದಲ್ಲದೆ ಯಶವಂತಪುರ ಪೊಲೀಸ್ ಠಾಣೆಯಲ್ಲಿದ್ದಾಗ ನಕಲಿ ಎನ್‌ಕೌಂಟರ್ ಮೂಲಕ ಪಚ್ಚಿ ಅಲಿಯಾಸ್ ಪ್ರಶಾಂತನೆಂಬ ಹಳೇ ರೌಡಿಯೊಬ್ಬನನ್ನು ಅನ್ಯಾಯವಾಗಿ ಕೊಂದು ಹಾಕಿದ ಮಗದೊಂದು ಪ್ರಕರಣ.

ಸಚಿವ ಕೆ.ಜೆ. ಜಾರ್ಜ್ ತನಗೆ ಕಿರುಕುಳ ನೀಡುತ್ತಿದ್ದಾರೆ, ಎಡಿಜಿಪಿ ಎ.ಎಂ. ಪ್ರಸಾದ್‌ರೇ ತನ್ನ ಸಾವಿಗೆ ಕಾರಣ ಎಂಬ ಗಣಪತಿಯವರ ಹೇಳಿಕೆಯ ಹಿಂದಿರುವ ಕಾರಣವಾದರೂ ಎಂಥಾದ್ದು? ಇಲ್ಲಿ ಉದ್ದೇಶಪೂರ್ವಕವಾಗಿ ಸರ್ಕಾರ ಗಣಪತಿಯವರನ್ನೇ ಆಯ್ದು ಬಲಿಪಶುವಾಗಿಸಿದೆ ಎಂಬುದಕ್ಕೆ ಏನಾದರೂ ಆಧಾರವಿದೆಯೆ?

ಹಾಗೆ ನೋಡಿದರೆ ಮಂಗಳೂರಿನ ಚರ್ಚ್‌ಗಳ ಮೇಲಿನ ದಾಳಿ ನಡೆದದ್ದು 2008ರಲ್ಲಿ, ಆಗ ಗಣಪತಿ ಕದ್ರಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್. ಆಗ ಅಧಿಕಾರದಲ್ಲಿದ್ದದ್ದು ಬಿಜೆಪಿ. ಕುಲಶೇಖರದ ಚರ್ಚ್‌ನೊಳಕ್ಕೆ ಸೇರಿಕೊಂಡಿದ್ದ



ಪ್ರಣಬ್ ಮೊಹಂತಿ-ಕೆ.ಜೆ. ಜಾರ್ಜ್-ಎ.ಎಂ. ಪ್ರಸಾದ್

ಪ್ರತಿಭಟನಾನಿರತ ಕ್ರಿಶ್ಚಿಯನ್ನರ ಪೈಕಿ ಕೆಲ ಹುಡುಗರು ಹಿಂಸೆಗಿಳಿದು ಪೊಲೀಸರ ಮೇಲೆ ಕಲ್ಲು ತೂರಲಾರಂಭಿಸಿದ್ದರಿಂದ ವಿಧಿಯಿಲ್ಲದೆ ಪೊಲೀಸರು ಚರ್ಚಗೇ ನುಗ್ಗಿ ಲಾಠಿ ಬೀಸಬೇಕಾಯಿತು. ಸದರಿ ಲಾಠಿ ಚಾರ್ಜ್‌ನಲ್ಲಿ ಗಣಪತಿಯೊಬ್ಬರೇ ಇರಲಿಲ್ಲ, ಜಯಂತ್ ಶೆಟ್ಟಿ ಸೇರಿದಂತೆ ಇನ್ನೂ ಅನೇಕ ಪೊಲೀಸ್ ಅಧಿಕಾರಿಗಳಿದ್ದರು. ಈ ಬಗ್ಗೆ ನ್ಯಾಯಮೂರ್ತಿ ಸೋಮಶೇಖರ್ ಆಯೋಗ ಸಮಗ್ರವಾಗೇ ವಿಚಾರಣೆ ನಡೆಸಿ ಲಾಠಿಚಾರ್ಜ್‌ನ ಅನಿವಾರ್ಯತೆ ಮನಗಂಡು ಪೊಲೀಸರೆಲ್ಲರನ್ನೂ ಆರೋಪಮುಕ್ತವಾಗಿಸಿತ್ತು.

ಯಾವತ್ತು ಕಾಂಗ್ರೆಸ್ ಅಧಿಕಾರಕ್ಕೆ ಬಂದು ಜಾರ್ಜ್ ಗೃಹಮಂತ್ರಿಯಾಗಿ ಮಂಗಳೂರಿಗೆ ಬಂದರೋ ಕ್ರೈಸ್ತ ಪ್ರಮುಖರೆಲ್ಲ ಸೇರಿ ಮತ್ತೆ ಈ ಪ್ರಕರಣದ ಕುರಿತಂತೆ ತನಿಖೆ ನಡೆಸುವಂತೆ ಮನವಿ ಕೊಟ್ಟರು. ಸಹಜವಾಗೇ ಈ ಪ್ರಕರಣದ ಇಲಾಖಾ ವಿಚಾರಣೆಗೆ ಆದೇಶಿಸಿದ ಜಾರ್ಜ್ ಒಬ್ಬ ಗೃಹಮಂತ್ರಿಯಾಗಿ ಬೇರೆ ಏನು ತಾನೇ ಮಾಡಲು ಸಾಧ್ಯವಿತ್ತು?

ಅಷ್ಟಕ್ಕೂ ಘಟನೆ ನಡೆದದ್ದು ಕದ್ರಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಾದ್ದರಿಂದ ಆ ಸಂದರ್ಭದಲ್ಲಿ ಠಾಣಾಧಿಕಾರಿಯಾಗಿ ಗಣಪತಿ ಇದ್ದರಾದ್ದರಿಂದ ಇಡೀ ಘಟನೆಗೆ ಅವರನ್ನೇ ತಾನೇ ಸರ್ಕಾರ ಹೊಣೆ ಮಾಡಬೇಕು? ತಮ್ಮೊಂದಿಗೆ ಕೆಲ ಭಜರಂಗಿ ಕಟ್ಟಾಳುಗಳನ್ನು ಜೊತೆ ಹಾಕಿಕೊಂಡು ಅವರುಗಳು ಹೆಲ್ಮೆಟ್ ಧಾರಿಗಳಾಗಿ ಕ್ರಿಸ್ತ ಸನ್ಯಾಸಿನಿಯರ ಮೇಲೆ ಲಾಠಿ ಬೀಸಿದರೆಂಬ ಆರೋಪ ನಿಜವೇ ಆಗಿದ್ದರೆ ಈ ಬಗ್ಗೆಯೂ ವಿಚಾರಣೆಯ ಸತ್ಯಾಸತ್ಯತೆ ಹೊರಬರುತ್ತಿತ್ತು. ಗಣಪತಿ ಹೇಳಿಕೇಳಿ ಆರೆಸ್ಸೆಸ್ ಬಗ್ಗೆ ಸಹಾನುಭೂತಿಯಿಂದಿದ್ದ ನಿದರ್ಶನಗಳಿಲ್ಲವೆಂದಲ್ಲ. ದಕ್ಷಿಣ ಕನ್ನಡದ ಅನೇಕ ಪೊಲೀಸ್ ಠಾಣೆಗಳಲ್ಲಿ ಅವರು ಸೇವೆ ಸಲ್ಲಿಸುತ್ತಾ ಬಂದಾಗಿನಿಂದಲೂ ಸಂಘ ಪರಿವಾರದ ಹಾವಳಿಗಳ ವಿರುದ್ಧ ಮೆದುವಾಗಿದ್ದಕ್ಕೂ ಸಾಕ್ಷ್ಯಾಧಾರಗಳಿದ್ದವು. ಆದರೂ ಕ್ರೈಸ್ತ ಧುರೀಣರುಗಳು ಕೊಟ್ಟ ದೂರಿನ ಮೇರೆಗಷ್ಟೇ ಸಚಿವ ಜಾರ್ಜ್ ಇಲಾಖಾ ತನಿಖೆಗೆ ಆದೇಶಿಸಿದ್ದು ಬಿಟ್ಟರೆ ಹಾಗೆ ಆದೇಶಿಸುವಾಗಲೂ ಗಣಪತಿ ಹೆಸರನ್ನೇನೂ ವಿಶೇಷವಾಗಿ ಸೂಚಿಸಿರಲಿಲ್ಲ.

ಆಗ ಡಿಐಜಿಯಾಗಿದ್ದ ಅತೀಕ್ ಮೋಹನ್ ಪ್ರಸಾದ್ ಕೂಡ ಇಲಾಖಾ ವಿಚಾರಣೆಯ ಹೊಣೆ ಹೊತ್ತಿದ್ದರೆಂಬುದನ್ನು ಬಿಟ್ಟರೆ ಸರ್ಕಾರ ಬೇಕಂತಲೇ ಪ್ರಸಾದ್‌ರನ್ನು ಆಯ್ದು ತಂದು ವಿಚಾರಣೆಗೆ ನೇಮಿಸಿರಲಿಲ್ಲ, ವಿಚಾರಣೆಯಿನ್ನೂ ಒಂದು ಹಂತಕ್ಕೆ ಬರುವ ಮೊದಲೇ ಜಾರ್ಜ್ ಕೈಯಿಂದ ಇಲಾಖೆ ಬದಲಾಯಿತು. ಪರಮೇಶ್ವರ್ ಗೃಹಮಂತ್ರಿಯಾದರು. ಸಹಜವಾಗೇ ವಿಚಾರಣಾಧಿಕಾರಿಯಾಗಿದ್ದ ಪ್ರಸಾದ್ ಅದನ್ನು ಮುಂದುವರೆಸಬೇಕಾಯಿತು ಎಂಬುದನ್ನು ಬಿಟ್ಟರೆ ಇಲ್ಲಿ ವಿಶೇಷವಾಗಿ ಗಣಪತಿಯವರನ್ನೇ ಆಯ್ದು ಬಲಿಪಶುವಾಗಿಸಿದ ಲವಲೇಶವೂ ಇರಲಿಲ್ಲ.

ಇಲಾಖಾ ವಿಚಾರಣೆ ಬಾಕಿಯಿದ್ದ ಮೇಲೆ ಬಡ್ತಿ



ನೇಣು ಬಿಗಿದುಕೊಂಡ ಗಣಪತಿ

ಸಾಧ್ಯವಾಗುವುದಿಲ್ಲ, ಇದು ಕೇವಲ ಗಣಪತಿಗಷ್ಟೇ ಜಾರಿಗ ತಂದ ನಿಯಮಾವಳಿಯಲ್ಲ, ಅಂಥಾದ್ದರಲ್ಲಿ ಗಣಪತಿ ಜಾರ್ಜ್ ತನಗೆ ಕಿರುಕುಳ ನೀಡುತ್ತಿದ್ದಾರೆಂದೂ ತಮ್ಮ ವಿರುದ ಪ್ರಕರಣಗಳ ವಿಚಾರಣೆ ನಡೆಸುತ್ತಿರುವ ಅಧಿಕಾರಿಗಳ ಮೇಲೆಯೇ ಕಿಡಿಕಾರುತ್ತಿದ್ದಾರೆಂದರೆ ಅದಕ್ಕೆ ಕೇವಲ ಅವರಷ್ಟೇ ಹೊಣೆಯೇ ಹೊರತು ಬೇರೆ ಯಾರಾದರೂ ಕಾರಣವಾಗಲು ಹೇಗೆ ಸಾಧ್ಯ?

ಇದು ಗಣಪತಿಯವರೊಳಗಿದ್ದ ಸಂಘಿ ಮನಸ್ಥಿತಿಯ ಪ್ರತೀಕವಾಗಿಯಷ್ಟೇ ವ್ಯಕ್ತವಾಗುತ್ತದೆ. ಇಂಥಾದೊಂದು ಹತಾ ಸ್ಥಿತಿಗೆ ಗಣಪತಿ ಬಂದದ್ದು ಅವರ ಸ್ವಯಂಕೃತಾಪರಾಧಗಳ ಕಾರಣದಿಂದ ಮಾತ್ರ ಎಂಬುದಕ್ಕೆ ಚರ್ಚ್ ದಾಳಿಯ ನಂತರ ಅವರು ಕರ್ತವ್ಯ ನಿರ್ವಹಿಸಿದ ಬೆಂಗಳೂರಿನ ಯಶವಂತಪುರ ಮಡಿವಾಳ ಮತ್ತು ರಾಜಗೋಪಾಲನಗರ ಪೊಲೀಸ್ ಠಾಣೆಗಳಲ್ಲಿ ಅವರು ಎಸಗಿದ ದುರಾಚಾರಗಳೇ ಸಾಕ್ಷಿ.

ಮಂಗಳೂರಿನ ಚರ್ಚ್ ದಾಳಿಯಲ್ಲಿ ಕ್ರೈಸ್ತರ ಮೇಲೆ ಮೆರೆದ ಪೌರುಷಕ್ಕೆ ಪ್ರತಿಯಾಗಿ ಬಿಜೆಪಿ ಸರ್ಕಾರ ಗಣಪತಿಗೆ ಬೆಂಗಳೂರಿನ ಅತ್ಯಂತ ಆಯಕಟ್ಟಿನ ಯಶವಂತಪುರ ಪೊಲೀಸ್ ಠಾಣೆಯನ್ನೇ ಧಾರೆಯೆರೆಯಿತು. ಕರಾವಳಿಯ ಆರೆಸ್ಸೆಸ್ ಅಧಿಪತಿ ಕಲ್ಲಡ್ಕ ಪ್ರಭಾಕರ್ ಭಟ್ಟರೇ ಶೋಭಾ ಕರಂದ್ಲಾಜೆಯನ್ನು ಕರೆದು 'ಈತ ನಮ್ಮಾಳು. ಇವನಿಗ ನಿಮ್ಮ ಯಶವಂತಪುರ ಠಾಣೆಯನ್ನೇ ಕೊಡಬೇಕು...' ಎಂದು ಆದೇಶಿಸಿದ್ದರಂತೆ. ಇನ್ನು ಶೋಭಕ್ಕೆ ಕೇಳಬೇಕೆ? ಆ ಹೊತ್ತಿಗ ಶೋಭಾ ಯಶವಂತಪುರಕ್ಕೆ ಶಾಸಕಿಯಾಗಿದ್ದರಲ್ಲ, ಹಾಗ ಶೋಭಕ್ಕನ ಮೂಲಕ ಅತ್ಯಂತ ಪ್ರಭಾವಿ ಗೆಟ್ಟಪ್‌ನಲ್ಲೇ ಯಶವಂತಪುರಕ್ಕೆ ವಕ್ಕರಿಸಿದ ಗಣಪತಿ ಅಲ್ಲಿ ಮಾಡಿದ ಅನಾಚಾರಗಳು, ಅನ್ಯಾಯಗಳು, ಒಂದಾ ಎರಡಾ?

ಆ ಹೊತ್ತಿಗೆ ಯಶವಂತಪುರದ ತ್ರಿವೇಣಿ ರಸ್ತೆಯ ಫ್ಲಾಟ್ ಒಂದರಲ್ಲಿ ತಂಗುತ್ತಿದ್ದರು ಗಣಪತಿ. ಇದರ ಲಾಭ ಪಡೆದವಳು ಇದೇ ಯಶವಂತಪುರ ಸುಭೇದಾರ್ ಪಾಳ್ಯದ ವೀಣಾ ಆಲಿಯಾಸ್ ಚಿನ್ನಿ ಎಂಬ ನಟೋರಿಯಸ್ ಹೆಂಗಸು. ಈಕೆ ಸುಭೇದಾರ್ ಪಾಳ್ಯದ ಮತ್ತೊಬ್ಬ ಖತರ್‌ನಾಕ್ ಕಲಾವತಿ ಎಂಬಾಕೆಯ ಶಿಷ್ಯೆ, ಈಕೆಯ ಗಂಡ ಆಟೋಚಾಲಕ ಕುಡುಕ ಮತ್ತು ವಂಚಕ. ಬೇಕಾಬಿಟ್ಟಿ ಚೀಟಿ ನಡೆಸುತ್ತಿದ್ದ ಚಿನ್ನಿ ಯಾರಿಗೆಲ್ಲ ಟೋಪಿ ಇಕ್ಕಿದ್ದಳೋ ಅಂಥವರ್‍ಯಾರೂ ಆಕೆಯ ಮನೆ ಬಳಿ ಸುಳಿಯದ ಹಾಗೆ ನೋಡಿಕೊಳ್ಳುತ್ತಿದ್ದದ್ದು ಇನ್ಸ್‌ಪೆಕ್ಟರ್ ಗಣಪತಿ.

ಪೀಣ್ಯದ ಮೂಲಕ ಬೆಂಗಳೂರಿಗೆ ಎಂಟ್ರಿಯಾಗುವ ಕಲಬೆರಕೆ ಆಯಿಲ್, ಸೆಕೆಂಡ್ಸ್ ಲಿಕ್ಕರ್, ಕಾನ್ಸೆಂಟ್ರೇಟೆಡ್ ಸ್ಪಿರಿಟ್, ಬಿಲ್ ಇಲ್ಲದ ಸ್ಟೀಲು, ಸ್ಮಗ್ಲಿಂಗ್ ಗೂಡ್ಸುಗಳ ಆದಾಯ ಯಾವ ಮಟ್ಟಕ್ಕೆ ಇತ್ತೆಂದರೆ ಯಶವಂತಪುರಕ್ಕೆ ಯಾರೇ ಇನ್ಸ್‌ಪೆಕ್ಟರ್ ಆಗಿಬಂದರೂ ತಿಂಗಳೊಂದಕ್ಕೆ ಮೂವತ್ತು ಲಕ್ಷಕ್ಕಂತೂ ಕಮ್ಮಿಯಿಲ್ಲ, ಇದೇ ಹೊತ್ತಿಗೆ ಚೀಟಿ ನಡೆಸುತ್ತಿದ್ದ ಚಿನ್ನಿ ಮತ್ತಾಕೆಯ ಗ್ಯಾಂಗ್ ಹಾಗೂ ಆಕೆಯ ಗಾಡ್‌ಮದರ್ ಕಲಾವತಿ ಮತ್ತಾಕೆಯ ರೌಡಿ ಪುತ್ರನ ಪಡೆ ಜಯಲಕ್ಷ್ಮಿ ಎಂಬ ಸಮಾಜಸೇವಕಿಯನ್ನು ನಡುರಸ್ತೆಯಲ್ಲಿ ಅಟ್ಟಾಡಿಸಿ ಕೊಲ್ಲಲೆತ್ನಿಸಿತು. ಅಷ್ಟಕ್ಕೂ ಜಯಲಕ್ಷ್ಮಿ ಮಾಡಿದ ತಪ್ಪೆಂದರೆ ತನಗೆ ಚಿನ್ನಿ ಕೊಡಬೇಕಿದ್ದ ಮೂರೂವರೆ ಲಕ್ಷವನ್ನು ಕೇಳಲು ಆಕೆಯ ಮನೆಗೆ ಹೋಗಿದ್ದು!

ಮೈಯೆಲ್ಲಾ ರಕ್ತ ಸುರಿಸುತ್ತಾ ಜಯಲಕ್ಷ್ಮಿ ಯಶವಂತಪುರ ಪೊಲೀಸ್ ಠಾಣೆಗೆ ಹೋದರೆ ಅದಕ್ಕೂ ಮೊದಲೇ ಚಿನ್ನಿ ಮತ್ತು ಕಲಾವತಿ ಇನ್ಸ್‌ಪೆಕ್ಟರ್ ಗಣಪತಿ ಛೇಂಬರಿನಲ್ಲಿ ಕಾಲಮೇಲೆ ಕಾಲುಹಾಕಿ ಕೂತಿದ್ದರು. ಜಯಲಕ್ಷ್ಮಿಯ ದೂರು ಕಸದಬುಟ್ಟಿ ಸೇರಿತು. ಅಷ್ಟೇ ಅಲ್ಲ, ಇದಾಗಿ ಎರಡೇ

ಬಿಜೆಪಿ ಮೊಸಳೆ ಕಣ್ಣೀರು: ಕೊಂದ ಪಾಪ ತಿಂದು ಪರಿಹಾರ!



ಕಲ್ಲಡ್ಕ ಭಟ್ಟ



ಮಂಗಳೂರಿನ ಚರ್ಚ್ ದೌರ್ಜನ್ಯವಾಗಲಿ, ಯಶವಂತಪುರ ಮತ್ತು ರಾಜಗೋಪಾಲನಗರ ಪೊಲೀಸ್ ಠಾಣೆಗಳಲ್ಲಿ ಗಣಪತಿ ಮಾಡಿದ ಪಾಪಗಳಾಗಲಿ ನಡೆದದ್ದು ಬಿಜೆಪಿ ಆಳ್ವಿಕೆಯಲ್ಲೇ. ಗಣಪತಿ ಯಶವಂತಪುರ ಪೊಲೀಸ್ ಠಾಣೆಯಲ್ಲಿ ನಡೆಸಿದ ದೌರ್ಜನ್ಯಗಳ ಕುರಿತಂತೆ 2010 ರಲ್ಲೇ ಪತ್ರಿಕೆ ಒಂದಲ್ಲ ಎರಡು ವರದಿಗಳನ್ನು ಪ್ರಕಟಿಸಿತ್ತು, ನಕಲಿ ಎನ್‌ಕೌಂಟರ್ ವಿರುದ್ಧ ಟಿವಿಗಳು ವಿಶೇಷ ವರದಿ ಬಿತ್ತರಿಸಿದ್ದವು. ಕಲ್ಲಡ್ಕ ಪ್ರಭಾಕರ ಭಟ್ಟನ ಚೇಲಾಗಿರಿ ಮತ್ತು ಶೋಭಾ ಕರಂದ್ಲಾಜೆಯ ಗಾಡ್‌ಮದರ್‌ಗಿರಿ ಇದ್ದು ಬಿಟ್ಟರೆ ಪೊಲೀಸ್ ಇಲಾಖೆಯ ಯಾರೇ ಉನ್ನತಾಧಿಕಾರಿಗಳೂ ತನ್ನನ್ನು ಮುಟ್ಟಲಾರರೆಂಬ ವಿಪರೀತಕ್ಕೆ ಬಿದ್ದೇ ಗಣಪತಿ ಪಾಪದ ಮೇಲೆ ಪಾಪವನ್ನೆಸಗುತ್ತಲೇ ಬಂದರು.

ಬಿಜೆಪಿ ಆಳ್ವಿಕೆಯಲ್ಲಿ ಗಣಪತಿಯ ಅಟ್ಟಹಾಸ ಮತ್ತು ಇದರ ವಿರುದ್ಧ ಪತ್ರಿಕೆ, ಟಿವಿಗಳು ಮಾಡಿದ ವರದಿಗಳನ್ನು ಗಮನಿಸಿಯೂ ಸರ್ಕಾರವೊಂದು ತಪ್ಪಿತಸ್ಥ ಪೊಲೀಸ್ ಅಧಿಕಾರಿಯೊಬ್ಬನಿಗೆ ಮೇಲಿಂದ ಮೇಲೆ ಆಯಕಟ್ಟಿನ ಫಲವತ್ತಾದ ಪೊಲೀಸ್ ಠಾಣೆಗಳನ್ನೇ ನೀಡುತ್ತದೆಯೆಂದರೆ ಅದು ಅತನ ದುರಾಚಾರಗಳಿಗೆ ಕೊಟ್ಟ ಸರ್ಕಾರಿ ಕುಮ್ಮಕ್ಕಲ್ಲದೆ ಮತ್ತೇನು? ಬಿಜೆಪಿ ಆಳ್ವಿಕೆಯಲ್ಲಿ ಮಾಡಿದ ಪಾಪಗಳೇ ಇವತ್ತು ಗಣಪತಿಯ ಬಡ್ತಿಗೆ ಮುಳುವಾಯಿತು. ತನಗಿಂತ ತನ್ನ ತಮ್ಮನಿಗೇ ಮೊದಲು ಬಡ್ತಿ ಸಿಕ್ಕಿದ್ದು ಮತ್ತಷ್ಟು ಮುಖಭಂಗಕ್ಕೆ ಕಾರಣವಾಯಿತು. ಕುಡಿತ, ಸಿಗರೇಟು ವಿಪರೀತವಾಗಿ ಮನೋಖಿನ್ನತೆಗೀಡಾದ ಗಣಪತಿಗೆ ತಾನು ಮಾಡಿದ ದುರಾಚಾರಗಳಿಂದ ಅಷ್ಟು ಸುಲಭಕ್ಕೆ ಬಚಾವಾಗುವುದು ಸಾಧ್ಯವಿಲ್ಲ ಎಂಬುದು ಮನದಟ್ಟಾಗಿತ್ತು, ಆಗ ಬಿಜೆಪಿಯೇ ಗಣಪತಿಯನ್ನು ಹುತಾತ್ಮನಾಗಿಸಹೊರಟಿದೆ. ಬಿಜೆಪಿ ಆಳ್ವಿಕೆಯುದ್ದಕ್ಕೂ ಮೇಲಿಂದ ಮೇಲೆ ಗಣಪತಿಯ ದುರ್ನಡತೆ, ದುರಾಚಾರಕ್ಕೆ ಸಿಕ್ಕ ಪ್ರೋತ್ಸಾಹವೇ ಅವರನ್ನು ನೇಣಿನ ಕುಣಿಕೆಯ ತನಕ ತಂದು ನಿಲ್ಲಿಸಿದೆ. ಕೊಂದ ಪಾಪ ತಿಂದು ಪರಿಹಾರವೆಂಬಂತೆ ತಾನೇ ಎಸಗಿದ ಪಾಪಕ್ಕೆ ಬಿಜೆಪಿಯೀಗ ಮೊಸಳೆ ಕಣ್ಣೀರು ಸುರಿಸುತ್ತಿದೆ.



...ಗೆ ಯಾವುದೋ ಚೊಟ್ಟು ಕೇಸೊಂದರಲ್ಲಿ ...ಲಕ್ಷ್ಮಿಯನ್ನು ಸಿಲುಕಿಸಿದ ಇನ್ಸ್‌ಪೆಕ್ಟರ್ ಗಣಪತಿ ...ಯನ್ನು ಠಾಣೆಗೆ ಎಳೆದೊಯ್ದು ಕೈಗೆ ಸ್ಲೇಟು ಕೊಡಿಸಿ ...ಟೋ ತೆಗೆಸಿ ಎಲ್ಲಾ ಪತ್ರಿಕೆಗೂ ಕಳಿಸಿಕೊಟ್ಟಿದ್ದ. ...ರೂಪದ ಲಕ್ಷಕ್ಕೂ ನಾಮ. ಸಾಮಾಜಿಕವಾಗಿ ಈ ...ರ ಅವಮಾನ. ಪಾಪ, ಜಯಲಕ್ಷ್ಮಿ ಆತ್ಮಹತ್ಯೆ ...ಕೊಳ್ಳದೇ ಇದ್ದದ್ದೇ ಹೆಚ್ಚು. ಈ ಕಾರಣಕ್ಕೇ ಆಕೆಯ ... ಮನೆಬಿಟ್ಟು ಹೋದ. ಸುಭೇದಾರ್ ಪಾಳ್ಯದ ತನ್ನ ...ಯನ್ನೇ ಖಾಲಿ ಮಾಡಿಕೊಂಡು ಕಣ್ಮರೆಯಾದ ...ಲಕ್ಷ್ಮಿ ಇವತ್ತಿಗೂ ಬೀದಿಪಾಲು.

...ತ್ರಿವೇಣಿ ರಸ್ತೆಯ ಇನ್ಸ್‌ಪೆಕ್ಟರ್ ಗಣಪತಿ ಸಾಹೇಬರ ...ಗೆ ಸುಭೇದಾರ್ ಪಾಳ್ಯದ ಚಿನ್ನಿಯಂತೆ ಬರುತ್ತಿದ್ದ ...ಬ್ಬಳು ಹೆಂಗಸೆಂದರೆ ಆಕೆ ಮತ್ತಿಕೆರೆಯ ರೇಖಾ. ...ಂದು ದಿನ ತನ್ನ ಗೆಳತಿಯೊಬ್ಬಳನ್ನು ಕರೆತಂದು. ...ಗೆ ರೌಡಿಯೊಬ್ಬ ತೊಂದರೆ ಕೊಡುತ್ತಿದ್ದಾನೆ ಎಂದು ...ತಿಯ ತಲೆ ತಿಕ್ಕಿದಳು. ಇನ್ನು ಸಾಹೇಬರು ಕೇಳಬೇಕೆ? ...ದರೂ ತೊಂದರೆ ಕೊಡುತ್ತಿದ್ದಾತ ಅದೇ ಯಶವಂತಪುರ ...ಯ ರೌಡಿಶೀಟರ್ ಬೇರೆ. ಎದುರು ಲಲನೆಯರು, ...ಟದಲ್ಲಿ ರಿವಾಲ್ವರ್, ಎದೆಯೊಳಗೆ ಗಿಟ್ಟಾರು. ಹೋಗಿದ್ದೇ ...ಂತ ಅಲಿಯಾಸ್ ಪಚ್ಚಿ ಎಂಬ ಮಾಜಿ ರೌಡಿಯನ್ನು



ಗಣಪತಿಗೆ ಬಲಿಯಾದ ಜಯಲಕ್ಷ್ಮಿ

...ತ್ತಿ ತಂದಿದ್ದೇ ರಸ್ತೆ ಸಂದಿಯೊಂದರಲ್ಲಿ ಢಮ್ಮೆನಿಸಿಬಿಟ್ಟರು. ...ವುದೋ ಕಾಲಕ್ಕೆ ರೌಡಿ ಹಣೆಪಟ್ಟಿ ಹೊತ್ತಿದ್ದ ಪಚ್ಚಿ ...ಪೆಕ್ಟರ್ ಗಣಪತಿಯ ರಿವಾಲ್ವರ್‌ಗೆ ಬಲಿಯಾಗಿ ರಸ್ತೆ ...ವಾಗಿ ಬಿದ್ದಿದ್ದ.

...ಇದು ಗುಂಡಿಟ್ಟು ಕೊಲ್ಲುವಂತ ಅಪರಾಧವಾಗಿರಲಿಲ್ಲ. ... ನಾಲ್ಕು ಬಾರಿಸಿದ್ದರೆ ಸರಿಹೋಗಬಹುದಾಗಿದ್ದ ...ಣವನ್ನು ಹೆಂಗಸರ ಖಯಾಲಿಗೆ ಬಿದ್ದು ಗಣಪತಿ ... ಎನ್‌ಕೌಂಟರ್ ಮಟ್ಟಕ್ಕೆ ಕೊಂಡೊಯ್ದಿದ್ದ. ಈ ... ಇವತ್ತಿಗೂ ಪಚ್ಚಿಯ ತಂದೆತಾಯಿ ಮಗನ ಹತ್ಯೆಗೆ ... ಕೋರಿ ಕೋರ್ಟಿಗೆ ಅಲೆಯುತ್ತಿದ್ದಾರೆ. ಗಣಪತಿ ...ಹತ್ಯೆ ಮಾಡಿಕೊಂಡ ಸುದ್ದಿ ಕೇಳಿದ್ದೇ ಪಟಾಕಿ ತರಿಸಿ ...ಮಾಚರಣೆ ಮಾಡುತ್ತಾರೆಂದರೆ ಅವರ ಹೊಟ್ಟೆ ಸಂಕಟ ...ಬೇಡ? ಗಣಪತಿಯ ಬೇಜವಾಬ್ದಾರಿತನದ ಕಾರಣಕ್ಕೇ ...ವಂತಪುರದ ಅಮಾಯಕನೊಬ್ಬ ಕೊಲೆಯಾದ.

...ಇಷ್ಟಾಯಿತಲ್ಲ; ಇದಾದನಂತರ ಗಣಪತಿ ಬಂದದ್ದು ...ವಾಳಕ್ಕೆ. ಅದೂ ಕೂಡ ಬೊಮ್ಮನಹಳ್ಳಿಯ ಬಿಜೆಪಿ ... ಸತೀಶ್ ರೆಡ್ಡಿಯ ಕ್ಷೇತ್ರಕ್ಕೆ ಸೇರಿತ್ತು. ಮಡಿವಾಳದಲ್ಲಿದ್ದ ...ಷೋತ್ತಮ್ ಯಶವಂತಪುರಕ್ಕೆ ಬಂದರೆ ಇಲ್ಲಿದ್ದ ಗಣಪತಿ ...ವಾಳಕ್ಕೆ. ಶೋಭಕ್ಕನ ಕೃಪೆಯಿತ್ತಲ್ಲ, ಗಣಪತಿ ಆಡಿದ್ದೇ ... ಆದರೆ ಎಲ್ಲಾ ಪಾಪಗಳಿಂದಲೂ ಪಾರಾಗಲು ...ಇಲ್ಲ ತಾನೆ? ಮಡಿವಾಳದಲ್ಲಿ ನಡೆದಿದ್ದ ಆಭರಣ ...ಗೆಯೊಂದರ ದರೋಡೆಗೆ ಸಂಬಂಧಪಟ್ಟಂತೆ ...ರಾಧಿಗಳಿಂದ ವಶಪಡಿಸಿಕೊಂಡಿದ್ದ ಅನೇಕ ಆಭರಣಗಳನ್ನು ಠಾಣೆಯ ರಿಜಿಸ್ಟರ್‌ನಲ್ಲಿ ದಾಖಲಿಸಿರಲೇ ಇಲ್ಲ. ಇದರರ್ಥ ದರೋಡೆಯ ಒಡವೆಗಳನ್ನು ಠಾಣಾಧಿಕಾರಿಯಾಗಿ ಗಣಪತಿ ಲಪಟಾಯಿಸಿದ್ದರು ಎಂಬ ಆರೋಪ!

ಈ ಬಗ್ಗೆ ಇವತ್ತಿಗೂ ಇಲಾಖಾ ವಿಚಾರಣೆ ನಡೆಯುತ್ತಿದೆ. ಇದೇನಾದರೂ ಸಾಬೀತಾಯಿತೆಂದರೆ ಗಣಪತಿ ಹುದ್ದೆಯಿಂದ



ಡಿಸ್‌ಮಿಸ್ ಆಗುವುದು ಶತಸ್ಸಿದ್ಧವಾಗಿತ್ತು. ಇದಕ್ಕೂ ಮೊದಲೇ ಗಣಪತಿಗೆ ಉರುಳಾಗಿದ್ದು ಲೋಕಾಯುಕ್ತದಲ್ಲಿ ಬಾಕಿಯಿದ್ದ ರಾಜಗೋಪಾಲನಗರ ಪೊಲೀಸ್ ಠಾಣೆಯ ಪಾಪ. ಮಡಿವಾಳದ ನಂತರ ರಾಜಗೋಪಾಲನಗರ ಪೊಲೀಸ್ ಠಾಣೆಗೆ ಬಿಜೆಪಿಯ ಸಖ್ಯವನ್ನೇ ಬಳಸಿ ವಕ್ಕರಿಸಿದ ಗಣಪತಿ ಅನಾಹುತಕಾರಿ ಪ್ರಮಾದವೆಸಗಿದ್ದು 2013ರಲ್ಲಿ. ಮೊಕದ್ದಮೆ ಸಂಖ್ಯೆ 521/2013ರ ಕಲಂ 457 ಮತ್ತು 380 ಐಪಿಸಿ ಪ್ರಕರಣದಲ್ಲಿ ರಂಗಸ್ವಾಮಿ ಎಂಬುವವರು ತನ್ನ 1 ಕೋಟಿ 56 ಲಕ್ಷ ರೂಪಾಯಿ ಕಳುವಾಗಿದೆ ಎಂದು ದೂರಿತ್ತಿದ್ದರು.

ಕಾನೂನುರೀತ್ಯ ಇದು ಘೋರ ಅಪರಾಧ. ಆದರೆ ಗಣಪತಿ ಇದನ್ನು ಸಾಮಾನ್ಯ ಅಪರಾಧವೆಂದು ದಾಖಲಿಸಿ ಮೇಲಧಿಕಾರಿಗಳಿಗೆ ತಿಳಿಸದೇ ಮುಚ್ಚಿಟ್ಟರು. ದೂರು ದಾಖಲಾದ ಎರಡು ದಿನಗಳ ನಂತರ ನಾಗೇಂದ್ರ ಎಂಬಾತ ಕಟ್ಟಿಸುತ್ತಿದ್ದ ಹೊಸ ಮನೆಯಲ್ಲಿ 70 ಲಕ್ಷ ರೂಪಾಯಿ ಸಿಕ್ಕಿತ್ತು. ಹೀಗೆ ಜಪ್ತಿಯಾದ 70 ಲಕ್ಷವನ್ನು ಕಳವು ಪ್ರಕರಣದ ಕೇಸಿನ ರೀತ್ಯ ಅಮಾನತ್ತುಪಡಿಸಿಕೊಳ್ಳಬೇಕು. ಆದರೆ ಗಣಪತಿ ಇಷ್ಟೂ ದುಡ್ಡನ್ನು ಪಿರ್‍ಯಾದಿ ರಂಗಸ್ವಾಮಿಯ ಕೈಗೆ ಕೊಡುವಂತೆ ಸಬ್‌ಇನ್ಸ್‌ಪೆಕ್ಟರ್ ಗಿರೀಶ್‌ಗೆ ಆದೇಶಿಸುತ್ತಾರೆ. ಹಾಗೆ ಸಬ್‌ಇನ್ಸ್‌ಪೆಕ್ಟರ್ ಕೈಯಿಂದ ಪಿರ್‍ಯಾದಿಗೆ ಕೊಡಿಸಿದ 70 ಲಕ್ಷದಲ್ಲಿ ಗಣಪತಿ ಜೇಬಿಗಿಳಿಸಿದ ಮೊತ್ತವೆಷ್ಟೋ?

ರಂಗಸ್ವಾಮಿಯ 1 ಕೋಟಿ 56 ಲಕ್ಷ ರೂ.ಗಳ ಕಳುವಿನಲ್ಲಿ ಭಾಗಿಯಾಗಿದ್ದ ಪ್ರಕಾಶ್ ಎಂಬಾತನನ್ನು ಬಂಧಿಸದೇ ಬಿಟ್ಟು ಕಳಿಸುವಂತೆ ಸಬ್‌ಇನ್ಸ್‌ಪೆಕ್ಟರ್ ಗಿರೀಶ್‌ಗೆ ಆದೇಶಿಸಿದ ಗಣಪತಿ ಆತನ ಮನೆಯಲ್ಲಿದ್ದ 9 ಲಕ್ಷವನ್ನು ಠಾಣೆಗೆ ತರಿಸಿಕೊಂಡು ನೇರವಾಗಿ ಪಿರ್‍ಯಾದಿ ರಂಗಸ್ವಾಮಿಗೆ ಕೊಡಿಸಿದ್ದಾರೆ. ಅಲ್ಲಿಗೆ ಒಟ್ಟು 79 ಲಕ್ಷವನ್ನು ಯಾವುದೇ ಕಾನೂನು ಪ್ರಕ್ರಿಯೆಯಿಲ್ಲದೆ ನೇರವಾಗಿ ರಂಗಸ್ವಾಮಿಗೆ ಕೊಡಿಸುವ ಮೂಲಕ ಇಡೀ ಕಳ್ಳತನದ ಕೇಸನ್ನೇ ಮುಚ್ಚಿಹಾಕಿ ಆರೋಪಿಗಳಿಗೆ ನೆರವಾಗುವುದು ಗಣಪತಿಯ ಹುನ್ನಾರವಾಗಿತ್ತು. ರಂಗಸ್ವಾಮಿಗೆ 1.56 ಕೋಟಿ ಯಾವ ಮೂಲದಿಂದ ಬಂದಿತ್ತು, ಅದನ್ನು ನಾಗೇಂದ್ರ ಎಂಬಾತನ ಮನೆಯಲ್ಲಿ ಯಾವ ಕಾರಣಕ್ಕೆ ಇಟ್ಟಿದ್ದ ಇತ್ಯಾದಿ ಯಾವುದನ್ನೂ ಗಣಪತಿ ತನಿಖೆ ಮಾಡಿರಲಿಲ್ಲ. ಇದರರ್ಥ ಕಳುವಾಗಿದ್ದ 1.56 ಕೋಟಿಯಲ್ಲಿ 79 ಲಕ್ಷವನ್ನಷ್ಟೇ ರಂಗಸ್ವಾಮಿಗೆ ಕೊಡಿಸಿ ಉಳಿಕೆಯನ್ನೆಲ್ಲ ಗಣಪತಿ ಸಾಹೇಬರು ಸ್ವಾಹಾ ಮಾಡಿದ್ದರಾ?

ಮೊದಲೇ ಬ್ಲಾಕ್‌ಮನಿ. ಅದನ್ನು ಕದ್ದವರೂ ಸಾಹೇಬರಿಗೆ ಬೇಕಾದವರೆ. ಕೊಟ್ಟಷ್ಟು ಪಡಕೊಂಡು ರಂಗಸ್ವಾಮಿ ತೆಪ್ಪಗಾಗುತ್ತಾನೆಂದೇ ಲೆಕ್ಕ ಹಾಕಿದ್ದ ಗಣಪತಿಗೆ ಯಾವತ್ತು ರಂಗಸ್ವಾಮಿ ಮೇಲಧಿಕಾರಿಗಳಿಗೆ ದೂರಿತ್ತರೋ ಕೇಸು ಉಲ್ಟಾ ಹೊಡೆದಿದೆ. ಈ ಬಗ್ಗೆ 2014ರಲ್ಲೇ ಬೆಂಗಳೂರು ನಗರ ಕಮೀಶನರ್ ತನಿಖೆ ನಡೆಸಿ ಅಮಾನತ್ತಾದ 30 ದಿನಗಳನ್ನೇ ಶಿಕ್ಷೆಯೆಂದು ದಂಡನೆ ವಿಧಿಸಿ ತಿಪ್ಪೆ ಸಾರಿಸಿದ್ದರು. ಹಾಗಂತ ದೂರುದಾರ ರಂಗಸ್ವಾಮಿ ಬಿಡಲಿಲ್ಲ. ಲೋಕಾಯುಕ್ತದ ಮೊರೆ ಹೊಕ್ಕರು. ಲೋಕಾಯುಕ್ತದಲ್ಲಿದ್ದದ್ದು ಪ್ರಣಬ್ ಮೊಹಂತಿ. 1.56 ಕೋಟಿ ಯಾವ ಮೂಲದಿಂದ ಬಂತೆಂಬುದನ್ನು ತನಿಖೆ ಮಾಡದೆ ಸರ್ಕಾರವನ್ನು ವಂಚಿಸಿದ್ದು ಮೊದಲನೇ ತಪ್ಪು, ಘೋರ ಅಪರಾಧವೆಂದು ಗೊತ್ತಿದ್ದೂ ಅದನ್ನು ಸಾಮಾನ್ಯ ಪ್ರಕರಣವಾಗಿಸಿದ್ದು ಎರಡನೇ ತಪ್ಪು, ಮೇಲಧಿಕಾರಿಗಳ ಗಮನಕ್ಕೆ ತಾರದೇ ಮುಚ್ಚಿಟ್ಟಿದ್ದು ಮೂರನೇ ತಪ್ಪು, ವಶಪಡಿಸಿಕೊಂಡ 79 ಲಕ್ಷವನ್ನು ಕಾನೂನುರೀತ್ಯ ಮೊಕದ್ದಮೆಯಲ್ಲಿ ಸೇರ್ಪಡೆಗೊಳಿಸದೆ ನೇರವಾಗಿ ದೂರುದಾರರಿಗೆ ನೀಡಿದ್ದು ನಾಲ್ಕನೇ ತಪ್ಪು, ಕಳುವಿನಲ್ಲಿ ಭಾಗಿಯಾದವನನ್ನು ಬಿಟ್ಟು ಕಳಿಸಿದ್ದು ಐದನೇ ತಪ್ಪು, 1.56 ಕೋಟಿಯಲ್ಲಿ 79 ಲಕ್ಷದ ಹೊರತಾದ ಮೊತ್ತದ ಬಗ್ಗೆ ತನಿಖೆ ಮಾಡದೇ ಮುಚ್ಚಿಹಾಕಿದ್ದು ಆರನೇ ತಪ್ಪು.

ಹೀಗೆ 1.56 ಕೋಟಿ ಕಳುವಿನ ಪ್ರಕರಣದಲ್ಲಿ ಅಪರಾಧಿಗಿಂತಲೂ ಅಧಿಕ ಅಪರಾಧವನ್ನು ಇನ್ಸ್‌ಪೆಕ್ಟರ್ ಗಣಪತಿ ಎಸಗಿದ್ದರು. ಹೇಗೋ ಬೆಂಗಳೂರು ನಗರ ಪೊಲೀಸ್ ಕಮೀಷನರ್‌ರನ್ನು ಸರಿಮಾಡಿಕೊಂಡು ಅಮಾನತ್ತಾಗಿದ್ದ ಒಂದು ತಿಂಗಳ ಅವಧಿಯನ್ನೇ ಶಿಕ್ಷೆಯೆಂದು ಪರಿಗಣಿಸುವಂತೆ ಮಾಡಿಸಿ ಸಲೀಸಾಗಿ ಬಚಾವಾಗಬಹುದೆಂಬುದು ಅವರ ಲೆಕ್ಕಾಚಾರವಾಗಿತ್ತು. ಯಾವತ್ತು ಲೋಕಾಯುಕ್ತ ಡಿಐಜಿ ಪ್ರಣಬ್ ಮೊಹಂತಿಯವರ ಕುಣಿಕೆ ಬಿಗಿಯಾಯಿತೋ ತಾನು ಬಚಾವಾಗುವುದು ಕಷ್ಟ ಎನಿಸಿದೆ. ಮಾಡಿದ್ದ ಪಾಪ ಬರಸೆಳೆದು ನುಂಗುವಂತೆ ಗಣಪತಿಗೆ ತನ್ನನ್ನು ತಾನೇ ಮುಗಿಸಿಕೊಳ್ಳುವುದರ ಹೊರತಾಗಿ ಬೇರೆ ದಾರಿಯಾದರೂ ಹೇಗೆ ಕಾಣಲು ಸಾಧ್ಯವಿತ್ತು?


■ ರಾ. ಸೋಮನಾಥ್


8 ಲಂಕೇಶ್

2010 ಆಗಸ್ಟ್ 18ರ ಸಂಚಿಕೆಯಲ್ಲಿ ಗಣಪತಿ ಬಗ್ಗೆ ಪ್ರಕಟಿಸಿದ ವರದಿ

ಯಶವಂತಪುರದ ಚೀಟರ್ ಕಲಾವತಿಯೂ ಚೆಡ್ಡಿ ಇನ್ಸ್‌ಪೆಕ್ಟರ್ ಗಣಪತಿಯೂ

ಈ ರೌಡಿ ಪೊಲೀಸ್‌ನಿಂದ ರಕ್ಷಣೆ ಉಂಟೆ?




ಮೋದಿ, ಶಾ ಮೊದಲಾದವರನ್ನು ಬಚಾಯಿಸುವ ಹುನ್ನಾರ

ಇತ್ತೀಚೆಗೆ ಭಾರತದ ಸರ್ವೋಚ್ಚ ನ್ಯಾಯಾಲಯ ಮಣಿಪುರದಲ್ಲಿ ಜಾರಿಯಲ್ಲಿರುವ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ (AFSPA) ಕುರಿತು ಒಂದು ಅತ್ಯಂತ ಮಹತ್ವದ ತೀರ್ಪನ್ನು ನೀಡಿದೆ. ಈ ದೇಶದ ಯಾವನೆ ಪ್ರಜೆಯನ್ನು - ಅವನು ಎಂಥಾ ಭಯಂಕರ ಅಪರಾಧಿ ಇರಲಿ, ತೀವ್ರಗಾಮಿ ಇರಲಿ, ಭಯೋತ್ಪಾದಕ ಇರಲಿ ಅಥವಾ ಬಂಡಾಯಗಾರ ಇರಲಿ - ಕಾನೂನುಬಾಹಿರವಾಗಿ ಕೊಲ್ಲುವ ಅಧಿಕಾರ ಯಾರಿಗೂ ಇಲ್ಲ, ಅಂತಹ ಸಾವುಗಳನ್ನು ಕೂಲಂಕಷ ತನಿಖೆಗೆ ಒಳಪಡಿಸಬೇಕು ಎಂದು ಹೇಳಿದೆ. ಇದು ಮಣಿಪುರಕ್ಕಷ್ಟೆ ಅಲ್ಲ, ಕಾಶ್ಮೀರವೂ ಸೇರಿದಂತೆ ಇಡೀ ದೇಶಕ್ಕೆ ಅನ್ವಯವಾಗುತ್ತದೆ. ಪೊಲೀಸ್ ಮತ್ತಿತರ ಭದ್ರತಾ ಪಡೆಗಳಿಗೂ ಇದೇ ನಿಯಮ ಅನ್ವಯವಾಗುತ್ತದೆ. ಈ ಕುರಿತಂತೆ ಪ್ರತ್ಯೇಕ ತೀರ್ಪು ಕೂಡ ಇದೆ. ಆದರೆ ಹೆಚ್ಚಿನ ವೇಳೆ ನಿಯಮದ ಉಲ್ಲಂಘನೆ ಆಗುತ್ತಿದೆ. ಅಷ್ಟೇ ಅಲ್ಲ, ಉಲ್ಲಂಘಿಸುವವರಿಗೆ ಯಾವುದೇ ವಿಧದ ಶಿಕ್ಷೆಯೂ ಆಗುತ್ತಿಲ್ಲ, ಇದು ನಮ್ಮ ವ್ಯವಸ್ಥೆಯಲ್ಲಿರುವ ಅತಿದೊಡ್ಡ ಲೋಪ. ಎಲ್ಲರಿಗೂ ಗೊತ್ತಿರುವ ಹಾಗೆ ಇದಕ್ಕೆ ರಾಜಕೀಯ ಹಸ್ತಕ್ಷೇಪವೇ ಕಾರಣ.

ಗುಜರಾತಿನಲ್ಲಿ ಮೋದಿ ಆಡಳಿತ ಇದ್ದ ಕಾಲದಲ್ಲಿ ಭೀಕರ ಕೋಮು ಗಲಭೆಗಳು ಮಾತ್ರವಲ್ಲದೆ ಅನೇಕ ಶಂಕಿತ ಉಗ್ರರ ಎನ್‌ಕೌಂಟರ್ ಸಾವುಗಳೂ ಸಂಭವಿಸಿವೆ. ಅಂದು ಎನ್‌ಕೌಂಟರ್ ಸಾವುಗಳ ಕುರಿತು ಮಾಧ್ಯಮಗಳ ಮೂಲಕ ಹರಿಯಬಿಡಲಾಗುತ್ತಿದ್ದ ಕತೆಗಳೆಲ್ಲವೂ ಒಂದೇ ವಸ್ತುವಿನ ಸುತ್ತು ಗಿರಕಿ ಹೊಡೆಯುತ್ತಿದ್ದವು. ಅದೇನೆಂದರೆ 'ಜನಪ್ರಿಯ ನಾಯಕ ಮೋದಿಯನ್ನು ಹತ್ಯೆ ಮಾಡಲು ಪ್ರಯತ್ನಿಸುತ್ತಿದ್ದ ಉಗ್ರರನ್ನು ಪೊಲೀಸರು ತಡೆಹಿಡಿದಾಗ ಉಗ್ರರು ಅವರತ್ತ ಗುಂಡು ಹಾರಿಸಿದರು; ಪೊಲೀಸರು ಆತ್ಮರಕ್ಷಣೆಗಾಗಿ ಬಂದೂಕು ಚಲಾಯಿಸಿದಾಗ ಉಗ್ರರು ಮೃತಪಟ್ಟರು' ಎಂದು. ಅಸಲಿಗೆ ಇವೆಲ್ಲವೂ ಮೋದಿಯ ಜನಪ್ರಿಯತೆಯನ್ನು ಹೆಚ್ಚಿಸಲೋಸುಗ ಹೆಣೆದಂಥಾ ಕಟ್ಟುಕತೆಗಳಾಗಿದ್ದವು. ಇಂತಹ ಒಂದು ಕಟ್ಟುಕತೆಯೆಂದರೆ 2004ರಲ್ಲಿ ನಡೆದ ಇಶ್ರತ್ ಜಹಾನ್ ಮತ್ತಿತರರ ಕೊಲೆ. ಆ ಪ್ರಕರಣದ ಸಂಕ್ಷಿಪ್ತ ಹಿನ್ನೆಲೆ ಹೀಗಿದೆ: ಜಾವೇದ್ ಶೇಕ್ ಅಲಿಯಾಸ್ ಪ್ರಾಣೇಶ್ ಪಿಳ್ಳೆ ಎಂಬಾತ ಗುಪ್ತಚರ ಇಲಾಖೆಗಾಗಿ ಕೆಲಸ ಮಾಡುತ್ತಾ ಇಲಾಖೆ ತೋರಿಸಿದ ಮಿಕಗಳನ್ನು ಬಲೆಗೆ ಬೀಳಿಸುತ್ತಾ ಇದ್ದ. ಒಮ್ಮೆ ಇದೇ ಜಾವೇದ್ ಮುಖಾಂತರ ಸಲೀಂ ಆಲಿಯಾಸ್ ಅಮ್ಜದ್ ಅಲಿ ಆಲಿಯಾಸ್ ಬಂಟಿ ಎಂಬ ಲಷ್ಕರ್ ಕಾರ್ಯಕರ್ತನನ್ನು ಅಹಮದಾಬಾದಿಗೆ ಕರೆಸಲಾಗಿತ್ತು, ಆಗ ಜಾವೇದ್ ತನ್ನ ಅಸಲಿಯತ್ತನ್ನು ಮರೆಮಾಚಲೆಂದು ಇಶ್ರತ್‌ಳನ್ನು ತನ್ನ ಜೊತೆ ಕರೆದುಕೊಂಡು ಹೋಗಿದ್ದ. ಇಲಾಖೆಯ ಈ ರಹಸ್ಯ ಕಾರ್ಯಾಚರಣೆಯಲ್ಲಿ ಸಲೀಂ ಮತ್ತು ಜೀಶನ್ ಎಂಬಿಬ್ಬರ ಹತ್ಯೆಯೊಂದಿಗೆ ವಿಷಯ ಇನ್ನಾರಿಗೂ ತಿಳಿಯ ಬಾರದೆನ್ನುವ ಉದ್ದೇಶದಿಂದ ಜಾವೇದ್ ಮತ್ತು ಇಶ್ರತ್‌ರನ್ನೂ ಮುಗಿಸಲಾಯಿತು. ಇಶ್ರತ್ ಜಹಾನ್ ಎನ್‌ಕೌಂಟರ್ ಹೆಸರಿನ ಈ ಪ್ರಕರಣ ಗುಜರಾತ್ ಹೈಕೋರ್ಟಿನ ಮುಂದೆ ವಿಚಾರಣೆಗೆ ಬಂದಾಗ ಅದು ತನ್ನ ನಿಲುವನ್ನು ಹಲವಾರು ಬಾರಿ ಸ್ಪಷ್ಟಪಡಿಸಿದೆ: 'ನ್ಯಾಯಾಲಯಕ್ಕೆ ಇಶ್ರತ್ ಓರ್ವ ಭಯೋತ್ಪಾದಕಿಯೇ ಅಲ್ಲವೇ ಎಂಬ ವಿಷಯದಲ್ಲಿ ಆಸಕ್ತಿ ಇಲ್ಲ, ನ್ಯಾಯಾಲಯಕ್ಕೆ ಆಸಕ್ತಿ ಇರುವುದು ಆಕೆಯ ಕೊಲೆಯಲ್ಲಿ, ಏಕೆಂದರೆ ಭಾರತೀಯ ಪ್ರಜೆಗಳನ್ನು ಕಾನೂನುಬಾಹಿರ ಎನ್ಕೌಂಟರ್ ಮೂಲಕ ಸಾಯಿಸುವ ಅಧಿಕಾರ ಯಾರಿಗೂ ಇಲ್ಲ'.

2016ರ ಫೆಬ್ರವರಿ ತಿಂಗಳಲ್ಲಿ ಮಾಜಿ ಗೃಹ ಕಾರ್ಯದರ್ಶಿ ಜಿ.ಕೆ. ಪಿಳ್ಳೆ ಇದ್ದಕ್ಕಿದ್ದಂತೆ ಇದೇ ಇಶ್ರತ್ ಪ್ರಕರಣಕ್ಕೆ ಸಂಬಂಧಿಸಿದಂತೆ ಯುಪಿಎ ಸರಕಾರ ಅಂದು ಗುಜರಾತ್ ಹೈಕೋರ್ಟಿಗೆ ಸಲ್ಲಿಸಿದ್ದ ಎರಡು ಅಫಿಡವಿತ್‌ಗಳ ಬಗ್ಗೆ 'ಸ್ಫೋಟಕ' ಮಾಹಿತಿಗಳನ್ನು ಬಹಿರಂಗಪಡಿಸಿದರು. ಮೊದಲನೆಯ ಅಫಿಡವಿತ್ ಇಶ್ರತ್ ಉಗ್ರಗಾಮಿ ಎಂದರೆ ಎರಡನೆಯದರಲ್ಲಿ ಆ ಆರೋಪವನ್ನು ಹಿಂತೆಗೆದು ಕೊಳ್ಳಲಾಗಿತ್ತು, ಮಾಜಿ ಗೃಹಸಚಿವ ಚಿದಂಬರಂರವರು ಮೊದಲನೆ ಅಫಿಡವಿತ್‌ಅನ್ನು ಬದಲಾಯಿಸಿ ಎರಡನೆ ಅಫಿಡವಿತ್ ಸಲ್ಲಿಸಿದ್ದರೆಂಬ ಪಿಳ್ಳೆಯವರ ಹೇಳಿಕೆ ದೊಡ್ಡ ಸುಂಟರಗಾಳಿಯನ್ನೆ ಎಬ್ಬಿಸಿ ದೇಶದ ಮೂಲೆಮೂಲೆಗಳಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಯಿತು. ಅತ್ತ ಮೋದಿ ಸರ್ಕಾರವೂ 'ಟೈಮ್ಸ್ ನೌ' ನಂತಹ ಕೆಲವು ಭಟ್ಟಂಗಿ ಚಾನಲ್‌ಗಳ ಮೂಲಕ ಚರ್ಚೆಯ ಮಟ್ಟವನ್ನು ತಾರಕಕ್ಕೆ ಏರಿಸಿತು. ಆದರೆ ಗಮನಾರ್ಹವಾಗಿ ಪಿಳ್ಳೆ ಹೇಳಿಕೆಗೂ ಮುಂಚೆ ಒಂದು ಮಹತ್ವದ ವಿದ್ಯಮಾನ ನಡೆದಿತ್ತು, ಫೆಬ್ರವರಿ ತಿಂಗಳ ಆರಂಭದಲ್ಲಿ ಡೇವಿಡ್ ಹೆಡ್ಲಿ ಎಂಬ ಮಾಫಿ ಸಾಕ್ಷಿಯನ್ನು ಭಾರತಕ್ಕೆ ಕರೆಸಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿದ ಸಂದರ್ಭದಲ್ಲಿ ಆತ ಇಶ್ರತ್ ಓರ್ವ ಲಷ್ಕರ್ ಕಾರ್ಯಕರ್ತೆ ಎಂದು ಹೇಳಿದ್ದ. ಪಿಳ್ಳೆಯ ಹೇಳಿಕೆ ಹೊರಬಿದ್ದಿರುವುದು ಇದರ ನಂತರ, ಫೆಬ್ರವರಿ 27ರಂದು. ಈ ನಿವೃತ್ತ ಗೃಹ ಕಾರ್ಯದರ್ಶಿ ಇಂದು ಮೋದಿಯ ಪರಮಾಪ್ತ ಅದಾನಿಗೆ ಸೇರಿದ 'ಅದಾನಿ ಪೋರ್ಟ್ಸ್ ಅಂಡ್ ಎಸ್‌ಇಜೆಡ್ ಲಿಮಿಟೆಡ್' ಎಂಬ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯ, ಅಂದರೆ ಇದರರ್ಥ ಆತನ ಹೇಳಿಕೆ ಹಠಾತ್ತಾಗಿ ಹೊರಬಿದ್ದುದಲ್ಲ, ಅದರ ಹಿಂದೆ ಒಂದು ನಿರ್ದಿಷ್ಟ ಲೆಕ್ಕಾಚಾರ ಅಡಗಿದೆ. ಒಂದಕ್ಕೊಂದು ತಳಕುಹಾಕಿಕೊಂಡಿರುವ ಈ ಮೂರೂ ಘಟನೆಗಳು ವಾಸ್ತವದಲ್ಲಿ ಮೋದಿ, ಅಮಿತ್ ಶಾ ಮತ್ತು ಮೋದಿನಿಷ್ಠ ಪೊಲೀಸ್ ಹಾಗೂ ಐಬಿ ಅಧಿಕಾರಿಗಳನ್ನು ಸಂಪೂರ್ಣವಾಗಿ ಬಚಾವ್ ಮಾಡುವ ಹುನ್ನಾರದ ಭಾಗವಾಗಿವೆ.



ಎರಡೆರಡು ಅಫಿಡವಿತ್‌ಗಳ ಕುರಿತ ವಾಸ್ತವಾಂಶ ಹೀಗಿದೆ. ಕೇಂದ್ರ ಸರಕಾರ ರಾಜ್ಯ ಸರಕಾರದೊಂದಿಗೆ ಹಂಚಿಕೊಂಡ ಗುಪ್ತಚರ ವರದಿಗಳಿದ್ದ ಮೊದಲನೆ ಅಫಿಡವಿತನ್ನು 2009ರ ಆಗಸ್ಟ್‌ನಲ್ಲಿ ಗುಜರಾತ್ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು, ನಂತರ ಸೆಪ್ಟಂಬರ್ ಮೊದಲ ವಾರದಲ್ಲಿ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾದ ನ್ಯಾ। ತಮಾಂಗ್ ವರದಿ ಅದೊಂದು ನಕಲಿ ಎನ್‌ಕೌಂಟರ್ ಎಂಬ ತೀರ್ಮಾನಕ್ಕೆ ಬಂದಿದೆ. ಅಹಮದಾಬಾದಿನ ಮ್ಯಾಜಿಸ್ಟ್ರೇಟ್ ಆಗಿದ್ದ ತಮಾಂಗ್ ಈ ವರದಿಯನ್ನು ಸ್ವಪ್ರೇರಣೆಯಿಂದ ಸಿದ್ಧಪಡಿಸಿದ್ದರು. ಗಮನಾರ್ಹ ವಿಷಯ ಏನೆಂದರೆ 243 ಪುಟಗಳ ಈ ವರದಿಯನ್ನು ಅವರು ಕೈಯಲ್ಲೆ ಬರೆದಿದ್ದರು! ವರದಿಯನ್ನು ಉಚ್ಚನ್ಯಾಯಾಲಯಕ್ಕೆ ಸಲ್ಲಿಸುವುದಕ್ಕೂ ಮೊದಲೆ ಅದು ಬಹಿರಂಗವಾಗುವ ಸಾಧ್ಯತೆಗಳನ್ನು ಮನಗಂಡಿದ್ದ ಅವರು ವರದಿಯನ್ನು ಟೈಪಿಸ್ಟ್ ಕೈಲೂ ಬರೆಸಿರಲಿಲ್ಲ, ಕಂಪ್ಯೂಟರ್ ಕೂಡಾ ಉಪಯೋಗಿಸಿರಲಿಲ್ಲ! ತಮಾಂಗ್ ವರದಿಯ ಹಿನ್ನೆಲೆಯಲ್ಲಿ ಸೆಪ್ಟಂಬರ್ ಅಂತ್ಯದಲ್ಲಿ 'ಇಶ್ರತ್ ಜಹಾನ್ ಓರ್ವ ಲಷ್ಕರ್ ಕಾರ್ಯಕರ್ತೆ ಎಂಬುದಕ್ಕೆ ಯಾವುದೇ ನಿರ್ಣಾಯಕ ಪುರಾವೆಗಳು ಲಭ್ಯವಿಲ್ಲ... ಗುಪ್ತಚರ ವರದಿಗಳು ನಿರ್ಣಾಯಕ ಪುರಾವೆಗಳಲ್ಲ, ವರದಿಗಳ ಆಧಾರದಲ್ಲಿ ಕ್ರಮ ಕೈಗೊಳ್ಳುವುದು ರಾಜ್ಯ ಸರಕಾರ ಮತ್ತು ರಾಜ್ಯ ಪೊಲೀಸರು' ಎಂಬ ಎರಡನೆ ಅಫಿಡವಿತನ್ನು ಸಲ್ಲಿಸಲಾಯಿತು. ಏತನ್ಮಧ್ಯೆ ವಿದೇಶ ವ್ಯವಹಾರಗಳ ಕಚೇರಿಯಿಂದ ಪ್ರಕರಣಕ್ಕೆ ಸಂಬಂಧಪಟ್ಟ ಕೆಲವೊಂದು ಕಡತಗಳು ಹಠಾತ್ತಾಗಿ ನಾಪತ್ತೆಯಾದವು. ಅವುಗಳಲ್ಲಿ ಭಾರತದ ಅಟಾರ್ನಿ ಜನರಲ್ ಮತ್ತು ಗೃಹಕಾರ್ಯದರ್ಶಿಗಳ ನಡುವಿನ ಪತ್ರವ್ಯವಹಾರಗಳು, ಮೊದಲನೆ ಮತ್ತು ಎರಡನೆ ಅಫಿಡವಿತ್‌ಗಳ ಕರಡುಪ್ರತಿಗಳು ಮತ್ತು ಎರಡನೆ ಅಫಿಡವಿತ್‌ನ ಕಚೇರಿ ಪ್ರತಿಗಳು ಸೇರಿದ್ದವು.

ಪಿಳ್ಳೆಯವರ ಹೇಳಿಕೆ ಹೊರಬೀಳುತ್ತಿದ್ದಂತೆ ನಾಪತ್ತೆಯಾದ ಕಡತಗಳ ವಿಚಾರ ಸಂಸತ್ತಿನಲ್ಲಿ ಪ್ರತಿಧ್ವನಿಸಿ ದೊಡ್ಡ ಕೋಲಾಹಲವನ್ನು ಸೃಷ್ಟಿಸಿತು. ಆಗ ಮೋದಿ ಸರ್ಕಾರ ಹೆಚ್ಚುವರಿ ಕಾರ್ಯದರ್ಶಿ ಬಿ.ಕೆ. ಪ್ರಸಾದ್ ನೇತೃತ್ವದ ಏಕವ್ಯಕ್ತಿ ಆಯೋಗವೊಂದನ್ನು ನೇಮಕ ಮಾಡಿ ಈ ವಿಚಾರದಲ್ಲಿ ಕೂಲಂಕಷ ತನಿಖೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಆದೇಶಿಸಿತು. ಆದರೆ ತೆರೆಮರೆಯಲ್ಲಿ ನಡೆದ ಕಸರತ್ತುಗಳೇ ಬೇರೆ. 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆ ನಡೆಸಿದ ಕುಟುಕು ಕಾರ್ಯಾಚರಣೆಯೊಂದರಲ್ಲಿ ಬಿ.ಕೆ. ಪ್ರಸಾದ್‌ರವರು ಗೃಹ ಖಾತೆಯ ಮಾಜಿ ನಿರ್ದೇಶಕರಾದ ಅಶೋಕ್ ಕುಮಾರ್ ಜೊತೆ ಮಾತನಾಡುತ್ತ ಆತ ಏನು ಹೇಳಬೇಕೆಂದು ಹೇಳಿಕೊಡುತ್ತಿರುವುದನ್ನು ರೆಕಾರ್ಡ್ ಮಾಡಲಾಗಿದೆ. ಇವರಿಬ್ಬರ ನಡುವಿನ ಸಂಭಾಷಣೆ ಮೋದಿ ಸರ್ಕಾರದ ದುಷ್ಟ ಕಾರ್ಯತಂತ್ರಗಳನ್ನು ಬಯಲಿಗೆಳೆಯುತ್ತದೆ:

ಪ್ರಸಾದ್: "'ನೀವು ಈ ದಾಖಲೆಪತ್ರವನ್ನು ನೋಡಿದ್ದೀರಾ?' ಎಂಬ ಪ್ರಶ್ನೆಗೆ ನೀವು ಉತ್ತರಿಸಬೇಕಾಗಿ ರುವುದು ಹೀಗೆ: 'ನಾನು ಈ ದಾಖಲೆಪತ್ರವನ್ನು ನೋಡಿಲ್ಲ', ಅಷ್ಟೊಂದು ಸರಳ ಕೆಲಸ ಇದು."

ಪ್ರಸಾದ್: "ನೀವು ಇಷ್ಟಾದರೂ ಹೇಳಬೇಕಾಗುತ್ತದೆ. ಏನೆಂದರೆ ಒಂದೊ ನಿಮ್ಮ ಜೀವಮಾನದಲ್ಲಿ ಆ ಕಡತದಲ್ಲಿ ವ್ಯವಹರಿಸಿಲ್ಲ ಅಥವಾ ಆ ಕಡತವನ್ನು ನೋಡುವ ಅವಕಾಶವೆ ಸಿಕ್ಕಿಲ್ಲ..... ನೀವು ಆ ಕಡತವನ್ನು ಎಂದೂ ನೋಡಿಲ್ಲವೆಂದು ನನಗನಿಸುತ್ತದೆ..... ನಿಮ್ಮಿಂದ ನನಗೆ ಬೇಕಾಗಿರುವುದೂ ಅಷ್ಟೆ: 'ನಾನೆಂದೂ ಆ ಕಡತವನ್ನು ನೋಡಿಲ್ಲ'."

ಪ್ರಸಾದ್: "ನಿಮಗೆ ಕೇಳಲಾಗುವ ಮತ್ತೊಂದು ಪ್ರಶ್ನೆಯೆಂದರೆ 'ಯಾರಾದರೂ ಈ ದಾಖಲೆಪತ್ರಗಳನ್ನು ನಿಮ್ಮ ಕೈಗಿತ್ತು ಪ್ರತ್ಯೇಕವಾಗಿ ಇರಿಸುವಂತೆ ಹೇಳಿದ್ದರೇ?' ಅದಕ್ಕೆ ನೀವು 'ಇಲ್ಲ, ಯಾರೂ ನನಗೆ ಆ ಕಡತಗಳನ್ನು ಕೊಟ್ಟಿಲ್ಲ' ಎಂದು ಉತ್ತರಿಸುವಿರಿ."

ಮೇಲಿನ ಸಂಭಾಷಣೆಯಿಂದ ಪ್ರಸಾದ್ ಆಯೋಗದ ತನಿಖೆ ಒಂದು ಪೂರ್ವಯೋಜಿತ ಕಪಟ ನಾಟಕವಲ್ಲದೆ ಇನ್ನೇನೂ ಅಲ್ಲವೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಇಷ್ಟು ಮಾತ್ರವಲ್ಲದೆ ಇಶ್ರತ್ ಪ್ರಕರಣದ ಆರೋಪಿಗಳಾದ ಜಿ.ಎಲ್.ಸಿಂಘಾಲ್ ಮತ್ತು ಪಿ.ಪಿ. ಪಾಂಡೆ ಎಂಬಿಬ್ಬರು ಐಪಿಎಸ್ ಅಧಿಕಾರಿಗಳು ಕೂಡ ಇದೇ ವಿಷಯದ ಕುರಿತು ಗುಟ್ಟಿನ ಮಾತುಕತೆ ನಡೆಸುತ್ತಿದ್ದ ಸಂಗತಿ ಇನ್ನೊಂದು ಕುಟುಕು ಕಾರ್ಯಾಚರಣೆಯಲ್ಲಿ ಪತ್ತೆಯಾಗಿದೆ. ಲಾಯರ್ ಅಭಿಚಂದಾನಿ ಎಂಬವರು ಇಶ್ರತ್ ಓರ್ವ ಭಯೋತ್ಪಾದಕಿ ಎಂದು ಚಿತ್ರಿಸುವ ಅಫಿಡವಿತನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದರೆ ಆತನಿಗೆ ಹೈಕೋರ್ಟ್ ನ್ಯಾಯಾಧೀಶನ ಹುದ್ದೆಯನ್ನು ಕೊಡಿಸುವ ಕುರಿತಾದ ಸಂಭಾಷಣೆ ಹೀಗೆ ಸಾಗುತ್ತದೆ:

ಸಿಂಘಾಲ್: ಸರ್, ನಮಸ್ಕಾರ.

ಪಾಂಡೆ: ಮೀಟಿಂಗ್‌ನಲ್ಲಿ ಇದ್ದೀರಾ?

ಸಿಂ: ಹೌದು ಸರ್. ಈಗ ಹೊರಗೆ ಬಂದಿರುವೆ.


ಪಾಂ: ಅಭಿಚಂದಾನಿಯ ಆ ಆದೇಶ ಆಯಿತಾ?

ಸಿಂ: ಹೌದು ಸರ್.

ಪಾಂ: ನಾಳೆ ದಿಲ್ಲಿಯಿಂದ ಯಾರೋ ಅಧೀನ ಕಾರ್ಯದರ್ಶಿ ಬರ್ತಿದಾರೆ. ಅಫಿಡವಿತ್‌ಗೆ ಸಹಿಹಾಕಲು.

ಸಿಂ: ಸರಿ ಸರ್, ಸರಿ ಸರ್.

ಪಾಂ: ಅಭಿಚಂದಾನಿಗೆ ಹೇಳಿ, ಅವರು ಸರಿಯಾಗಿ ಮಾಡಿದರೆ ಅವರನ್ನು ನಾವು ಹೈಕೋರ್ಟ್



ನ್ಯಾಯಾಧೀಶರನ್ನಾಗಿ ಮಾಡಲು ಯತ್ನಿಸಬಹುದು.

ಸಿಂ: ಸರಿ ಸರ್. ನಾನು ವಿವರಿಸಿ ಹೇಳುತ್ತೇನೆ ಅವ ನನಗೆ ಅರ್ಥವಾಗಿದೆ.


ಗುಜರಾತಿನಲ್ಲಿ ನಡೆದಿದ್ದ ನಕಲಿ ಎನ್‌ಕೌಂ ಪ್ರಕರಣಗಳಿಗೆ ಸಂಬಂಧಿಸಿದಂತೆ 32 ಪೊಲಿ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲಾದ ಅವರೆಲ್ಲರೂ ಕಾರಾಗೃಹ ಸೇರಿದ್ದರು. ಆದರೆ ಕೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಂದಿನಿಂದ ಎಲ ಬದಲಾಗಿದೆ. ವಿಚಾರಣೆ ಹೊಸ ಹೊಸ ತಿರುವುಗ ಪಡೆದುಕೊಳ್ಳುತ್ತಿದೆ. ಮೋದಿ ಸರ್ಕಾರದ ಪರ ಕಾರ್ಯಾಚರಿಸಿ ಈಗ ಆರೋಪಿ ಸ್ಥಾನದಲ್ಲಿ ನಿಂತಿ ಗುಪ್ತಚರ ಅಧಿಕಾರಿಗಳ ವಿಚಾರಣೆಗೆ ಉಂಟುಮಾಡಲಾಗುತ್ತಿದೆ; ವಂಜಾರ, ಪಿ.ಪಿ.ಪಾಂಡೆಯ ಪೊಲೀಸ್ ಅಧಿಕಾರಿಗಳಿಗೆ ಜಾಮೀನು ದೊರೆತಿರುವು ಅಲ್ಲ, ಒಳ್ಳೊಳ್ಳೆ ಹುದ್ದೆ, ಮುಂಬಡ್ತಿ ಮುಂತ ಮಿಠಾಯಿಗಳೂ ಲಭ್ಯವಾಗುತ್ತಿವೆ. ಉದಾಹರಣೆಗೆ ಪಾಂಡೆ ಈಗ ಗುಜರಾತ್ ರಾಜ್ಯದ ಡಿಜಿಪಿ. ಜಾಮೀನು ದೊರೆತು ಸೆರೆಮನೆಯಿಂದ ಹೊರಬಂದ ವಂಜಾರನಂಥವರ ಚೆಡ್ಡಿನಿಷ್ಠೆ ಪೂರ್ತಿ ಬಯಲಾಗಿದೆ. ಹು ಸೇರುವಾಗ ಸಂವಿಧಾನಕ್ಕೆ ಬದ್ಧರಾಗಿರುವೆವೆಂದು ಪ್ರಮ ಮಾಡಿದ ನಂತರ ರಾಜಕೀಯ ಪ್ರಭಾವಕ್ಕೊಳಗಾಗಿ ಸಂವಿ ವಿರೋಧಿ ಕೃತ್ಯಗಳನ್ನು ಎಸಗುವ ಇಂತ ಅಧಿಕಾರಿಗಳಿರುವುದರಿಂದಲೇ ಕೋಮು ಮತ್ತು ಸಂಘರ್ಷಗಳು ಅಂತ್ಯ ಕಾಣುತ್ತಿಲ್ಲ, ಭಾರತದ ಮಾನವಾಭಿ ಸೂಚ್ಯಂಕ ಪಾತಾಳಕ್ಕಿಳಿಯುವುದಕ್ಕೂ ಪರೋಕ್ಷವಾಗಿ ಇ ಕಾರಣರು. ಫ್ಯಾಸಿಸ್ಟ್ ಪ್ರಭುತ್ವದ ಹೇರಿ ಪೂರ್ವಸಿದ್ಧತೆಯಾಗಿ ನ್ಯಾಯಾಂಗ, ಕಾರ್ಯಾಂಗ, ಮಾಧ್ ಪೊಲೀಸ್ ವ್ಯವಸ್ಥೆ, ಗುಪ್ತಚರ ವಿಭಾಗ, ಸೇನಾ ಮೊದಲಾದೆಡೆಗಳಲ್ಲಿ ಅದೆಷ್ಟು ಮಂದಿ ಚೆಡ್ಡಿನಿ ತೂರಿಕೊಂಡಿರಬಹುದೆಂದು ಯೋಚಿಸ ಭಯವಾಗುತ್ತಿದೆ.

■ ಸುರೇಶ್ ಭಟ್ ಬಾಕ್ರಬೈ

(ಆಧಾರ: *truthofgujarat.com*

ಪ್ರತೀಕ್ ಸಿನ್ಹಾ ಲೇಖನ ಮತ್ತು ಇತರ ವರದಿ

ಓ! ಸುಲ್ತಾನ್
ಒಂದು ಟಿಪ್ಪಣಿ



ಉಪರ್ ಅಲ್ಲಾ ನೀಛೆ ಧರ್ತಿ
ಬೀಚ್ ಮೇಂ ತೆರಾ ಜುನೂನ್

ಮತ (ರಿಲಿಜನ್)ನಂಬಿಕೆಯುಳ್ಳ ಸಾಮಾನ್ಯರ ಜನರ ಮನೋಸ್ಥಿತಿಯನ್ನು ಅರಿಯುವ ದರ್ಶನರೂಪಿ ವ್ಯಾಖ್ಯಾನ ಒಂದನ್ನು, ತತ್ವಜ್ಞಾನಿ ಕಾರ್ಲ್ ಮಾರ್ಕ್ಸ್ ನಿರೂಪಿಸಿದ್ದಾನೆ. ಈ ದರ್ಶನವನ್ನು ಓದಿ ಮನನ ಮಾಡಿಕೊಳ್ಳಲು ನಾವು ಮಾರ್ಕ್ಸ್‌ವಾದಿ ಅಥವ ಕಮ್ಯುನಿಸ್ಟ್ ಏನೂ ಆಗಬೇಕಿಲ್ಲ, ಮತನಂಬಿಕೆಯುಳ್ಳವರ ಲೋಕವನ್ನು ಕುರಿತ ಒಂದು ಟೀಕುವಾಗಿ ಈ ಪಠ್ಯವನ್ನು ನಾವು ಓದಿಕೊಳ್ಳಬಹುದು. ಆ ಪಠ್ಯ ಹೀಗಿದೆ:

"ಮನುಷ್ಯರು ಮತಗಳನ್ನು ಸೃಷ್ಟಿಸುತ್ತಾರೆ, ಮತಗಳು ಮನುಷ್ಯರನ್ನು ಸೃಷ್ಟಿಸೋದಿಲ್ಲ ಅನ್ನೋದು ಮತವನ್ನು ನಂಬದವರ ಟೀಕೆ. ಮತವು, ತನ್ನ ಬದುಕಿನ ಸ್ಥಿತಿಯನ್ನು ಬದಲಾಯಿಸಿಕೊಳ್ಳಲಾಗದ, ಬದಲಾವಣೆಗೆ ಎದ್ದು ಬಿದ್ದ ಮನುಷ್ಯ ಸ್ವಘನತೆಯಿಂದ ಪ್ರಜ್ಞಾಪೂರ್ವಕವಾಗಿ ಹಿಡಿದುಕೊಂಡ ಸ್ಥಿತಿಯಾಗಿದೆ. ಮನುಷ್ಯ ಅಗೋಚರವಾಗಿ, ಈ ಲೋಕದ ಹೊರಗೆ ಕುಕ್ಕುರುಗಾಲಲ್ಲಿ ಕೂತ ಜೀವಿ ಏನೂ ಅಲ್ಲ, ಮನುಷ್ಯ, ಪ್ರಭುತ್ವ, ಸಮಾಜಗಳ ಸದ್ಯದಲ್ಲಿ ಹುದುಗಿಕೊಂಡಿರುವ ಜೀವಿ. ಈ ಪ್ರಭುತ್ವ, ಈ ಸಮಾಜಗಳು ಮತವನ್ನು ಉತ್ಪಾದಿಸುತ್ತವೆ – ಅವುಗಳೆದ್ದು ತಲೆಕೆಳಗಾದ ಲೋಕ, ಹೀಗೆ ಮತವೂ ತಲೆಕೆಳಗಾದ ಸ್ಥಿತಿಯಲ್ಲಿರುವ ಮಾನವನ ಲೌಕಿಕ ಪ್ರಜ್ಞೆ ಮತವು- ಲೋಕದ ಸಾಮಾನ್ಯ ಪ್ರಮೇಯ, ಲೋಕ ಪಾಂಡಿತ್ಯದ ಕಟ್ಟು, ಜನಪ್ರಿಯ ತರ್ಕ, ಆಧ್ಯಾತ್ಮಿಕ ಆತ್ಮಗೌರವ, ಲೋಕದ ಉತ್ಸಾಹ, ಒಪ್ಪಿತ ಲೋಕ ನೈತಿಕತೆ, ಲೋಕಜೀವನದ ಪೋಷಕ, ಲೌಕಿಕ ಬದುಕಿಗೆ ಆಧಾರ ನೀಡಿ ಮನಶ್ಶಾಂತಿ ನೀಡುವ ಪಾತಳಿ. ಮತ, ತನ್ನ ಅಸ್ತಿತ್ವದ ವಾಸ್ತವನ್ನು ಇನ್ನು ಅರಿಯದ ಮಾನವ ಲೋಕದ ಮೂಲಚೇತನ. ಹೀಗಾಗಿ ಮತದ ವಿರುದ್ಧದ ಹೋರಾಟವು, ಲೋಕದ ಆಧ್ಯಾತ್ಮವಾಗಿರುವ ಮತದ ಸೌಗಂಧಿಕ ಪರಿಮಳದ ವಿರುದ್ಧದ ಹೋರಾಟವಾಗಿದೆ.


ಮತನಂಬಿಕೆಯ ಬವಣೆ, ಲೌಕಿಕ ಬದುಕಿನ ಬವಣೆಯ ಅಭಿವ್ಯಕ್ತಿಯೂ ಹೌದು, ಲೋಕ ಬವಣೆಯ ವಿರುದ್ಧದ ಪ್ರತಿಭಟನೆಯೂ ಹೌದು. ಮತ, ತುಳಿತಕ್ಕೊಳಗಾದವರ ನಿಟ್ಟುಸಿರು, ಹೃದಯಹೀನ ಜಗದ ಹೃದಯ, ಆತ್ಮಹೀನ ಅಸ್ತಿತ್ವದ ಸ್ಥಿತಿಯ ಆಧ್ಯಾತ್ಮ, ಮತಜನಸಮೂಹಕ್ಕೆ ಲಭ್ಯವಿರುವ ಓಪಿಯಂ.

ಮತ ವಿನಾಶವು ಜನರ ಭ್ರಮಾತ್ಮಕ ಖುಷಿಯನ್ನು ತೊಡೆದು ನಿಜ ಲೌಕಿಕ ಸುಖವನ್ನು ಬೇಡುವ ಕಾರ್ಯವಾಗಿದೆ. ನಿಮ್ಮ ಭ್ರಮೆಗಳನ್ನು ತೊರೆಯಿರಿ ಎಂದು ಜನರಿಗೆ ಹೇಳುವುದೇನಿದೆ, ಅದು ನಿಮ್ಮನ್ನು ಭ್ರಮೆಗಳ ದಾಸರನ್ನಾಗಿಸುವಂತೆ ಮಾಡಿರುವ ಲೋಕದ ಸ್ಥಿತಿಯನ್ನು ತೊಡೆಯುವುದಕ್ಕೆ ನೀಡಿದ ಕರೆಯಾಗಿ ಇರಬೇಕು. ಮತದ ಟೀಕೆಯು ತನ್ನ ಬೀಜದಲ್ಲೇ, ಮತದ ಪ್ರಭಾವಳಿಯನ್ನು ತೊಟ್ಟ ಜನರ ಕಣ್ಣೀರಧಾರೆಯನ್ನು ಅರಿವ ಜ್ಞಾನವಾಗಿರಬೇಕು."

- ಕಾರ್ಲ್ ಮಾರ್ಕ್ಸ್.

ಕ್ರಿಟಿಕ್ ಆಫ್ ಹೇಗೆಲ್ಸ್
ಫಿಲಾಸಫಿ ಆಫ್ ರೈಟ್

ಈ ಪಠ್ಯದಲ್ಲಿ 'ಮತ' ಎನ್ನುವ ಪದದ ಬದಲು 'ಜನಪ್ರಿಯ ಸಿನಿಮಾ'ವನ್ನು ಸೇರಿಸಿದರೆ, ನಮಗೆ ಜನಪ್ರಿಯ ಸಿನಿಮಾಗಳ ಲೋಕಚಿಂತನೆಯ ಆಧ್ಯಾತ್ಮ ಅನಾಯಾಸವಾಗಿ ದೊರಕಿಬಿಡುತ್ತದೆ! ಸಿನಿಮಾವನ್ನು ಒಂದು ಕಲಾಭಿವ್ಯಕ್ತಿಯ ಮಾಧ್ಯಮವಾಗಿ ಕಾಣುವ ಜನರಿಗೆ (ಸಾಮಾನ್ಯವಾಗಿ ಇಂಥವರನ್ನು ಕಲಾತ್ಮಕ ಸಿನಿಮಾ ಪ್ರಿಯರು, ಆರ್ಟ್‌ಹೌಸ್ ಮಂದಿ ಎನ್ನುವುದುಂಟು) ಜನಪ್ರಿಯ ಸಿನಿಮಾಗಳು, ದುಂದು ಹಣ ವ್ಯಯ ಮಾಡಿ ನಿರ್ಮಿಸಿದ, ಅತಿಯಾದ ಭಾವನಾತ್ಮಕ ಚೋದನೆ (ಮೆಲೋಡ್ರಾಮ)ಯ ಮೂಲಕ ಪ್ರೇಕ್ಷಕರನ್ನು ಭ್ರಾಮಕಪ್ರಪಂಚದ ಲೋಕದಲ್ಲಿ ಬೈಂದು ಮಾಡಿ, ವಾಸ್ತವಿಕ



ಸಂಗತಿಗಳ ಅರಿವಿನಿಂದ ವಂಚಿತರನ್ನಾಗಿಸುವ 'ಓಪಿಯಂ' ಅನಿಸುವುದು ಸಹಜ. ಜನಪ್ರಿಯ ಸಿನಿಮಾಗಳ ಮೂಲ ದ್ರವ್ಯವೇ ಇದು ಎನ್ನುವುದು ಸರಿಯಾದರೂ, ಜನಪ್ರಿಯ ಸಿನಿಮಾಗಳ ಸಾಧ್ಯತೆ ಇಷ್ಟೆಯೇ? ಅವುಗಳನ್ನು ಕಡೆಗಾಣಿಸುವ ಮೂಲಕ, ಅವುಗಳನ್ನು ಆಸ್ವಾದಿಸಿ, ಅವುಗಳಿಗೆ ಕೋಟ್ಯಾಂತರ ರೂಪಾಯಿಗಳ ಲಾಭ ಗಳಿಸಿಕೊಡುವ ಸಾಮಾನ್ಯ ಪ್ರೇಕ್ಷಕರು, ತಾವು ಶ್ರಮದಿಂದ ದುಡಿದು ಗಳಿಸಿದ ತಮ್ಮ ಬೆವರು, ಕೊಳೆಯಂಟಿಸಿಕೊಂಡ ರೂಪಾಯಿ ನೋಟುಗಳನ್ನು ಯಾಕೆ ಮುಗಿ ಬಿದ್ದು ಕೌಂಟರಲ್ಲಿ ತುರುಕಿ, ಗಾಢಾಂಧಕಾರದ ಥಿಯೇಟರಿನಲ್ಲಿ ಬೆಳ್ಳಿಪರದೆಯ ಕಡೆ ದೈವಿಕ ಕಣ್ಣುನೆಟ್ಟುಕೊಂಡು ಎರಡುವರೆ ಮೂರು ತಾಸು ಕಳೆಯುತ್ತಾರೆ ಎನ್ನುವ ರಹಸ್ಯದ ಅರಿವಾಗುತ್ತದೆಯೇ? ಒಟ್ಟಿಗೆ, ಸಿನಿಮಾವನ್ನು ಒಂದು ಕಲಾಭಿವ್ಯಕ್ತಿಯಾಗಿ ಅಧ್ಯಯನ ಮಾಡುವ ವಿದ್ಯಾರ್ಥಿಯಾಗಿಯೂ, ಎಲ್ಲಾ ಹಂಗು ಕಳಚಿ ಸಾಮಾನ್ಯ ಪ್ರೇಕ್ಷಕರ ಜೊತೆ ಜನಪ್ರಿಯ ಸಿನಿಮಾವನ್ನು ಸೀಟಿಗಂಟಿಕೊಂಡು ನೋಡುವ ಪ್ರೇಕ್ಷಕನಾಗಿಯೂ ನೋಡುವ ನನ್ನಂಥ ಜೀವಿಯನ್ನು ಈ ಸಮಸ್ಯೆ ಸದಾ ಚುಚ್ಚುತ್ತಲೇ ಇರುತ್ತದೆ.

ಇಂದು 'ಸುಲ್ತಾನ್' ಸಿನಿಮಾ ನೋಡಿ ಟಾಕೀಸಿನಿಂದ ಹೊರಬಂದ ಮೇಲೆ, ಈ ಸಮಸ್ಯೆ ಮತ್ತಷ್ಟು ಹೆಚ್ಚು ನನ್ನನ್ನು ಚುಚ್ಚತೊಡಗಿದೆ. ಹತ್ತಿರ ಹತ್ತಿರ ಮೂರು ತಾಸಿನ ಈ ಸಿನಿಮಾದ ವಿಮರ್ಶೆ ಬರೆಯುವುದಕ್ಕೆ ನಾನು ಹೊರಟಿಲ್ಲ. ಈ ಸಿನಿಮಾದ ಬಗ್ಗೆ ಬಹಳ ಘನವಾದ ಹಾಗು ಸಮತೋಲದ ವಿಮರ್ಶೆಯನ್ನು ಸ್ಕ್ರೋಲ್.ಇನ್‌ನಲ್ಲಿ ನನ್ನ ಬಹು ಮೆಚ್ಚಿನ ಸಿನಿಮಾ ವಿಮರ್ಶಕರಾದ ನಂದಿನಿ ರಾಮನಾಥನ್ ಬರೆದಿದ್ದಾರೆ. ಅವರು ಬರೆದ ಪ್ರತಿ ಪದಕ್ಕೂ ನನ್ನ ಸಹಮತವಿದೆ. ವಿಮರ್ಶೆ ಓದಿ:

http://scroll.in/article/811247/film-review-sultan-is-a-biopic-of-salman-khan-the-man-who-conquered-them-all?

'ದಂಗಲ್' ಎಂದು ಹರಿಯಾಣದಲ್ಲಿ ಖ್ಯಾತವಾಗಿರುವ ದೇಶಿ ಕಲೆ ಕುಸ್ತಿಯ ನಿಜ ಪೇಹಲ್ವಾನ್ ಮಹಾವೀರ್ ಸಿಂಗ್ ಫೋಗತ್ ತನ್ನ ಹೆಣ್ಣು ಮಕ್ಕಳನ್ನು ರಾಷ್ಟ್ರೀಯ ಖ್ಯಾತಿಯ ಕುಸ್ತಿಪಟುಗಳಾಗಿ ತರಬೇತುಗೊಳಿಸಿದ ಕಥನವನ್ನು ನಿರೂಪಿಸುವ ಅಮೀರ್ ಖಾನ್‌ನ 'ದಂಗಲ್' ಸಿನಿಮಾ ಈ ವರ್ಷದ ಡಿಸೆಂಬರ್‌ನಲ್ಲಿ ಬಿಡುಗಡೆಯಾಗಲಿದೆ. ಆದರೆ 'ಸುಲ್ತಾನ್' ಅದೇ ದಂಗಲ್ ಅಖಾಡದಿಂದ ಎದ್ದುಬಂದ ಸುಲ್ತಾನ್ ಅಲಿ ಖಾನ್ ಎನ್ನುವ ಕುಸ್ತಿಪಟುವಿನ ಕಥನವಾದರೂ, ಇದು ನಂದಿನಿ ಹೇಳುವ ಹಾಗೆ ನಟ ಸಲ್ಮಾನ್ ಖಾನ್‌ನ ಅಂತರಂಗ-ಬಹಿರಂಗದ ಬದುಕಿನ ಸೆಣಸಾಟವನ್ನು ಮೂಲದ್ರವ್ಯವಾಗಿ ಉಳ್ಳ, ಪ್ರತಿಮಾರೂಪದ ಸಲ್ಮಾನ್ ಆತ್ಮಚರಿತ್ರೆ. ಹೇಗೆ? ಎನ್ನುವ ಸ್ವಾರಸ್ಯವನ್ನು ನಂದಿನಿ ಮೇಲಿನ ತಮ್ಮ ಬರಹದಲ್ಲಿ ಸವಿವರವಾಗಿ ಬರೆದಿದ್ದಾರೆ-ಓದಿಕೊಳ್ಳಿ.

ಆದರೆ, ಸಿನಿಮಾ ನೋಡಿ ಬಂದನಂತರ ನನ್ನನ್ನು ಕಾಡುತ್ತಿರುವುದು 'ಸುಲ್ತಾನ್' ವಾಸ್ತವಿಕ ಹರಿಯಾಣವನ್ನು ತಲೆಕೆಳಗು ಮಾಡಿ, ನಮಗೆ ಮೂರು ತಾಸು ತೋರಿಸುವ, ಪುರಾಣರೂಪದ ಕಥನ.

-ಹರಿಯಾಣದಲ್ಲಿ 2014ರಿಂದ ರಾಜಕೀಯ ಆಧಿಪತ್ಯಕ್ಕಾಗಿ ಮತೀಯ ಗಲಭೆಗಳು ನಡೆದಿವೆ: ಅಟಲಿ, ರೋಹ್ಟಾಕ್, ಬಲ್ಲಬ್ಘರ್‌ಗಳಲ್ಲಿ.

ಹರಿಯಾಣದಲ್ಲಿ ಅಂತರ್ಜಾತೀಯ ಪ್ರೇಮಪ್ರಕರಣಗಳನ್ನು ನಿಷ್ಕರುಣೆಯಿಂದ ಕಡಿದು ಹಾಕಲು '(ಅವ)ಮರ್ಯಾದಾ ಹತ್ಯೆ'ಗಳನ್ನು ಖಾಪ್ ಪಂಚಾಯತ್‌ಗಳ ತೀರ್ಮಾನಗಳ ಮೂಲಕ ನಡೆಸಲಾಗಿದೆ.

ತೀರ ಇತ್ತೀಚಿಗೆ, ಜಾಟ್ ಸಮುದಾಯವು ತಮಗೆ ಮೀಸಲಾತಿ ಬೇಕೆಂದು ನಡೆಸಿದ ದೊಂಬಿಯ ವೇಳೆ, ಹತ್ತಾರು ಹೆಂಗಸರನ್ನು ಹೆದ್ದಾರಿಯಲ್ಲಿ ಅಪಹರಿಸಿ ಅತ್ಯಾಚಾರಗೈದ ಪ್ರಕರಣ ನಡೆದಿದೆ ಮತ್ತು ಹರಿಯಾಣದ ಗುರ್ಗಾಂವ್ ನಮ್ಮ ದೇಶದ ಜಾಗತೀಕರಣದ ಬಿಸಿ ಬಿಂದು. ಹಿಂದೂತ್ವದ ರಾಜಕೀಯ ಆಡುಂಬೋಲ, ಮಹಿಳೆಯರ ಸ್ವತಂತ್ರ ಬದುಕಿನ ಆಯ್ಕೆಯ ವಿರೋಧಿ, ಪುರುಷ ಕಾಮಪಿಪಾಸು, ಜಾಗತೀಕರಣದ ಮಾದರಿ ಪ್ರತಿಮೆ-ಇದು ಇತ್ತೀಚಿನ ವರ್ಷಗಳಲ್ಲಿ ನಮಗೆ ವಾಸ್ತವದಲ್ಲಿ ಕಾಣುವ ಹರಿಯಾಣ.



ಈ ವರ್ತಮಾನದ ವಾಸ್ತವಗಳನ್ನು ಮರೆಸಲು, ಯಾವುದೋ ಒಂದು ಗಂಧರ್ವ ಕಾಲ-ದೇಶಕ್ಕೆ ಕರೆದೊಯ್ದು (ಓ ಮೈ ಗಾಡ್! ಗೋವರ್ಕರ್‌ನ 'ಮೊಹೆಂಜದಾರೋ' ಅಂತಹ ಒಂದು ಪ್ರಯತ್ನಕ್ಕೆ ಕೈ ಹಾಕಿದೆ!) ಪ್ರೇಮ-ಬೇರ್ಪಡಿಕೆ-ಪುರುಷನ ವಿರೋಚಿತ ಹೋರಾಟ-ಪುನರ್ಮಿಲನದ ಕಥನವಾಗಿದ್ದರೆ 'ಸುಲ್ತಾನ್' ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುತ್ತಿತ್ತೋ ಇಲ್ಲವೋ! ಆದರೆ, ಈ ಸಿನಿಮಾದ ಭೂಮಿಕೆ ಇಂದಿನ, 2016ರ ಇದ್ ಹಬ್ಬದ ವೇಳೆಯ ಹರಿಯಾಣ! ಇಲ್ಲಿ ವಾಸ್ತವವನ್ನು ತಲೆಕೆಳಗು ಮಾಡುವ ಬಗೆಗಳನ್ನು ನೋಡಿ:

* ನಾಯಕ ಸುಲ್ತಾನ್ ಅಲಿ ಖಾನ್ ಹಾಗು ನಾಯಕಿ ಆರ್ಫಾರ ಮುಸಲ್ಮಾನ ಕುಟುಂಬಗಳು, ಹರಿಯಾಣದ ರೋಹ್ಟಾಕ್ ಜಿಲ್ಲೆಯ, ಅಟಲಿ, ಬಲ್ಲಬ್ಘರ್‌ನಂತಹ ಗ್ರಾಮದಲ್ಲಿ ಊರಿನ ಪರಿಸರದ ಕಣಕಣದಲ್ಲಿ ಬೆರೆತುಹೋದ ಸಂಸಾರಗಳಾಗಿವೆ. ಅವರುಗಳ್ಯಾರು 'ಮುಸಲ್ಮಾನ'ರು ಎಂಬ ಚಹರೆ ಮುಖ್ಯವಾಗುವುದಿಲ್ಲ.

* ನಾಯಕ ಸುಲ್ತಾನ್, ನಾಯಕಿ ಆರ್ಫಾ, ಗುಜರಾತಿನ ಹೆಮ್ಮೆಯ ದೇಶಿ ಕುಸ್ತಿ 'ದಂಗಲ್' ಕೌಶಲವನ್ನು, ಅಂತಾರಾಷ್ಟ್ರೀಯ ಮಟ್ಟದ ಕುಸ್ತಿ ಸ್ಪರ್ಧೆಯ ನಿಯಮಗಳಿಗೆ ತಕ್ಕ ಹಾಗೆ ಮಣಿಸಿಕೊಂಡು, ಹರಿಯಾಣದ ಕೀರ್ತಿ ಪತಾಕೆಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಾರಿಸುವ ಹೆಮ್ಮೆಯ ಮಗಳು/ಮಗ.

* ನಾಯಕ ಸುಲ್ತಾನ್‌ನ ದೋಸ್ತಿ, ಸದಾ ಬೆಂಬಲಿಗ ಗೋವಿಂದ್, ಅವನ ಬದುಕು-ಪ್ರೀತಿ-ನೋವು-ಪತನ-ಪುನರುಜ್ಜೀವನದಲ್ಲಿ ಜೀವಂತ ಭಾಗಿಯಾಗಿರುವವನು. ಅವನು ಸುಲ್ತಾನ್‌ನ ಬದುಕಿನ ಅವಿಭಾಜ್ಯ ಅಂಗ.

* ಅವನ ಪ್ರತಿಭೆ, ಖ್ಯಾತಿಗಳೇ, ಅವನ ಬದುಕಿನ ದುರಂತವಾಗಿ, ದುಃಖತಪ್ತ ಸಾಮಾನ್ಯ-ಹರಿಯಾಣಿ ಹಳ್ಳಿಗನಾಗಿರುವ ಸುಲ್ತಾನನಿಗೆ ಮರುಜೀವನದ ಬಾಗಿಲು ತೆರೆಯುವವರು ಹಿಂದೂ ಉದ್ಯಮಪತಿಗಳಾದ ತಂದೆ-ಮಗ.

* ನಾಯಕಿ ಆರ್ಫಳ ತಂದೆ ತನ್ನೂರಿನ ಖ್ಯಾತ 'ದಂಗಲ್'ನ ಗುರು. ತನ್ನ ಮಗಳನ್ನು ಭಾರತಕ್ಕೆ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಡುವುದಕ್ಕೆ ತರಬೇತು ಮಾಡುತ್ತಿರುವವನು. ಆರ್ಫ ದೆಹಲಿಯಲ್ಲಿ ಓದಿದರೂ ಬಡಾ ಶಹಾರದ ವಾಂಛೆ ಬಿಟ್ಟಾಕಿ ಹಳ್ಳಿಗೆ ತಂದೆಯ ಆಸೆ ಪೂರೈಸಲು ಮರಳುವವಳು. ತನ್ನ ಗುರಿಯ ಅಡ್ಡಿಯಾಗುವ ಎಲ್ಲಾ ಪ್ರೀತಿ-ಪ್ರೇಮದ ತರುಣ ವಾಂಛೆಗಳನ್ನೂ ನೂಕುವ ಗಟ್ಟಿಗಾತಿ. ಅವಳಿಗೆ 'ಫ್ರೆಂಡ್' ಹಾಗು 'ಗರ್ಲ್‌ಫ್ರೆಂಡ್' ನಡುವಿನ ವ್ಯತ್ಯಾಸ ಗೊತ್ತು ಮತ್ತೂ ನಾಯಕನಿಗೆ ಆ ವ್ಯತ್ಯಾಸವನ್ನು ಕೆನ್ನೆಗೆ ಹೊಡೆದು ತಿಳಿಸಬಲ್ಲ ಛಾತಿಯವಳು.

* ಇಷ್ಟು ಛಾತಿವಂತೆಯಾದರೂ ಅವಳಿಗೆ ಖ್ಯಾತಿ ಹಾಗು ಬದುಕಿನ ಪ್ರೀತಿಯ ನಡುವೆ ಪ್ರೀತಿ ಮುಖ್ಯ ಎಂದು ಬಲ್ಲ ಸೂಕ್ಷ್ಮಜ್ಞೆ. ಸುಲ್ತಾನ್ ಖ್ಯಾತಿಗೆ ಬಿದ್ದು ಪ್ರೀತಿಯನ್ನು ಕಡೆಗಾಣಿಸಿದಾಗ, ಅವನ ಜೊತೆ ಸಾಂಸಾರಿಕ ಸಂಬಂಧ ಕಡಿದುಕೊಳ್ಳುವ ದೃಢ ನಿರ್ಧಾರ ಕೈಗೊಳ್ಳಬಲ್ಲ ಸ್ವತಂತ್ರ ಮಹಿಳೆ. ಗಂಡಿಗೆ ಪ್ರೀತಿಯ ಮಹತ್ವವನ್ನು ನೋಯುವ ಬದುಕಿನ ಮೂಲಕ ಕಲಿಸಬಲ್ಲ ಛಲವಂತೆ.

..... ಎಲ್ಲಾ ನಾನೇ ಯಾಕೆ ಹೇಳುವುದು, ನೀವು ಈ ಕಣ್ಣಲ್ಲಿ ಸಿನಿಮಾ ಕಂಡರೆ, ಮತ್ತಷ್ಟು ನಿಮಗೆ ಕಂಡಾವು.


ಇವೆಲ್ಲವೂ ಹರಿಯಾಣದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲೇ ಕಾಣುವ ವಾಸ್ತವದ ತಲೆಕೆಳಗಾದ ಜಗತ್ತು. ಜನ ತಮ್ಮ ಕೈಯನ್ನೂ ಮೀರಿ ತಮ್ಮ ಕೈಯಿಂದ ಜಾರುತ್ತಿರುವ ಲೋಕವೊಂದನ್ನು ತಮಗೆ ಸಿಕ್ಕಷ್ಟು ಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳುವ ಸಲುವಾಗಿ, ತಮ್ಮ ಬೆವರು, ಕೊಳೆಯಿಂದ ಕೊಳಕಾದ ನೋಟುಗಳನ್ನು ಕೌಂಟರಿನ ಬಿಲದಲ್ಲಿ ನೂಕುತ್ತಿದ್ದಾರ!?

'ತೇರೆಖೂನ್ ಮೇ ಮಿಟ್ಟಿ
ಮಿಟ್ಟಿ ಮೇಂ ತೇರೆಖೂನ್
ಉಪರ್ ಅಲ್ಲಾ ನೀಛೆ ಧರತಿ
ಬೀಚ್ ಮೇ ತೇರೆ ಜುನೂನ್'
(ನಿನ್ನ ನೆತ್ತರಲ್ಲಿ ನೆಲದ ಮಣ್ಣು
ಮಣ್ಣಲ್ಲಿ ನಿನ್ನ ನೆತ್ತರು
ಆಗಸದಲ್ಲಿ ಅಲ್ಲಾ
ನೆಲದಲ್ಲಿ ಮಣ್ಣು
ನಡುವೆ ನಡೆದಿದೆ ನಿನ್ನ ಯುದ್ಧ!)

– ಈ 'ಸುಲ್ತಾನ್' ಮುಖವಾಣಿ ಹಾಡು ಜನರ ತಲೆ ಕೆಳಗಾಗುತ್ತಿರುವ ಹೃದಯವನ್ನು ಹಿಂಡುತ್ತಿದೆಯ!


'ಹಮ್ ಕುಸ್ತಿ ಚೋಡೆಯೇ ಹೈಂ! ಮಗರ್ ಲಡ್ನಾ ನಹೀ ಬುಲೇಂ ಹೈ' ಅನ್ನೋ ಡೈಲಾಗ್, ವಾಸ್ತವದಲ್ಲಿ ಸೋತು ಸುಣ್ಣವಾಗುತ್ತಿರುವ ಮಂದಿಯ ಕಿವಿಯಲ್ಲಿ ಗಂಟೆಯಂತೆ ಹೊಡೆದರೆ ಆಶ್ಚರ್ಯವಲ್ಲ ಬಿಡಿ.

■ ಕೆ.ಫಣಿರಾಜ್



ನೆರೂಡ ಮನೆಗೆ ದಾರಿ

ಜುಲೈ 12, ಖ್ಯಾತ ಕವಿ ಪಾಬ್ಲೊ ನೆರೂಡನ ಜನ್ಮದಿನ. ಈ ಹಿನ್ನೆಲೆಯಲ್ಲಿ ನೆರೂಡ ಕುರಿತು ಎರಡು ಲೇಖನಗಳು ಇಲ್ಲಿವೆ. ಗೆಳತಿ ಡಾ.ಎಚ್.ಎಸ್. ಅನುಪಮಾ ಅವರು ಇತ್ತೀಚೆಗೆ ಚಿಲಿ ದೇಶಕ್ಕೆ ಹೋಗಿದ್ದಾಗ ಅಲ್ಲಿರುವ ನೆರೂಡನ ವಿಸ್ಮಯಕಾರಿ ಮನೆಗೂ ಭೇಟಿ ನೀಡಿದ್ದರು. ಆ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಜೊತೆಗೆ ಮಿತ್ರ ರಂಜಾನ್ ದರ್ಗಾ ಅವರೂ ನೆರೂಡನ ಬದುಕು ಮತ್ತು ಬರಹಗಳ ಪ್ರಾಮುಖ್ಯತೆಯನ್ನು ಇಲ್ಲಿ ವಿವರಿಸಿದ್ದಾರೆ.



ನೆಲದ ಮೇಲಿನ ನಾವಿಕ ಕವಿಯ ಮನೆಗೆ ಹೋದೆವು!

ಈಗ್ಗೆ ನಾಲ್ಕು ತಿಂಗಳ ಹಿಂದೆ ಚಿಲಿಯ ರಾಜಧಾನಿಯಿಂದ 111 ಕಿಮೀ ದೂರದಲ್ಲಿರುವ ವಾಲ್ಪರೈಸೊ ಪಟ್ಟಣದ 'ಲಾ ಸೆಬಾಸ್ಟಿಯಾನಾ'ಗೆ ಹೋಗಿಬಂದೆವು. ಅದು 'ಒಂದು ದೇಶದ ನದಿಗಳು ಎಂದರೆ ಅಲ್ಲಿನ ಕವಿಗಳು' ಎಂದ ಕವಿಯ ಮನೆ. ಆ ಆಪ್ತ ಕವಿಮಿತ್ರ ನೆಫ್ತಾಲಿ ರಿಕಾರ್ದೊ ಎಲಿಯೆಸರ್ ರೆಯೆಸ್ ಬಸುವಾಲ್ತೊನ ಮನೆಯ ಮೂಲೆಮೂಲೆ ನೋಡಿ, ಕೆಫೆಯಲ್ಲಿ ಕಾಫಿಯನ್ನೂ ಕುಡಿದುಬಂದೆವು.

ಹೀಗೆಂದರೆ ಹೇಳುತ್ತಿರುವುದೇನೆಂದೇ ಹಲವರಿಗೆ ತಿಳಿಯದೆ ಹೋಗಬಹುದು. ಆದರೆ ಚಿಲಿಯ ಕವಿ ಪಾಬ್ಲೊ ನೆರೂಡನ ಮನೆಗೆ ಹೋಗಿಬಂದೆವು ಎಂದರೆ ಎಲ್ಲ ಅತ್ಯಾಸಕ್ತಿಯಿಂದ ಪ್ರಶ್ನೆಗಳ ಕೇಳಿಯಾರು. ಹೌದು, ಹತ್ತನೇ ವಯಸ್ಸಿಗೆ ಕಾವ್ಯ ಬರೆಯಲು ಮೊದಲು ಮಾಡಿದ ರೆಯೆಸ್-ಬಸುವಾಲ್ತೊ ದಂಪತಿಗಳ ಮಗ ನೆಫ್ತಾಲಿ ರಿಕಾರ್ದೊ ಎಲಿಯೆಸರನೇ ಕನ್ನಡಪ್ರಜ್ಞೆಗೆ ತುಂಬ ಹತ್ತಿರದವನಾಗಿರುವ ಪ್ಯಾಬ್ಲೊ ನೆರೂಡ. ಓಎಲ್ಲೆನ್ ಅನುವಾದಿಸಿರುವ ನೆರೂಡನ ಆತ್ಮಕತೆ ಹಾಗೂ ತೇಜಶ್ರೀ ಅನುವಾದಿಸಿರುವ ಅವನ ಕವಿತೆಗಳ ಓದುತ್ತ ಕವಿಯ ಕರ್ಮಭೂಮಿಗೆ ಹೋಗಿಬಂದದ್ದು ಅವಿಸ್ಮರಣೀಯ ಅನುಭವ ಎನಿಸಿತು.

ನೆರೂಡ ಸಾಹಿತ್ಯಕ್ಕಾಗಿ ನೊಬೆಲ್ ಪಡೆದ ಚಿಲಿಯ ಕವಿ. ಮೊದಲ ಕವಿತೆಗಳು ಪ್ರಕಟಗೊಂಡಾಗ ಕವಿ ತಾನೇ ಎನ್ನುವುದು ಅಪ್ಪನಿಗೆ ಗೊತ್ತಾಗದಿರಲೆಂದು ಜಾನ್ ನೆರೂಡ ಎಂಬ ಝೆಕೊಸ್ಲವಾಕಿಯನ್ ಕವಿಯ ಹೆಸರನ್ನು ತನ್ನ ಕಾವ್ಯನಾಮವಾಗಿಸಿಕೊಂಡ. ಹಲವು ವಸ್ತುವಿಷಯಗಳನ್ನೊಳಗೊಂಡ, ಹಲವು ಶೈಲಿಯ ಕವಿತೆಗಳನ್ನು ಬದುಕಿನುದ್ದಕ್ಕೂ ಬರೆದ, ಕೇವಲ ಕವಿತೆಗಳನ್ನೆ ಬರೆದ. ಗಣಿಕಾರ್ಮಿಕರು, ವೇಗಾ ಮಾರ್ಕೆಟ್ಟಿನ ಹಮಾಲಿಗಳು, ಭೂಗತ ರೌಡಿ, ಕುರಿಕಾಯುವ ಹುಡುಗರಿಂದ ಹಿಡಿದು ಚೆಗೆವಾರ, ಪಿಕಾಸೊ, ಸ್ಟಾಲಿನ್ ಮೊದಲಾದ ಮಹಾನ್ ಚೇತನಗಳೂ ಅವನ ಕಾವ್ಯಾಭಿಮಾನಿಗಳಾಗಿದ್ದರು.

ಅವ ಕವಿಯಷ್ಟೇ ಅಲ್ಲ, ಚಿಲಿಯನ್ ಕಮ್ಯುನಿಸ್ಟ್ ಪಕ್ಷದ ಸದಸ್ಯ ಮತ್ತು ರಾಜಕಾರಣಿ. ಹಲವು ರಾಜತಾಂತ್ರಿಕ ಹುದ್ದೆ ನಿರ್ವಹಿಸಿದ ವಿಶ್ವ ಸಂಚಾರಿ. ಕಮ್ಯುನಿಸಂ ಅನ್ನು ಪ್ರೀತಿಸಿದ. ಕಾರ್ಯಕರ್ತರ ಸಶಸ್ತ್ರೀಕರಣ ವಿರೋಧಿಸಿದ. ಬಂಧನದ ಭೀತಿ ಎದುರಿಸಿದ. ಅನಿವಾರ್ಯವಾಗಿ ಭೂಗತನಾದ. ಇದರ ನಡುವೆಯೂ ಒಬ್ಬರಾದ ಮೇಲೊಬ್ಬ ಹೆಣ್ಣುಗಳನ್ನು ಪ್ರೇಮಿಸಿದ, ಕಾಮಿಸಿದ, ಮದುವೆಯಾದ, ಕವಿತೆಗಳ ಹೆರುತ್ತ ಹೋದ. ನೆರೂಡನನ್ನು ಅವನ ಎಡಪಂಥೀಯ ಒಲವಿಗಾಗಿ, ರೊಮ್ಯಾಂಟಿಕ್ ಪ್ರೇಮಕವಿತೆಗಳಿಗಾಗಿ, ರಾಜಕಾರಣದ ಸ್ಪಷ್ಟತೆಗಾಗಿ, ಪ್ರಕೃತಿ ಪ್ರೇಮಕ್ಕಾಗಿ


ನೆರೂಡ ಮನೆ ಹೊರನೋಟ

ಹೀಗೆ ನಾನಾಕಾರಣಗಳಿಗಾಗಿ ಆರಾಧಿಸುವವರಿದ್ದಾರೆ. ಆ... ಕವಿತೆ, ಸಿದ್ಧಾಂತ, ವಿಚಾರಗಳಾಚೆಗೂ ಬೆಳೆದುನಿಂತ ಅ... ಸೃಜನಶೀಲ ವ್ಯಕ್ತಿತ್ವ ಅದು. ಆಸೆ ಮತ್ತು ಭರವಸೆ... ಕುರುಹು ಎಂದು ಹಸಿರು ಬಣ್ಣದ ಶಾಯಿಯ... ಬರೆಯುತ್ತಿದ್ದ ಕನಸುಗಾರ ಅವನು. ಒಣನೆಲದಲ್ಲಿ... ಹಾಯಿ ನಡೆಸುವ ನಾವಿಕ – 'ನೇವಿಗೇಟರ್ ಆಫ್ ದ್ಯ ಲ್ಯಾಂಡ್'.

ಕಡುವ್ಯಾಮೋಹಿ ಕವಿ

ನೆರೂಡನಿಗೆ ಕಡಲು ಇಷ್ಟ. ಹಡಗು ಇಷ್ಟ. ನಾವಿ... ಇಷ್ಟ. ಅವರ ಸಾಹಸಯಾನದ ಕತೆ ಕೇಳಲು ಇ... ಇಷ್ಟ. ಎಂದೇ ಕಡಲ ತೀರದಲ್ಲಿ ಮನೆ ನಿರ್ಮಿಸಿಕೊ... ನಾವೆಯಂತೆ ಕಾಣುವ ಮನೆಗಳ ಕಟ್ಟಿ, ಬಿಳಿಯ ಮೀ... ಚಿತ್ರವಿರುವ ನೀಲಿ ಬಾವುಟವನ್ನು ಮೇಲೆ ಹಾರಿಸಿದ...

'ಎಲ್ಲಿಯೂ ನಿಲ್ಲದಿರು, ಮನೆಯನೆಂದೂ ಕಟ್ಟದಿ...' ಎಂದು ಕುವೆಂಪು ಹೇಳಿದ್ದು ಕವಿಯ ಜೀವಚೈತನ್ಯ ಕುರಿ... ತನಗಿಷ್ಟ ಬಂದಲ್ಲಿ ತನ್ನಿಷ್ಟದಂತೆ ಮನೆ ಕ... ಅಮೂಲ್ಯವೆನಿಸುವುದನ್ನೆಲ್ಲ ಒಪ್ಪಗೊಳಿಸಿ, ಅದರೊ... ಬದುಕುತ್ತ ನೆಮ್ಮದಿ ಕಂಡುಕೊಳ್ಳುವುದು ಮನುಷ್ಯ ಗು... ಇದರಿಂದ ನೆರೂಡ ಹೊರತಾಗಿರಲಿಲ್ಲ. ಹಾಗೆ ನೋಡಿ... ಬೊಂಬೆ, ಮಣಿ, ಕಪ್ಪೆಚಿಪ್ಪು ಬಣ್ಣದ ಗಾಜುಗಳಿಂದ ಹಿಡಿ... ಪುಸ್ತಕ, ನಕಾಶೆ, ಕಡಲ ನಾವಿಕನ ದಿಕ್ಸೂಚಿಯವ... ಎಲ್ಲವನ್ನೂ ಸಂಗ್ರಹಿಸುತ್ತಿದ್ದ ನೆರೂಡ ಕಡುವ್ಯಾಮೋಹಿ...

ಎಷ್ಟೋ ಕವಿಗಳ ಮನೆ ನೋಡಿದ್ದರೂ, ನೆರೂ... ಮನೆ ನೋಡಿದ ಮೇಲೆ ಅವನಷ್ಟು ವಸ್ತು ಮೋ...

ಕಾವ್ಯದ ಮೂಲಕ ರಾಜಕೀಯ ಪ್ರಜ್ಞೆ ತುಂಬಿದ ಪಾಬ್ಲೊ ನೆರೂಡ

ಹೊಸಕಿ ಹಾಕಬಹುದು
ನೀವು ಎಲ್ಲ ಹೂಗಳನ್ನು,
ತಡೆಯಲಿಕ್ಕಾಗದು ನಿಮಗೆ
ವಸಂತ ಋತುವನ್ನು.

– ಪಾಬ್ಲೊ ನೆರೂಡ

"ಸಂಪರ್ಕವೇ ಇಲ್ಲದ ಜನತೆ ಮತ್ತು ತುಂಬ ವಿಭಿನ್ನವಾದ ರಾಷ್ಟ್ರಗಳು ಶಾಂತಿಯುತವಾಗಿ ಬದುಕುವುದಕ್ಕಾಗಿ, ಜ್ಞಾನದ ವಿನಿಮಯ ಮಾಡಿಕೊಳ್ಳುವುದಕ್ಕಾಗಿ, ಪ್ರೀತಿ ಮತ್ತು ಗೌರವ ವ್ಯಕ್ತಪಡಿಸುವುದಕ್ಕಾಗಿ ತಮ್ಮ ಎಲ್ಲ ಶಕ್ತಿ ಮತ್ತು ಕೋಮಲ ಭಾವದೊಂದಿಗೆ ಕಾರ್ಯೋನ್ಮುಖವಾಗುವಂತೆ ಮಾಡುವುದು ನನ್ನ ಕಾವ್ಯದ ಕರ್ತವ್ಯವಾಗಿದೆ" ಎಂದು ಸಾರಿದ ಪಾಬ್ಲೊ ನೆರೂಡ ಜಗತ್ತಿನ ಎಲ್ಲ ಜನಾಂಗಗಳು ಶಾಂತಿ, ಪ್ರೀತಿ ಮತ್ತು ಮಾನವ ಘನತೆಯೊಂದಿಗೆ ಬದುಕಲು ನೆರವಾಗುವಂಥ ಕಾವ್ಯ ರಚನೆಯಲ್ಲಿ ತೊಡಗಿದರು. ಹೀಗಾಗಿ ಅವರ ಕಾವ್ಯ ವಿಶ್ವದ ಮೂಲೆಮೂಲೆಗಳನ್ನು ತಲುಪಿದೆ. ಜನರ ಅಂತರಾಳದಲ್ಲಿ ಮನೆ ಮಾಡಿದೆ.

ಅವರಿಂದಾಗಿ ಚಿಲಿಯ ರಾಜಕಾರಣದಲ್ಲಿ ಚೈತನ್ಯ ಮೂಡಿತು. ಕಾವ್ಯದಲ್ಲಿ ರಾಜಕೀಯ ತರುವುದು ಕಠಿಣ ಕೆಲಸವಲ್ಲ. ಆದರೆ ನೆರೂಡ ವೈಶಿಷ್ಟ್ಯವೆಂದರೆ ರಾಜಕೀಯ ಘೋಷಣೆಗಳಿಲ್ಲದೆ ಮತ್ತು ಕೋಪ-ದ್ವೇಷಗಳಿಲ್ಲದೆ ಕಾವ್ಯದಲ್ಲಿ ರಾಜಕೀಯ ರಸಘಟ್ಟವನ್ನು ಸೃಷ್ಟಿಸಿರುವುದು. ಇಂಥ ಕವಿಗಾಗಿ ಸೃಷ್ಟಿ ಶತಶತಮಾನಗಳಿಂದ ಕಾದಿರಬಹುದು ಎಂದು ಸಹೃದಯನಿಗೆ ಅನಿಸದೆ ಇರದು.

ಮನುಷ್ಯನನ್ನು ಮತ್ತು ಪ್ರಕೃತಿಯನ್ನು ಆಳವಾಗಿ ಪ್ರೀತಿಸುವ ಸೃಜನಶೀಲರು ಮಾತ್ರ ಇಂಥ ಸೃಷ್ಟಿಕ್ರಿಯೆಯಲ್ಲಿ ತೊಡಗಬಲ್ಲರು ಎಂಬುದನ್ನು ನೆರೂಡ ತಮ್ಮ ಕೃತಿಗಳ ಮೂಲಕ ತೋರಿಸಿಕೊಟ್ಟಿದ್ದಾರೆ.

ನೆರೂಡ ತಮ್ಮ ಜೀವಿತದ ಕೊನೆಯ ಗಳಿಗೆಯವರೆಗೂ ಕಾವ್ಯದ ಮೂಲಕ ರಾಜಕೀಯ ಪ್ರಜ್ಞೆ ಮೂಡಿಸುವಲ್ಲಿ ತಲ್ಲೀನರಾದರು. ಕಾವ್ಯ ಮತ್ತು ರಾಜಕಾರಣದ ಬೆಸುಗೆಯನ್ನು ನೆರೂಡ ಹಾಗೆ ಮಾಡಿದ ಕವಿಗಳು ವಿಶ್ವದಲ್ಲಿ ಅಪರೂಪ.



ಅವರು ಮಾನವೀಯ ರಾಜಕಾರಣವನ್ನು ಆಯ್ಕೆ ಮಾಡಿಕೊಂಡರು. ಅವೆರಡೂ ಬದುಕಿನ ಅವಿಭಾಜ್ಯ ಅಂಗವೆಂದು ತೋರಿಸಿಕೊಟ್ಟರು. ಚಿಲಿ ದೇಶದ ಮಹಾನ್ ರಾಜನೀತಿಜ್ಞನಾಗಿ, ಫ್ರಾನ್ಸ್ ಮುಂತಾದ ದೇಶಗಳಲ್ಲಿ ರಾಯಭಾರಿಯಾಗಿ ಅವರು ಕಾರ್ಯ ನಿರ್ವಹಿಸಿದರು, ನಿಜ. ಆದರೆ ಕಾವ್ಯವೇ ಅವರ ನಿಜವಾದ ಕ್ಷೇತ್ರವಾಗಿತ್ತು. ಚಿಲಿಯ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಚಿಲಿಯ ಜನತೆ ಮತ್ತು ರಾಜಕೀಯ ನಾಯಕರು ಎಷ್ಟೇ ಒತ್ತಾಯಿಸಿದರೂ ನೆರೂಡ ಕಿವಿಗೊಡಲಿಲ್ಲ. ಅವರ ಕಿವಿಯಲ್ಲಿ ಕಾವ್ಯ ತುಂಬಿತ್ತು; ಅವರ ಹೃದಯದಲ್ಲಿ ಕಾವ್ಯ ತುಂಬಿತ್ತು.

ಪಾಬ್ಲೊ ನೆರೂಡ 1904ನೇ ಜುಲೈ 12ರಂದು ಚಿಲಿ ದೇಶದ ಪರ್‍ರಾಲ್ ಪಟ್ಟಣದಲ್ಲಿ ಜನಿಸಿದರು. ಜೀವಿತದ 69 ವರ್ಷಗಳಲ್ಲಿ 55 ವರ್ಷಗಳನ್ನು ಬರವಣಿಗೆಯಲ್ಲಿ ಕಳೆದರು. ಕಾವ್ಯೋದ್ಯೋಗದಿಂದಾಗಿ ಅವರು ವಿಶ್ವ ನಾಗರಿಕರಾದರು. ಕೋಟಿ ಕೋಟಿ ಜನರ ಆಶಯಗಳ ಪ್ರತೀಕವಾದ ಅವರ ಕಾವ್ಯದಲ್ಲಿ ಇತಿಹಾಸವಿದೆ, ಆತ್ಮಚರಿತ್ರೆಯಿದೆ, ಪ್ರೀತಿ ಮತ್ತು ಸ್ವಾತಂತ್ರ್ಯವಿದೆ.


ರಿಕಾರ್ಡೊ ಎಲಿಯೆಸೆರ್ ನೆಫ್ತಾಲಿ ರೆಯೆಸ್ ಬಸೊವಾಲ್ತೊ 14 ವರ್ಷದ ಬಾಲಕನಿದ್ದಾಗ ಮೊದಲ ಬಾರಿಗೆ ಕವನ ಬರೆದ. ಆದರೆ ತನ್ನ ಹೆಸರಿನಲ್ಲೇ ಬರೆಯಲು ಭಯಪಟ್ಟ! ಏಕೆಂದರೆ ಅವನ ತಂದೆ ಡಾನ್ ಜೋಸೆ ಡೆಲ್ ಕಾರ್ಮೆನ್ ರೆಯೆಸ್ ಮೊರಾಲೆಸ್‌ಗೆ ಪದ್ಯ ಸೇರುತ್ತಿರಲಿಲ್ಲ. ಮಗ ಗಣಿತದಲ್ಲಿ ಕಡಿಮೆ ಅಂಕ ಪಡೆಯುವುದಕ್ಕೆ ಆತನಿಗೆ ಕಾವ್ಯದಲ್ಲಿ ಇರುವ ಆಸಕ್ತಿಯೇ ಕಾರಣ ಎಂದು ಅವರು ಭಾವಿಸಿದ್ದರು. ಆದ್ದರಿಂದ ಆ ಬಾಲಕ 'ಪಾಬ್ಲೊ ನೆರೂಡ' ಎಂಬ ಕಾವ್ಯನಾಮದಿಂದ ಕಾವ್ಯ ರಚನೆ ಪ್ರಾರಂಭಿಸಿದ. ಮತ್ತೆ ಮತ್ತೆ ಬರೆಯುತ್ತಲೇ ಹೋದ. ಕಾವ್ಯಧಾರೆ ಹಳ್ಳಕೊಳ್ಳಗಳಾಗಿ, ನದಿಯಾಗಿ, ಮಹಾನದಿಯಾಗಿ ಪಂಚಖಂಡಗಳ ಜನಸಾಗರದ... ಸೇರುತ್ತಲೇ ಹೋಯಿತು. ಹೊಸ ಜೀವಶಕ್ತಿಯ... ತುಂಬುತ್ತಲೇ ನಡೆಯಿತು.

ಪಾಬ್ಲೊ ನೆರೂಡ ಜೀವನದುದ್ದಕ್ಕೂ ಆರು ಸಾವಿರಕ್ಕೂ ಹೆಚ್ಚಿನ ವೃತ್ತಗಳನ್ನು ರಚಿಸಿದರು. ಅನೇಕ ಗದ್ಯಗ್ರಂಥ... ರಚನೆ ಮಾಡಿದರು. ಅವರ ಸಾಹಿತ್ಯ ಸ್ಪಾನಿಷ್ ಭಾಷೆಯ... ಬರೆದ ಕೇವಲ ಲ್ಯಾಟಿನ್ ಅಮೆರಿಕನ್ ಸಾಹಿತ್ಯವಲ್ಲ; ಅ... ವಿಶ್ವ ಸಾಹಿತ್ಯ. ಅವರ ಸಾಹಿತ್ಯದಲ್ಲಿ ಭಾರತದ ಬು... ಗಾಂಧಿ, ನೆಹರು, ಸುಭಾಸಚಂದ್ರ ಬೋಸ್, ಕಲ್ಕತ್ತ ನ... ಉತ್ತರ ಭಾರತ, ದಕ್ಷಿಣ ಭಾರತ, ದ್ರಾವಿಡ ಶಿಲ್ಪ, ಕ... ಕಪ್ಪಾದ ತಮಿಳು ಸುಂದರಿ ಹೀಗೆ ಎಲ್ಲರೂ ಇದಾ... ಎಲ್ಲವೂ ಇವೆ.

ತಮ್ಮ ದೇಶ ಮತ್ತು ಇತರ ದೇಶಗಳನ್ನು ... ಅರಿತುಕೊಳ್ಳಲೆಂದು ನೆರೂಡ ಸಾಹಿತ್ಯ ಸೃಷ್ಟಿಸಿದರು. ಜ... ಇತಿಹಾಸ, ವರ್ತಮಾನ ಮತ್ತು ಭವಿಷ್ಯದ ಮೂ... ಅರಿತದ್ದನ್ನೇ ಹೆಚ್ಚು ಸ್ಪಷ್ಟವಾಗಿ, ಆಳವಾಗಿ ಮ... ಕಲಾತ್ಮಕವಾಗಿ ಜನತೆಗೆ ಹಿಂದಿರುಗಿಸಿದರು. ಅತಿ ಉದ್ದನೆ... ಕರಾವಳಿ ಹೊಂದಿರುವ, ಹಿಮಾಚ್ಛಾದಿತ ಪರ್ವತಶ್ರೇಣಿಗಳ... ತುಂಬಿರುವ, ನಿತ್ಯಹರಿದ್ವರ್ಣದ ಅರಣ್ಯದಿಂದ ಕಂಗೊಳಿಸು... ಜ್ವಾಲಾಮುಖಿಗಳಿಂದ ತತ್ತರಿಸುವ ಮತ್ತು ಶಾ... ಸರೋವರಗಳಿಂದ ನೆಮ್ಮದಿ ನೀಡುವ ಚಿಲಿಯಲ್ಲಿ ಬದುಕ... ಛಲದಿಂದ ದುಡಿಯುತ್ತ ಸಾಗಿರುವ ಲಕ್ಷಗಟ್ಟಲೆ ಜನರ... ಅವರು ಅಪ್ಪಿಕೊಂಡರು.

ವಿಶ್ವದಲ್ಲೇ ಅತಿದೊಡ್ಡದಾಗಿರುವ ತಾಮ್ರದ ಗಣಿಗಳ... ಕಪ್ಪಾಗಿ ಮೇಲೆ ಬಂದವರ ಮೈಯ ಬೆವರನ್ನು ಅ... ಕವನದ ಸಾಲುಗಳು ಒರೆಸಿದವು. ನಿರಕ್ಷರಿಗಳಿಗೆ ಕಣ್ಣಾದ... ಬರಿಗಾಲಿನಿಂದ ದುಡಿಯುವವರಿಗೆ ಚಪ್ಪಲಿಗಳಾದವು! ಕ... ಸಾಧಿಸಬೇಕಾಗಿರುವುದು ಇದನ್ನೇ ಎಂದು ಅವ... ವಾದಿಸಿದರು.

ನೆರೂಡ ತಮ್ಮ ಕಾವ್ಯಕ್ಕಾಗಿ ಬದುಕಿದರು. ಅಂತೆ... ಆ ಕಾವ್ಯ ಜನತೆಗಾಗಿ ಚಿರಕಾಲ ಬದುಕುವ ಸಾಮರ್ಥ್ಯ... ಹೊಂದಿದೆ. ಅವರಿಗೆ ಲೆಕ್ಕವಿಲ್ಲದಷ್ಟು ಪ್ರಶಸ್ತಿಗಳು ಬಂದಿ...



ನೆರೂಡ ಮನೆಯಲ್ಲಿರುವ ವಿಸ್ಮಯಕಾರಿ ಸಂಗ್ರಹಗಳು

ಯುವವರು ತುಂಬ ಕಡಿಮೆ ಜನ ಎನಿಸಿತು. ನೆರೂಡ ನಗೆ ಬೇಕೆನಿಸಿದ ವಸ್ತುಗಳನ್ನು ಹೇಗಾದರೂ ಪಡೆಯುತ್ತಿದ್ದ. ನೀವು ಯಾವುದೆಂದರೆ ಯಾವುದೇ ವಸ್ತುವನ್ನಾದರೂ ಪಡೆಯಬಹುದು. ಅದಕ್ಕೆ ಬೇಕಾದದ್ದು ನಿಮಗದು ಬೇಕೇಬೇಕೆಂಬ ತೀವ್ರ ಹಂಬಲ. ಅಷ್ಟಿದ್ದರೆ ಅದು ತಂತಾನೇ ಬಂದು ನಿಮ್ಮ ಕೈಸೇರುತ್ತದೆ" ಎನ್ನುತ್ತಿದ್ದ. ಕವಿಯೇ ಹೇಳಿಕೊಂಡಿರುವಂತೆ:

"ನನ್ನ ಮನೆ ನೋಡಿ ಕೆಲವರು ಎಂಥಾ ಹುಚ್ಚ! ಎಂತೆಂಥ ವಸ್ತುಗಳನ್ನು ಸಂಗ್ರಹಿಸಿದ್ದಾನೆ ಅನ್ನುತ್ತಾರೆ. ಉಕ್ಕಿಹೋದ ಸ್ವಚ್ಛ ಬೀಚುಗಳಲ್ಲಿ ಅಲೆದಾಡುತ್ತ ಅದ್ಭುತವಾದ ...ದ ಚಿಪ್ಪುಗಳನ್ನು ಸಂಗ್ರಹಿಸಿದ್ದೆ. ಅನಂತರ ಕ್ಯೂಬಾ ...ತ್ತರ ಕಡೆಗಳಲ್ಲಿ ನನ್ನ ಬಳಿ ಇದ್ದ ಚಿಪ್ಪುಗಳನ್ನು ವಿನಿಮಯ ಮಾಡಿ, ಕೆಲವನ್ನು ಖರೀದಿಸಿ, ಕೆಲವೊಮ್ಮೆ ಉಡುಗೊರೆ ಪಡೆದು, ಮತ್ತೆ ಅಪರೂಪಕ್ಕೆ ಬೇರೆಯವರ ಸಂಗ್ರಹದಿಂದ ...ದ್ದು (ಯಾವುದೇ ವಸ್ತುಗಳ ಪ್ರಾಮಾಣಿಕ ಸಂಗ್ರಾಹಕರು ...ಲ್ಲ) ನನ್ನ ಸಂಗ್ರಹ ಬೆಳೆಸಿದೆ. ಚೀನಾ ಸಮುದ್ರದ ಅಪೂರ್ವ ...ದರಿಗಳು, ಫಿಲಿಪೈನ್ಸ್, ಜಪಾನ್ ಮತ್ತು ಬಾಲ್ಟಿಕ್‌ನಿಂದ ಸಂಗ್ರಹಿಸಿದ ಚಿಪ್ಪುಗಳಿದ್ದವು. ಅಂಟಾರ್ಕಟಿಕದ ಶಂಕುಗಳು, ಕ್ಯೂಬಾದ ಕಪ್ಪೆಚಿಪ್ಪುಗಳು, ಕೆರೀಬಿಯದ ನರ್ತಕಿಯರಿಂದ ಸಂಗ್ರಹಿಸಿದ ಕೆಂಪು, ಕೇಸರಿ ಬಣ್ಣದ, ನೀಲಿ, ಊದಾ ಬಣ್ಣಗಳ ಚಿಪ್ಪುಗಳೂ ಇದ್ದವು. ಕೊನೆಗೆ ನನ್ನ ಸಾಗರ ಸಂಪತ್ತು ಒಂದಿಡೀ ಕೋಣೆ ತುಂಬುವಷ್ಟಾಯಿತು. ನನಗಾಗಿ ಶಂಕು, ಕಪ್ಪೆಚಿಪ್ಪು ಸಂಗ್ರಹಿಸಿ ತಂದು ಗೆಳೆಯರಿಗೂ ಚಿಪ್ಪಿನ ಹುಚ್ಚು ಹಿಡಿಯಿತು. ನನ್ನಲ್ಲಿ ಹದಿನೈದು ಸಾವಿರ ಚಿಪ್ಪುಗಳ ಸಂಗ್ರಹವಿತ್ತು. ಅವು ಮನೆಯ ಬೀರು-ಶೆಲ್ಫುಗಳ ತುಂಬಿ ಟೇಬಲ್ಲು, ಕುರ್ಚಿಗಳ ಮೇಲೆಲ್ಲ ಜಾಗ ಮಾಡಿಕೊಂಡವು. ಕಾಂಚಾಲಜಿ, ಮಲಕಾಲಜಿ, ಚಿಪ್ಪಿನಶಾಸ್ತ್ರ ಎಂದು ಏನು ಬೇಕಾದರೂ ಕರೆಯಿರಿ, ಅದಕ್ಕೆ ಸಂಬಂಧಪಟ್ಟ ಪುಸ್ತಕಗಳು ನನ್ನ ಗ್ರಂಥಾಲಯದಲ್ಲಿ ತುಂಬಿಕೊಂಡವು.."

ಕಪ್ಪೆಚಿಪ್ಪುಗಳಂತೆಯೇ ಕವಿಯ ಬಳಿ ವಿಶಿಷ್ಟ ಬೊಂಬೆ ಸಂಗ್ರಹವೂ ಇತ್ತು! ಬೊಂಬೆಯಾಕಾರದ ವೈನ್ ಬಾಟಲು, ಬಾಟಲಿಯೊಳಗೆ ಹಡಗು ಕೂರಿಸಿದ ಬೊಂಬೆ, ಹಡಗಿನ ಮುಂಚೂಣಿಯಲ್ಲಿರುತ್ತಿದ್ದ ಫಿಗರ್‌ಹೆಡ್ ಬೊಂಬೆ ಎಲ್ಲ ಇದ್ದವು. ಕವಿಗೇಕೆ ಬೊಂಬೆ? ಅವನ ಮಾತುಗಳಲ್ಲೇ ನಮ್ಮ ಅಚ್ಚರಿಗೆ ಉತ್ತರವಿದೆ: "ಆಟವಾಡದ ಮಗು ಮಗುವೇ ಅಲ್ಲ, ಆಟವಾಡದೇ ಬೆಳೆದ ವ್ಯಕ್ತಿಗಳು ತಮ್ಮೊಳಗಿನ ಮಗುವನ್ನು ಶಾಶ್ವತವಾಗಿ ಕಳೆದುಕೊಂಡಿರುತ್ತಾರೆ. ತಮ್ಮೊಳಗಿನ ಮಗುತನಕ್ಕೆ ಅಪರಿಚಿತರಾಗಿರುತ್ತಾರೆ. ನಾನು ನನ್ನ ಮನೆಯನ್ನು ಬೊಂಬೆಮನೆಯ ಹಾಗೆ ಕಟ್ಟಿದ್ದೇನೆ. ಬೆಳಗಿನಿಂದ ಸಂಜೆಯವರೆಗೆ ಆಡುತ್ತೇನೆ."

ಇಂಥ ಮಗುತನವನ್ನು ಉಳಿಸಿಕೊಳ್ಳಲೆಂದೇ ನೆರೂಡ ತನ್ನ ಅಭಿರುಚಿ, ಅವಶ್ಯಕತೆಗೆ ತಕ್ಕಂತೆ ಮೂರು ಮನೆಗಳನ್ನು ಸೆಂಟಿಯಾಗೊ, ವಾಲ್ಪರೈಸೊ ಮತ್ತು ಇಸ್ಲಾ ನೆಗ್ರಾದಲ್ಲಿ ನಿರ್ಮಿಸಬೇಕಾಯಿತು. ವಿಶ್ವದ ಎಲ್ಲ ಭಾಗಗಳಿಂದ ಚೂರುಗಳ ಹೆಕ್ಕಿತಂದು, ಸೇರಿಸಿ ಕಟ್ಟಿದ ಅವು ಅದ್ಭುತ ಮ್ಯೂಸಿಯಂಗಳೆನ್ನಲು ತಕ್ಕುದಾಗಿವೆ.

ಲಾ ಸೆಬಾಸ್ಟಿಯಾನಾ

"ಸೆಂಟಿಯಾಗೊದ ದಣಿವು ನನ್ನರಿವಿಗೆ ಬರುತ್ತಿದೆ. ಶಾಂತಯುತವಾಗಿ ಕೂತು ಬರೆಯುವ ಜಾಗ ವಾಲ್ಪರೈಸೊದಲ್ಲಿ ಬೇಕಾಗಿದೆ. ಅದು ಅತಿ ಎತ್ತರದ ಸ್ಥಳದಲ್ಲಿಯೂ ಇರಬಾರದು, ಹಾಗೆಂದು ತುಂಬ ತಗ್ಗಿನಲ್ಲೂ ಇರಬಾರದು. ಪ್ರತ್ಯೇಕವಾಗಿರಬೇಕು, ಆದರೆ ತೀರ ಒಂಟಿಮನೆಯಾಗಿರಬಾರದು. ಅಕ್ಕಪಕ್ಕದವರು ಕಾಣದಂತಿದ್ದರೆ, ಕೇಳಿಸದಂತಿದ್ದರೆ ಬಹಳ ಒಳ್ಳೆಯದು. ಸರಳ ಆದರೆ ಸುಖದಾಯಕವಾಗಿರುವ ಮನೆ. ತುಂಬ ದೊಡ್ಡದೂ ಅಲ್ಲದ, ತುಂಬ ಸಣ್ಣದೂ ಅಲ್ಲದ, ಗಟ್ಟಿಮುಟ್ಟಾಗಿರುವ ಮನೆ; ಎಲ್ಲದರಿಂದ ದೂರವಿರುವ ಆದರೆ ಸಾರ್ವಜನಿಕ ವಾಹನ ಸೌಲಭ್ಯ ಹತ್ತಿರದಲ್ಲೇ ಇರುವ; ಸ್ವತಂತ್ರವಾದ ಆದರೆ ಅಂಗಡಿಮುಂಗಟ್ಟುಗಳಿಗೆ ಹತ್ತಿರವಿರುವ ತುಂಬ ಕಡಿಮೆ ಬೆಲೆಯ ಮನೆ ನನಗೆ ಬೇಕು. ಅಂಥ ಒಂದು ಮನೆ ವಾಲ್ಪರೈಸೊದಲ್ಲಿ ಸಿಕ್ಕೀತೇನು?"

ರಾಜಧಾನಿ ಸೆಂಟಿಯಾಗೊದ ಗದ್ದಲದಿಂದ ದೂರವಿರಲು ಒಂದು ಮನೆ ನೋಡಬೇಕೆಂದು ನೆರೂಡ 1959ರಲ್ಲಿ ತನ್ನ ಆಪ್ತರಾದ ಸಾರಾ ಮತ್ತು ಮೇರಿ ಅವರಿಗೆ ಬರೆದ ಪತ್ರ ಇದು. ಅದರಂತೆ ಫ್ಲೋರಿಡಾ ಹಿಲ್‌ನಲ್ಲಿ ಅರೆಬರೆ ಕಟ್ಟಲ್ಪಟ್ಟಿದ್ದ ಒಂದು ಮನೆಯನ್ನು ನೋಡಲಾಯಿತು. ಸೆಬಾಸ್ಟಿಯನ್ ಕೊಲಾಡಾ ಎಂಬ ಸ್ಪಾನಿಶ್ ವಾಸ್ತುವಿನ್ಯಾಸಕಾರ, ಹಡಗಿನ ಕ್ಯಾಪ್ಟನ್ನನ ಮನೆಯದು. ಕಟ್ಟಿ ಪೂರೈಸುವ ಮುನ್ನ 1949ರಲ್ಲಿಯೇ ಆತ ತೀರಿಕೊಂಡಿದ್ದ. ನೆರೂಡ ಅದನ್ನು ನೋಡಹೋದಾಗ ಬೆಕ್ಕು, ಪಾರಿವಾಳಗಳ ನೆಲೆಯಾಗಿ ದುರ್ವಾಸನೆ ಬೀರುತ್ತ ಧೂಳುಮಯವಾಗಿತ್ತು. ಆದರೆ ದೂರದ ಬಂದರು, ಗುಡ್ಡದ ಇಳಿಜಾರು, ಮನೆಗಳು, ಮೆಟ್ಟಿಲುಗಳು, ಕಡಲು ಎಲ್ಲ ಅದರ ಕಿಟಕಿಗಳಿಂದ ಕಾಣುವಂತಿತ್ತು. ಹಡಗಿನ ಕ್ಯಾಬಿನ್ನಿನಂತಹ ಅದರ ವಿನ್ಯಾಸ ಹಾಗೂ ಆಯಕಟ್ಟಿನ ಸ್ಥಳ ಕವಿಗೆ ಇಷ್ಟವಾಯಿತು. ತುಮಗದು ದೊಡ್ಡದಾಯಿತೆನಿಸಿ ಕೊನೆಗೆ ಕೆಳಭಾಗವನ್ನು ಗೆಳೆಯ ಡಾ.

▶▶16



ಸಮುದ್ರ ತೀರದ ನೆರೂಡ ಮನೆ

ನೆರೂಡ ಮನೆಯ ಗಾರ್ಡನ್

...ಮೆರಿಕ ಮೊದಲು ಮಾಡಿ ವಿಶ್ವದ ಎಲ್ಲೆಡೆಯಲ್ಲಿ ಸನ್ಮಾನ ಸಮಾರಂಭಗಳು ನಡೆದಿವೆ. 1971ರಲ್ಲಿ ನೊಬೆಲ್ ಪ್ರಶಸ್ತಿ ...ೂಡ ಲಭಿಸಿತು. ಅವರು ಬದುಕಿನಲ್ಲಿ ಅನೇಕ ಏರುಪೇರುಗಳನ್ನು ಕಂಡವರು. ಆದರೆ ಅವರಂಥ ಸುಖಪುರುಷ ಜಗತ್ತಿನಲ್ಲಿ ಇನ್ನೊಬ್ಬ ಇಲ್ಲ ಎಂಬ ಮಾತು ...ವರ ಜೀವಿತಕಾಲದಲ್ಲಿ ಪ್ರಚಾರದಲ್ಲಿತ್ತು. ತನಗಾಗಿ ಏನನ್ನೂ ...ಯಸದೇ, ಸದಾ ಜನಹಿತ ಕಾರ್ಯದಲ್ಲೇ ಮಗ್ನನಾದವನು ಸುಖಪುರುಷನಲ್ಲದೆ ಇನ್ನೇನು ಆಗಲು ಸಾಧ್ಯ? ಇದುವೆ ಪಾಬ್ಲೊ ನೆರೂಡರ ಸುಖದ ರಹಸ್ಯವಾಗಿತ್ತು. ಪಾಬ್ಲೊ ನೆರೂಡ ಎಂದರೆ ಜನರ ನೆರೂಡ!

ನರಕದಿಂದ ಬಂದವ

ಲೋತಾ ಕಲ್ಲಿದ್ದಲು ಗಣಿಯ ಸುರಂಗದಿಂದ ...ೂರಬಂದು ಸುಡುವ ನೈಟ್ರೇಟ್ ಮೈದಾನದ ಮೇಲೆ ...ೂರ್ಯನಿಗೆ ಎದುರಾಗಿ ನಿಂತ ಗಣಿ ಕಾರ್ಮಿಕನೊಬ್ಬ ...ನ್ನ ಕಪ್ಪು ಬಳಿದ ದೇಹವನ್ನು ನೋಡಿಕೊಂಡರೂ ...ಚಿಕೊಳ್ಳದೆ ನೆರೂಡ ಬಳಿ ಬಂದ. ಆತ ನರಕದಿಂದ ...ದ್ದು ಬಂದವನಂತೆ ಕಾಣುತ್ತಿದ್ದ. ಭಯಂಕರ ಕೆಲಸದಿಂದಾಗಿ ...ಪ್ಪು ಮೆತ್ತಿದ ಆತನ ಮುಖ ಕಾಣುತ್ತಿರಲಿಲ್ಲ, ಧೂಳು ...ುಂಬಿದ ಆತನ ಕಣ್ಣುಗಳು ಹೊಳೆಯುತ್ತಿದ್ದವು. "ನನ್ನ ...ಹೋದರನೇ ನನಗೆ ನೀನು ಬಹಳ ದಿನದಿಂದ ಗೊತ್ತು" ...ಂದು ಆತ ನೆರೂಡಗೆ ಹೇಳಿದ.

ಜನರ ಇಂಥ ಮಾತುಗಳಲ್ಲಿ ನೆರೂಡ ಕಾವ್ಯದ ಗಂಗೋತ್ರಿ ಇದೆ. "ನೀನು ಒಬ್ಬೊಂಟಿಯಲ್ಲ; ಕವಿಯೊಬ್ಬನಿದ್ದಾನೆ, ನೀನು ದುಃಖದಲ್ಲಿದ್ದಾಗ ಆತನ ಚಿಂತನೆಗಳು ನಿನ್ನ ಜೊತೆಯಲ್ಲಿರುತ್ತವೆ" ಎಂಬುದನ್ನು ನೆರೂಡ ತಮ್ಮ ಸಾಹಿತ್ಯದ ಮೂಲಕ ತೋರಿಸಿಕೊಟ್ಟರು.

'ನೆರೂಡ' ಎಂದು ಅವರು ಕಾವ್ಯನಾಮ ಇಟ್ಟುಕೊಳ್ಳುವುದಕ್ಕೂ ಒಂದು ಹಿನ್ನೆಲೆಯಿದೆ. ಪ್ರಾಗ್‌ನ ಬಡಜನರ ಕಣ್ಮಣಿಯಾಗಿದ್ದ ಸಾಹಿತಿ ಜಾನ್ ನೆರೂಡ ಬರೆದ ಕಥೆ ರಿಕಾರ್ಡೊ ಎಲಿಯೆಸೆರ್ ನೆಫ್ತಾಲಿ ರೆಯೆಸ್ ಬಸೊವಾಲ್ಟೊ ಮೇಲೆ ಆಳವಾದ ಪರಿಣಾಮ ಬೀರಿತು. ಜೆಕೊಸ್ಲೊವಾಕಿಯಾದ ಹೊಸ ಬದುಕಿನ ಕೇಂದ್ರಬಿಂದುವಾಗಿದ್ದ ಜಾನ್ ನೆರೂಡ ಹಾಗೆ ತಾನು ಕೂಡ ತನ್ನ ದೇಶದ ಜನತೆಯ ಆಶೋತ್ತರಗಳ ಕೇಂದ್ರಬಿಂದುವಾಗಬೇಕೆಂದು ಬಯಸಿ 'ಪಾಬ್ಲೊ ನೆರೂಡ' ಆದರು.

ಚಿಲಿಯ ರಾಜಧಾನಿ ಸ್ಯಾಂಟಿಯಾಗೊದಲ್ಲಿ ಪಾಬ್ಲೊ ನೆರೂಡ 1973ನೇ ಸೆಪ್ಟೆಂಬರ್ 23ರಂದು ನಿಧನರಾದರು. ಅವರ ಅಂತಿಮ ಯಾತ್ರೆಯ ದಿನ 50 ಸಾವಿರ ಮಂದಿ ಸೇರಿ ಒಂದು ಸಾಲಿನ ಹಾಡು ಹಾಡಿದರು. ಆ ಹಾಡು ಮತ್ತು ಆ ಒಗ್ಗಟ್ಟು ಸರ್ವಾಧಿಕಾರಿಗಳ ಎದೆ ನಡುಗಿಸಿತು. ಸರ್ಕಾರ ಆ ಜನರನ್ನು ಎದುರು ಹಾಕಿಕೊಳ್ಳುವ ಧೈರ್ಯವಿಲ್ಲದೆ ಸುಮ್ಮನೆ ಕುಳಿತಿತು. ಸರ್ಕಾರ ಹೇರಿದ ಕರ್ಫ್ಯೂಗೆ ಜನರ ಒಗ್ಗಟ್ಟು ಉತ್ತರವಾಗಿತ್ತು.

ಜನರು ಅಂದು ಹಾಡಿದ ಒಂದು ಸಾಲನ್ನು ವಿಶ್ವದ ಸ್ವಾತಂತ್ರ್ಯ ಪ್ರಿಯರು ಇಂದಿಗೂ ಹಾಡುತ್ತಾರೆ.

"ಎಲ್ ಪ್ಯಾಬ್ಲೊ ವುನಿದೊ
ಹಮಾಸೆರಾ ವೆನ್ಸಿದೊ."
(ಒಗ್ಗಟ್ಟಾದ ಜನರನ್ನು ಸೋಲಿಸಲು ಸಾಧ್ಯವಿಲ್ಲ)


2016ರ ಸೆಪ್ಟೆಂಬರ್ 23ಕ್ಕೆ ನೆರೂಡ ನಿಧನರಾಗಿ 43 ವರ್ಷ ಕಳೆದರೂ ಆ ಸಾವಿಗೆ ಏನು ಕಾರಣ ಎಂಬುದು ನಿಗೂಢವಾಗೇ ಉಳಿದಿದೆ. ಸ್ಯಾಂಟಿಯಾಗೊದಲ್ಲಿ ಅವರು ಮರಣ ಹೊಂದಿದ ನಂತರ ಸ್ಯಾಂಟಿಯಾಗೊ ಮತ್ತು ವಲ್‌ಪೈರೈಸೊಗಳಲ್ಲಿನ ಅವರ ಮನೆಗಳನ್ನು ಲೂಟಿ ಮಾಡಲಾಯಿತು. ಕಲೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಅಮೂಲ್ಯ ಕೃತಿಗಳನ್ನು ಹಾಳುಗೆಡವಲಾಯಿತು.

ನೆರೂಡ ಸಾವಿಗೆ 12 ದಿನಗಳ ಮುಂಚೆ ಚಿಲಿ ಸೈನ್ಯದ ಮಹಾದಂಡನಾಯಕ ಅಗೊಸ್ತೊ ಫಿನೊಶೆ, ಅಮೆರಿಕದ ನೆರವಿನೊಂದಿಗೆ ರಾಷ್ಟ್ರಪತಿ ಭವನ 'ಲಾ ಮೊನೆದಾ' ಮೇಲೆ ಬಾಂಬುದಾಳಿ ಮಾಡಿ ಚಿಲಿಯ ಚುನಾಯಿತ ರಾಷ್ಟ್ರಪತಿ ಸಾಲ್ವಡೊರ್ ಅಲೆಂಡೆ ಅವರನ್ನು ಕೊಲೆ ಮಾಡಿದ, ಅವರ ಪಾಪ್ಯುಲರ್ ಯೂನಿಟಿ ಸರ್ಕಾರ ಉರುಳಿಸಿ ಸರ್ವಾಧಿಕಾರಿಯಾದ. 1973ನೇ ಸೆಪ್ಟೆಂಬರ್ 11 ರಂದು ಚಿಲಿಯಲ್ಲಿ ಪ್ರಾರಂಭವಾದ ಆತನ ಸರ್ವಾಧಿಕಾರ 17 ವರ್ಷಗಳ ವರೆಗೆ ಮುಂದುವರಿಯಿತು.

ಅಮೆರಿಕದ ಬಹುರಾಷ್ಟ್ರೀಯ ಬಂಡವಾಳಗಾರರ ಹಿಡಿತದಲ್ಲಿದ್ದ ಚಿಲಿಯ ತಾಮ್ರದ ಗಣಿಗಳನ್ನು ಅಲೆಂಡೆ ಅವರು ಯಾವುದೇ ಪರಿಹಾರ ಕೂಡ ಕೊಡದೆ ರಾಷ್ಟ್ರೀಕರಣಗೊಳಿಸಿದ್ದು ಐತಿಹಾಸಿಕವಾಗಿತ್ತು. ಜನತೆಯ ಹೋರಾಟಗಳ ಮಧ್ಯೆ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದ ಅಲೆಂಡೆ ಅವರಿಗೆ ಜನತೆಯ ಆಶೋತ್ತರಗಳಿಗೆ ಬಾಯಿಯಾಗುವುದು ಸಹಜವಾಗಿತ್ತು. ತಮ್ಮ ಜನರನ್ನು ಪ್ರೀತಿಸುವುದು ಎಂದರೆ ಸುಲಿಗೆಯನ್ನು ವಿರೋಧಿಸುವುದು ಎಂದೇ ಅರ್ಥ. ಅಂತೆಯೆ ತಮ್ಮ ಜನರನ್ನು ನಿಜವಾಗಿ ಪ್ರೀತಿಸುವ ಬಡ ರಾಷ್ಟ್ರಗಳ ಕವಿಗಳನ್ನು ಮತ್ತು ನಾಯಕರನ್ನು ಸಾಮ್ರಾಜ್ಯಶಾಹಿಗಳು ಎಂದೂ ಸಹಿಸುವುದಿಲ್ಲ. ಈ 'ಅಪರಾಧ'ಕ್ಕಾಗಿಯೇ ನೆರೂಡ ಮತ್ತು ಅಲೆಂಡೆ ಅವರು ಬಲಿಯಾಗಬೇಕಾಯಿತು.


ಬಡ ರಾಷ್ಟ್ರಗಳ ಜನರಿಗೆ ನೆರೂಡ ಕಾವ್ಯ ಅತ್ಯವಶ್ಯವಾಗಿದೆ. ಉಸಿರುಗಟ್ಟಿದ ವಾತಾವರಣದಲ್ಲಿ ಹೇಗೆ ಮಾತನಾಡಬಹುದು ಎಂಬುದನ್ನು ಅದು ಕಲಿಸಿಕೊಡುತ್ತದೆ. ಸುಲಿಗೆ ವ್ಯವಸ್ಥೆಯಲ್ಲಿ ಅದು ಗೆರಿಲ್ಲಾ ಯೋಧರ ಹಾಗೆ ರಾಕ್ಷಸೀ ಪ್ರವೃತ್ತಿಯ ಮೇಲೆ ಹಲ್ಲೆ ಮಾಡುತ್ತದೆ. ಅದು ಪೆಟ್ರೋಲ್ ಹಾಗೆ ತಂಪಾಗಿದೆ. ಆದರೆ ಸಹೃದಯರ ಹೃದಯದಲ್ಲಿ ಕೋಪಜ್ವಾಲೆಗಳನ್ನು ಸೃಷ್ಟಿಸುತ್ತದೆ. ಅದು ಪ್ರಶಾಂತವಾಗಿದೆ ಆದರೆ ಗಲಿಬಿಲಿಗೊಳಿಸುತ್ತದೆ. ಅದು ಕೋಮಲವಾಗಿದೆ. ಆದರೆ ಭಯಂಕರವಾದುದನ್ನು ಎದುರಿಸುವ ಸಾಮರ್ಥ್ಯ ನೀಡುತ್ತದೆ.

ನಿಜವಾದ ಕವಿಗೆ ಸದಾ ತುರ್ತುಪರಿಸ್ಥಿತಿ ಇರುತ್ತದೆ ಎಂಬುದನ್ನು ನೆರೂಡ ಸೂಚಿಸಿದರು. ಆತನಿಗೆ ಮಾಚಾಳಿಯಾಗುವ ಸ್ವಾತಂತ್ರ್ಯ ಇಲ್ಲ ಎಂಬುದನ್ನು ಮನದಟ್ಟು ಮಾಡಿದರು. ಹೀಗೆ ಅವರ ಪ್ರತಿಮೆ, ಪ್ರತೀಕ, ಸಂಕೇತಗಳು ಪ್ರಜ್ವಲಿಸಿದವು. ಜನರೊಡನೆ ಬಹಳಷ್ಟು ಮಾತನಾಡಿದವು.



"ಕವಿಗೆ ಎಂದೂ ಸ್ವಾತಂತ್ರ್ಯವಿಲ್ಲ, ಕಾವ್ಯಕ್ಕೆ ಎಂದೂ ಬಂಧನವಿಲ್ಲ" ಎಂಬುದನ್ನು ನೆರೂಡ ಜಗತ್ತಿಗೆ ತೋರಿಸಿಕೊಟ್ಟರು.

ಪ್ರೀತಿ ಮತ್ತು ಹೋರಾಟ ನೆರೂಡ ಕಾವ್ಯದ ಸಂದೇಶವಾಗಿದೆ.



■ ರಂಜಾನ್ ದರ್ಗಾ

ಮಾರ್ಕೆಟ್ ರೇಟೇ ಅಂಗದೆ



ಅಣಕ

• ಎಚ್.ಎಲ್.ಕೇಶವಮೂ

ಚುನಾವಣೆಗಳು ಹಣಾವಣೆಗಳಾಗಿವೆ. ಪ್ರಜ್ಞಾವಂತ ಮತದಾರರು ಇರುವರು ಎಂಬ ನಂಬುಗೆಯ ಪದವೀಧರ, ಶಿಕ್ಷಕರ ಕ್ಷೇತ್ರಗಳೂ ಇದಕ್ಕೆ ಹೊರತಾಗಿಲ್ಲ. ಇದು ಪ್ರಜಾಪ್ರಭುತ್ವಕ್ಕೇ ಬಹುದೊಡ್ಡ ಕಳಂಕ. ಹೀಗೇ ಮುಂದುವರೆಯಲು ಬಿಡಬಾರದು. ಎಲ್ಲೋ ಒಂದು ಕಡೆ ತಡೆ ಒಡ್ಡಲೇಬೇಕು ಇಲ್ಲದಿದ್ದಲ್ಲಿ ಪ್ರಜಾಪ್ರಭುತ್ವ ಎಂಬುದು ಅಣಕ ಆಗುತ್ತದೆ, ಹಣವಂತರ ಆಡಂಬಲ ಆಗುತ್ತದೆ ಎಂಬುದನ್ನೆಲ್ಲ ಅರಿತು ದಿಗಿಲಾಯಿತು. ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಬಂದಾಗ ಪೋಸ್ಟ್ ಕಾರ್ಡ್ ಚಳವಳಿ ಮಾಡಲು ನಿರ್ಧರಿಸಿದೆವು: ಈ ಚುನಾವಣೆ ನಾಲ್ಕು ಜಿಲ್ಲೆಗಳ ಮತದಾರರನ್ನು ಹೊಂದಿತ್ತು, ಪ್ರಾಯೋಗಿಕವಾಗಿ ಇದನ್ನು ನಮ್ಮ ಜಿಲ್ಲೆಗೆ ಸೀಮಿತಗೊಳಿಸಲು ನಿಶ್ಚಯಿಸಿದೆವು. ನಿಗಧಿತ ದಿವಸ 'ಮತಗಟ್ಟೆಗೆ ಬನ್ನಿ. ಯಾವುದೇ ಆಮಿಷಕ್ಕೆ ಒಳಗಾಗದೆ ಮತ ಚಲಾಯಿಸಿ' ಎಂದು ಬರೆದಿರುವ ಇನ್ನೂರು ಪೋಸ್ಟ್ ಕಾರ್ಡುಗಳನ್ನು ಮತದಾರರ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಿದೆವು. ಉಳಿದ ಮತದಾರರಿಗೆ ಮೇಲು ಮನೆಯ ಮಹತ್ವ, ಅದರ ಸದಸ್ಯರಿಗೆ ಇರಬೇಕಾದ ಅರ್ಹತೆ ಇವುಗಳನ್ನು ಕುರಿತಂತೆ ಕರಪತ್ರದ ಮೂಲಕ ತಿಳಿಸಿ ಕೊನೆಯಲ್ಲಿ ಇಂತಹ ಘನವಾದ ಉದ್ದೇಶ ಹೊಂದಿರುವ ಪರಿಷತ್ತಿಗೆ ಯಾವುದೇ ಆಮಿಷಕ್ಕೆ ಒಳಗಾಗದೆ ಮತ ನೀಡಬೇಕೆಂದು ವಿನಂತಿಸಿಕೊಂಡೆವು. ಪೋಸ್ಟ್‌ಕಾರ್ಡು, ಕರಪತ್ರ ಮಾಧ್ಯಮಗಳಲ್ಲಿ ಅದ್ದೂರಿಯ ಸುದ್ದಿ ಆಯಿತು. ಪ್ರಜಾಪ್ರಭುತ್ವದ ಉಳಿವಿಗೆ ಮಾಡಿದ್ದ ನಮ್ಮ ಈ ಅಳಿಲುಸೇವೆ ತೃಪ್ತಿ ತಂದಿತ್ತು, ಆದರೆ ಇದರ ಪರಿಣಾಮ ಏನಾಗಿತ್ತು ಎಂದರೆ ಜಿಲ್ಲೆಯಾದ್ಯಂತ ಸುದ್ದಿಯಾದ ಮಾರನೆಯ ದಿನ ನಗರದಲ್ಲಿ ಜನ ಹೆಚ್ಚಾದರು ಎಂದು ಒಂದು ಛತ್ರದಲ್ಲಿ ಮಾಡುತ್ತಿದ್ದ ಹೆಂಡ ಬಾಡೂಟದ ಸಮಾರಾಧನೆಯನ್ನು ಎರಡು ಕಡೆ ಏರ್ಪಡಿಸಿದ್ದರು!

ಇದನ್ನು ತಿಳಿದಾಗ ನೋವು, ಅದಕ್ಕಿಂತಲೂ ಮಿಗಿಲಾದ



ಕೋಪ ಉಕ್ಕೇರಿತು. ಈ ಸಮಾರಾಧನೆ ಕಾರ್ಯಗತಗೊಳಿಸಲು ನೇಮಕಗೊಂಡಿದ್ದವನೊಬ್ಬ ನನಗೆ ಪರಿಚಯವಿದ್ದ ಅವನನ್ನು ಕಂಡು 'ನಿಮಗೇನು ಮಾನಮರ್ಯಾದೆ ಇದೆಯೇನೋ' ಅಂತ ತರಾಟೆಗೆ ತೆಗೆದುಕೊಂಡೆ.

ನನ್ನ ರೇಗುವಿಕೆಯ ಕಾರಣ ಅವನಿಗೆ ತಿಳಿಯಲಿಲ್ಲವೆಂದು ಕಾಣುತ್ತೆ 'ಯಾಕ್ಸಾ, ನಾನೇನು ಅಂತಾದ್ದ ಮಾಡಬಾರದ್ದ ಮಾಡಿದೀನಾ' ಅಂದ.

'ನಿನ್ನೆ ದಿನ ಹಿಂಗೆ ಒಂದು ಕಡೆ ಸಾಲ್ದು ಅಂತ ಎರಡು ಕಡೆ ಹಿಂಗೆ ಹೆಂಡ ಕಂಡದ ಸಮಾರಾಧನೆ ಮಾಡಿದ್ದೀರಲ್ಲಾ...'

'ಓ ಅದ್ಕಾ.... ಯಾಕ್ಸಾ ನಿಮ್ಗೂ ಕರೀರಿ ಅಂದಿದ್ದೆ ಕರೀಸಿಲ್ವ ಸಾ?'

'ನಿನ್ ನಕ್ರಾಟ ಹಂಗಿರ್ಲಿ, ಹಿಂಗ್ ಮಾಡ್ತಾ ಬಿದ್ದಿದೀರಲ್ಲ ಇದು ನ್ಯಾಯವಾ...'

'ಅಲ್ಲ ಸಾ... ನ್ಯಾಯ ಅಲ್ಲ ಸಾ. ಹಿಂಗ್ ಮಾಡಾಕೆ ನಮ್ಮತಾವ ಏನು ದುಡ್ಡು ಕುಣೀತಿದ್ದತಾ ಸಾ?'

'ಮತ್ತಾಕೆ ಮಾಡಿದ್ರಿ?'

'ಮಾಡಿಸದೆ ಇದ್ರೆ ನಡ್ಯಾಕಿಲ್ಲ ಸಾ. ಓಟು ಕೊಡಪ್ಪ ಅಂದ್ರೆ ಏನು ವ್ಯವಸ್ಥೆ ಇಲ್ವಣ್ಣ ಅಂತಾವೆ. ಪಾರ್ಟಿ ಯಾವತ್ತು ಸಾ ಅಂತ ಕೇಳ್ತವೆ. ಇಂತಹ ಬ್ರಾಂಡೇ ಬೇಕು ಅಂತ ಡಿಮಾಂಡ್ ಇಡ್ತವೆ. ಅವೆಲ್ಲ ಇಲ್ಲರಪಾ ಅಂದ್ರೆ ನಮ್ ಓಟೂ ಇಲ್ಲ ಅಂತಾರೆ. ಏನ್ಮಾಡಾನ ಹೇಳಿ ಸಾ ನೀವೇಯ.'

ಹೆಂಡ ಕಂಡದ ಸಮಾರಾಧನೆ ಮಾಡಿಸಿದ ಅಂತ ಓಟು ಹಾಕ್ತಾರೋ ಅಥವ ಓಟು ಹಾಕ್ಲಿ ಅಂತ ಸಮಾರಾಧನೆ ಮಾಡ್ತಾರೋ ಒಂದೂ ಅರ್ಥ ಆಗಲಿಲ್ಲ, ಆದರೂ ನನಗೆ ಒಂದು ನಂಬಿಕೆ. ಬಹುಪಾಲು ಪದವೀಧರರು ಸಂಬಳದಾರರು. ಅಂತಹದ್ದರಲ್ಲಿ 'ತಮ್ಮ ಪವಿತ್ರವಾದ ಮತವನ್ನು ಇಂತಹ ಕ್ಷುಲ್ಲಕ ಆಮಿಷಕ್ಕೆ ಒಳಗಾಗಿ ನೀಡುತ್ತಾರೆ ಎಂದು ನಂಬಿಕೆಯೇ ಬರಲಿಲ್ಲ. ಇದನ್ನು ಪರೀಕ್ಷಿಸಬೇಕೆ ಕೊಂಡೆ. ಆಗತಾನೆ ಯಾವುದೋ ಟಿವಿಯವರು ಮತ ಕುಟುಕು ಕಾರ್ಯಾಚರಣೆ ಜನರ ಬಾಯಿಗೆ ಎಲೆ ಒದಗಿಸಿತ್ತು. ನಾನೂ ಅದೇರೀತಿ ಮಾಡಬೇ ಅಂದುಕೊಂಡೆ. ಓರ್ವ ಮತದಾರರನ್ನು ಕಂಡೆ.

'ನಿಮ್ ಓಟ್ ಇದೆಯಾ' ಕೇಳಿದೆ.

ಅವನು ನನ್ನನ್ನು ಮೇಲಿಂದ ಕೆಳಕ್ಕೆ ನೋಡಿದ. 'ಒ ಸಾವಿರ ಆಯ್ತದೆ' ಅಂದ!

ಪಕ್ಷ ಯಾವುದು? ಅಭ್ಯರ್ಥಿ ಯಾರು? ಇದೊಂ ಪ್ರಶ್ನಿಸಲಿಲ್ಲ. ಸೀದಾ ವ್ಯವಹಾರಕ್ಕೆ ಇಳಿದಿದ್ದ!

'ಏಕ್‌ದಂ ಸಾವಿರ ಅಂದ್ರೆ ಎಂಗಪ್ಪಾ?'

'ಮಾರ್ಕೆಟ್ ರೇಟೇ ಅಂಗದೆ.'

'ವಸಿ ಹೆಚ್ಚುಕಡಿಮೆ ಮಾಡ್ಕಳಿ.'

'ಯಾರ್ನಾರ ಕೇಳ್ನೋಡಿ. ರೇಟು ನಡೀತಿರೋದೆ ಅತ

'ಹಿಂಗಂದ್ರೆ ಹೆಂಗೆ... ಒಂದು ಸಾವಿರ ಅ ಹೆಚ್ಚಾಯ್ತಲ್ವಾ?'

'ಅಲ್ಲ ಕಣ್ರೋ ಅಲ್ಲಿ ಶಾಸಕರು ರಾಜ್ಯಸಭೆಗೆ ಓಟಾ ಐದು ಹತ್ತು ಕೋಟಿ ಕೇಳ್ತಾ ಬಿದ್ದವ್ರೆ. ನಾನು ಒ ಸಾವಿರ ಕೇಳಿದ್ರೆ ಅದ್ನೇ ಹೆಚ್ಚಾಯ್ತು ಅಂತಿದೀರಲ್ಲಾ... ಯ ಸೀಮೆ ನ್ಯಾಯ ನಿಮ್ದು....'



ನೆರೂಡ ಮನೆಯ ಒಳನೋಟ

15 ◀◀

ಫ್ರಾನ್ಸಿಸ್ಕೊ ವೆಲಾಸ್ಕೊನೊಂದಿಗೆ ಹಂಚಿಕೊಂಡರು. 1961ರಲ್ಲಿ ಆಪ್ತೇಷ್ಟರಿಗೆ ಸತ್ಕಾರಕೂಟ ಏರ್ಪಡಿಸಿ ನೆರೂಡ ಮತ್ತವನ ಪತ್ನಿ ಮಟಿಲ್ಡಾ ಉರುಪಿಯ ಆ ಮನೆ ತುಂಬಿದರು: ಹಳೆಯ ಮಾಲೀಕನ ನೆನಪಿಗೆ 'ಲಾ ಸೆಬಾಸ್ಟಿಯಾನಾ' ಎಂದು ಕರೆದರು. ಕವಿ ಆ ನೆನಪಿಗೆ 'ಲಾ ಸೆಬಾಸ್ಟಿಯಾನಾ' ಕವಿತೆ ಬರೆದ.

ಅದೀಗ ವಾಲ್ಪರೈಸೊದ ಪ್ರವಾಸಿಕೇಂದ್ರಗಳಲ್ಲೊಂದು. ದಾರಿ ತಿರುವಿನಲ್ಲೆ ನೆರೂಡನ ಬೃಹತ್ ಪೇಂಟಿಂಗ್ ಸ್ವಾಗತಿಸುತ್ತದೆ. ನೆರೂಡ ಫೌಂಡೇಷನ್ ಮನೆಯ ಉಸ್ತುವಾರಿ ವಹಿಸಿಕೊಂಡಿದೆ. ನಿಯಮಿತ ಜನರನ್ನು ತಂಡಗಳಲ್ಲಿ ಒಳಬಿಡುತ್ತಾರೆ. ಏನನ್ನೂ ಮುಟ್ಟಬಾರದು, ಫೋಟೋ ತೆಗೆಯಬಾರದು! ಕೈಲಿ ಆಡಿಯೋ ಹಿಡಿದು, ನೆರೂಡನ ದನಿಯಲ್ಲಿ ಸ್ಪಾನಿಶ್ ಮಾತು/ಕವಿತೆಗಳನ್ನು, ಅದರ ಇಂಗ್ಲಿಷ್ ಅನುವಾದವನ್ನು ಕೇಳುತ್ತ ಮನೆ ಮೆಟ್ಟಿಲು ಹತ್ತಬೇಕು.

ಲಾ ಸೆಬಾಸ್ಟಿಯಾನಾ ಐದು ಅಂತಸ್ತುಗಳ, ಸಾಕಷ್ಟು ಗಾಳಿ-ಬೆಳಕುಗಳಿರುವ ಬಹುವರ್ಣ ಕಲಾಕೃತಿಯಂತಹ ಮನೆ. ಅದರ ಕಿಟಕಿಗಳು ಇಡಿಯ ನಗರದರ್ಶನ ಮಾಡಿಸುವಷ್ಟು, ಕಡಲು-ಆಗಸ ಕಾಣಿಸುವಷ್ಟು ದೊಡ್ಡದಾಗಿವೆ. ಮೆಟ್ಟಿಲ ಹತ್ತುವಾಗ ಆಚೀಚೆ ನಗರ-ದೇಶಗಳ ನಕಾಶೆಗಳು; ದೀಪಕಂಬಗಳು, ಅಪರೂಪದ ತೈಲವರ್ಣ ಚಿತ್ರಗಳು, ಲೋಹ ಪಾತ್ರೆಗಳು, ಹೂಜಿಗಳು, ಬಣ್ಣದ ಗಾಜು ಮತ್ತಿತರ ವಸ್ತುಗಳು ಕಾಣಿಸುತ್ತವೆ.


ಮೊದಲ ಮಹಡಿಯಲ್ಲಿ ದೊಡ್ಡ ಹಜಾರ ಮತ್ತು ಪ್ರವೇಶ ಕೋಣೆಗಳಿವೆ. ಹಲಬಗೆಯ, ಹಲವರ್ಣದ ಕಪ್ಪೆಚಿಪ್ಪುಗಳನ್ನು ಗೋಡೆಗೆ ಹೊದಿಕೆಯಂತೆ ಅಂಟಿಸಲಾಗಿದೆ. ಎರಡನೆಯ ಮಹಡಿ ನೆರೂಡ ಇದ್ದಾಗ ಅತಿಥಿಗಳನ್ನು ಬರಮಾಡಿಕೊಳ್ಳುವ ಜಾಗವಾಗಿತ್ತು, ಮೂರನೆ ಮಹಡಿಯಲ್ಲಿ ಲಿವಿಂಗ್ ರೂಂ, ಡೈನಿಂಗ್ ರೂಂ, ಬಾರ್ ಇವೆ. ಕೋಣೆಯ ನಡುವಲ್ಲಿ ನೆರೂಡ ಸ್ವತಃ ವಿನ್ಯಾಸ ಮಾಡಿದ ಲಾಟೀನು ಬುರುಡೆ ಆಕಾರದ ಬೃಹತ್ ಫೈರ್‌ಪ್ಲೇಸ್ ಇದೆ. ನೂರಾರು ತರಹದ ಗಾಜಿನ ಲೋಟ, ಮಗ್, ಆಕರ್ಷಕ ಬಾಟಲಿಗಳು ಬಾರ್‌ನಲ್ಲಿವೆ. ನೆರೂಡ ಎಲ್ಲೇ ಹೋಗಲಿ, ಚಿಲಿಯ ವೈನ್ ಅವನ ಜೊತೆಯಿರುತ್ತಿತ್ತು, ಹಲವು ತೆರನ ವೈನ್‌ಗಳು ಮನೆಯ ಬಾರಿನಲ್ಲಿರುತ್ತಿದ್ದವು. ಚಿಲಿ ವೈನ್‌ಗಾಗಿ ಪ್ರಖ್ಯಾತ. ವೈನ್, ಮೊಟ್ಟೆಯ ಬಿಳಿ, ನಿಂಬೆಹಣ್ಣು ಹಾಗೂ ಸಕ್ಕರೆ ಸೇರಿಸಿ ಮಾಡಿದ ಚಿಲಿಯನ್ ಕಾಕ್‌ಟೇಲ್ ಅದ್ಭುತ ರುಚಿಯದಂತೆ. ಗೆಳೆಯರು ಬಂದಾಗ ಅವರೊಡನೆ ಗಂಟೆಗಟ್ಟಲೆ ಹರಟುತ್ತ ವೈನ್ ಕುಡಿಯುವುದು ಕವಿಗೆ ಬಲುಪ್ರಿಯವಾಗಿತ್ತು.

ನಾಲ್ಕನೆಯ ಮಹಡಿಯಲ್ಲಿ ಮಲಗುವ ಹಾಗೂ ಸ್ನಾನದ ಕೋಣೆ ಇವೆ. ಮಟಿಲ್ಡಾಳ ವಾರ್ಡ್‌ರೋಬಿನ ಬಾಗಿಲಲ್ಲಿ ಚೀನಾ ಸುಂದರಿಯರ ವರ್ಣಚಿತ್ರಗಳಿವೆ. ಎಲ್ಲ ಕೋಣೆ, ಹಜಾರಗಳಂತೆ ಇಲ್ಲೂ ಇಂಚಿಂಚಿಗೂ ಒಂದು ಆಸಕ್ತಿದಾಯಕ ವಸ್ತುವಿದೆ. ಮೇಲಿನ ಐದನೆಯ ಮಹಡಿ ನೆರೂಡನ ಓದಿ ಬರೆಯುವ, ಲೈಬ್ರರಿಯಿರುವ ಕೋಣೆ. ಅಲ್ಲಿ ಗ್ರಾಮೋಫೋನು, ಅದರ ಡಿಸ್ಕುಗಳು, ಎಲ್ಲಿಯದೊ ಹಳೆಯ ಸಂದೂಕ, ದಿಕ್ಸೂಚಿ, ಕೈಬರಹದ ಡೈರಿಗಳಿವೆ. ಅವನ 5,000 ಅಮೂಲ್ಯ ಪುಸ್ತಕಗಳು ಕಪ್ಪೆಚಿಪ್ಪುಗಳ ಬೃಹತ್ ಸಂಗ್ರಹದೊಂದಿಗೆ ಸೆಂಟಿಯಾಗೋ ವಿಶ್ವವಿದ್ಯಾಲಯ ಸೇರಿದ್ದರೂ ಕೆಲವು ಈ ಮನೆಯ ಲೈಬ್ರರಿಯಲ್ಲಿವೆ. ಅಲ್ಲಿಯೇ ನೆರೂಡನನ್ನು ಬಹುವಾಗಿ ಪ್ರಭಾವಿಸಿದ ಕವಿ ವಾಲ್ಟ್ ವಿಟ್ಮನ್‌ನ ಆಳೆತ್ತರದ ಫೋಟೋ ಇದೆ. ಈ ಫೋಟೋ ತಂದಾಗ ಮನೆಯ ಕೆಲಸದಾತ 'ಅದು ನಿಮ್ಮ ತಂದೆಯದೆ?' ಎಂದು ಕೇಳಿದನಂತೆ. ನೆರೂಡ 'ಹೌದು, ನನ್ನ ಕಾವ್ಯದ ತಂದೆ' ಎಂದನಂತೆ! ನೆರೂಡನ ಕುರ್ಚಿಯ ಆಚೀಚೆ ಹಡಗಿನ ನಾವಿಕನ ಕೋಣೆಯಲ್ಲಿರುವಂಥ ವಸ್ತುಗಳೇ ಇವೆ. ಅಲ್ಲಿ ಕುಳಿತರೆ ಗಾಜಿನ ಆಳೆತ್ತರದ ಕಿಟಕಿಯಿಂದ ಬಂದರು, ಕಡಲತೀರ ಪಕ್ಕದಲ್ಲೇ ಇರುವ ಹಾಗೆ ಕಾಣುತ್ತದೆ. ನೇವಿಗೇಷನ್ ರೂಮಿನಲ್ಲಿರುವ ಅನುಭವವಾಗುತ್ತದೆ.

ಒಟ್ಟಾರೆ ತುಂಬ ಕಕ್ಕುಲಾತಿಯಿಂದ ಮನೆಗಳ ರೂಪಿಸಿದ ಹೆಣ್ಣು ಮನಸ್ಸು ನೆರೂಡನದು. ತಾನು ಮರಣದ ಬಳಿಕ ಹದ್ದಾಗಿ ಮನೆಯೊಳ ಬರುತ್ತೇನೆ ಎಂದು ಕವಿ ಹೇಳುತ್ತಿದ್ದನಂತೆ. ಒಮ್ಮೆ ಕಿಟಕಿಯೆಲ್ಲ ಮುಚ್ಚಿದ್ದರೂ ಹೇಗೋ ಒಂದು ಹದ್ದು ಮನೆಯೊಳಬಂದಾಗ ನೆರೂಡನ ಗೆಳೆಯ ಡಾ. ವೆಲಾಸ್ಕೊ ಅಚ್ಚರಿಯಿಂದ ಕವಿಮಾತು ನೆನಪಿಸಿಕೊಂಡಿದ್ದ ವಾಲ್ಪರೈಸೊದ ವಸಂತದೊಂದಿಗೆ ಬಣ್ಣಬಣ್ಣದ ಲಾ ಸೆಬಾಸ್ಟಿಯಾನಾ ತಾನೂ ಅರಳಿದೆ. ಆ ಮನೆ ನೋಡಿ ಬರುವಾಗ ಕವಿಚೇತನವು ಹಕ್ಕಿಯಾಗಿ, ಹಾಡಾಗಿ ಅಲ್ಲೆಲ್ಲ ಆವರಿಸಿರುವುದು ನಮ್ಮರಿವಿಗೆ ಬರುತ್ತದೆ.

'ಕವಿತೆಗಿಂತ ಅಪಾಯಕಾರಿಯಾದ ಯಾವುದೂ ಇಲ್ಲಿಲ್ಲ...'

ವಾಲ್ಪರೈಸೊ ನಗರ ತನ್ನ ಕಳೆದ ಶತಮಾನದ ಗತವೈಭವವನ್ನು ನೆನಪಿಸಿಕೊಂಡು ಬಿಕ್ಕುತ್ತಿದ್ದ ದಿನಗಳಲ್ಲಿ ಅಲ್ಲಿಗೆ ಬಂದು ನೆಲೆಸಿದ ನೆರೂಡ ನಗರದ ಪ್ರಸಿದ್ಧಿಯನ್ನು ಜೀವಂತವಾಗಿಟ್ಟವರಲ್ಲಿ ಒಬ್ಬನಾಗಿದ್ದ. ಇಡಿಯ ದಕ್ಷಿಣ ಅಮೆರಿಕ ಹಾಗೂ ಚಿಲಿ ತೀವ್ರ ಸಂಘರ್ಷ ಎದುರಿಸುತ್ತಿದ್ದ ಕಾಲಕ್ಕೆ ನೆರೂಡ ಸಾಕ್ಷಿಯಾಗಿದ್ದ. ಚಿಲಿ ದೇಶವನ್ನು ಸರ್ವಾಧಿಕಾರಿ ಪಿನೊಶೆ ಆಳತೊಡಗಿದ ಮೇಲೆ ಮಾರ್ಕ್ಸಿಸ್ಟ್ ಚಿಲಿಯ ಅವನ ಕನಸು ಭಗ್ನವಾಗಿತ್ತು, ಅವನ ಮನೆಗಳು ಪೊಲೀಸರಿಂದ ದಾಳಿಗೊಳಗಾದವು. ಅವನು ವಿಶ್ವವಿದ್ಯಾಲಯಕ್ಕೆ ನೀಡಿದ ಪುಸ್ತಕ-ವಸ್ತುಗಳನ್ನು ಪಡೆಯದಿರುವಂತೆ ಉನ್ನತಮಟ್ಟದ ಒತ್ತಡಗಳು ಬಂದವು. ಅವು ಕೊನೆಗೆ ಏನಾದವ್ರೋ ಇವತ್ತಿಗೂ ಗೊತ್ತಿಲ್ಲ. ನೆರೂಡನೇ "ಅವು ಕಡಲಾಳ ಸೇರಿರಬಹುದು ಅಥವಾ ಕಾಳಸಂತೆಯ ದಾರಿ ಹಿಡಿದಿರಬಹುದು" ಎಂದು ನೊಂದುಕೊಂಡಿದ್ದ. ಇಸ್ಲಾ ನೆಗ್ರಾದ ಮನೆ ತಪಾಸಣೆಗೊಳಗಾದಾಗ, "ಎಲ್ಲಿ ಬೇಕಾದರೂ ಹುಡುಕಿ, ಕವಿತೆಗಿಂತ ಅಪಾಯಕಾರಿಯಾದ ಯಾವುದೂ ಇಲ್ಲಿ ಇಲ್ಲ.." ಎಂದು ಹೇಳಿದ್ದ. ಅವನು ತನ್ನ ದೇಶದಲ್ಲಿ ಅತಿ ಪ್ರಖ್ಯಾತನಾಗಿದ್ದ ಅತಿ ದ್ವೇಷದ ಬೆಂಕಿಗೆ ಸುಟ್ಟುಕೊಂಡವನೂ ಆಗಿದ್ದ. ಜಗತ್ತಿನಲ್ಲೆ ಅವನು ಪ್ರಸಿದ್ಧ ಕವಿಯಾಗಿದ್ದ, ಆದರೆ ಅತ್ಯಂತ ಕಡಿಮೆ ಓದಲ್ಪಟ್ಟ ಕವಿಯೂ ಆದ. ಯುದ್ಧ ಸಂಸ್ಕೃತಿ, ಪ್ರೇಮ, ಸಂಬಂಧ, ಇತಿಹಾಸ, ಜನ, ನೆಲ, ಸ್ಮರಣಗೀತೆ – ನಮ್ಮ ನೆರೂಡ ಏನು ಬರೆದ, ಏನು ಬರೆಯಲಿಲ್ಲ! ಆದರೆ ಅವನನ್ನು ಸಮಗ್ರವಾಗಿ ಓದಿದವರು, ಬರಹ-ಬದುಕು-ಆಶಯಂಗಳ ಒಟ್ಟಿಗೆ ಅರ್ಥ ಮಾಡಿಕೊಂಡವರು ಹೆಚ್ಚಿನವರಿಲ್ಲ.



ಗೆಳೆಯ ಅಲ್ಲಂಡೆಯ ಸಾವಿನಿಂದ ಜರ್ಝರಿತನಾ ನೆರೂಡನಿಗೆ ಪಿನೊಶೆ ಆಳ್ವಿಕೆಯಲ್ಲಿ ಬದುಕ ಇಚ್ಛೆಯಿರಲಿಕ್ಕಿಲ್ಲ, ಸರ್ವಾಧಿಕಾರಿಯು ಆಡಳಿತ ಹಿಡಿ ಕೇವಲ 12 ದಿನಗಳಲ್ಲಿ ತೀರಿಕೊಂಡ. ಕ್ಯಾನ್ಸರ್ ಉಲ್ಬ ಮರಣ ಸಂಭವಿಸಿತು ಎನ್ನಲಾದರೂ ಸಹ, ಕೊನೆಗೆ ಒಬ್ಬ ವೈದ್ಯ ಬಂದು ಹೊಟ್ಟೆಗೆ ಇಂಜೆಕ್ಷನ್ ಚುಚ್ಚಿ ಹೋ ಆರೇ ತಾಸುಗಳಲ್ಲಿ ಅವನು ಕೊನೆಯುಸಿರೆಳೆದ. ಎ ಅವನದು ಕೊಲೆ ಎಂಬ ಆರೋಪ ಕೇಳಿಬಂ ಮರಣೋತ್ತರ ಶವಪರೀಕ್ಷೆ ಆಯಿತು, ವರದಿ ಬಂ ಏನೋ ಕೈವಾಡ ಇದೆ ಎಂದರು; ಇಲ್ಲ ಎಂ ಪರಿಣಿತರೆಂದರು. ಕೊನೆಗೆ ಕವಿಯ ಅಂತ್ಯಸಂಸ ಸಾರ್ವಜನಿಕ ಸಮಾರಂಭವಾಗಲು ಪಿನೊಶೆ ಅನುವ ಕೊಡಲಿಲ್ಲ. ಆದರೂ ಸಾವಿರಾರು ಜನ ತಮ್ಮ ನೆ ಕವಿಯ ದರ್ಶನ ಪಡೆದರು. ನೆರೂಡನ ಹೆಸರು ಎದೆಯೊಳಗಿಟ್ಟುಕೊಂಡೇ ಬದುಕಿದರು.

"ನಾನು ನನ್ನ ಮನೆ ಇಸ್ಲಾ ನೆಗ್ರಾವನ್ನು ಜನ ಅರ್ಪಿಸುತ್ತಿದ್ದೇನೆ; ಒಂದಲ್ಲ ಒಂದು ದಿನ ಅ ಯೂನಿಯನ್ ಮೀಟಿಂಗುಗಳ ಸ್ಥಳವಾಗುತ್ತದೆ, ಗ ಕಾರ್ಮಿಕರು, ರೈತರು ವಿಶ್ರಾಂತಿ ಪಡೆಯುವ ಜಾಗವಾಗುತ ಹೊಟ್ಟೆಕಿಚ್ಚಿನ ಜನರ ಮೇಲೆ ನನ್ನ ಕಾವ್ಯವು ತೀರಿಸಿಕೊಳ ಪ್ರತೀಕಾರ ಅದು" ಎಂದು ಹೇಳಿದ ನೆರೂ ಬಹುಜನರಿಗಾಗಿ ಬರೆದ, ಬಾಳಿದ ಕವಿ. ಎಂದೇ ಅ ಕವಿತೆಗಳು ಜನರ ಎದೆಯ ಹಾಡುಗಳಾದವು. " ವಸ್ತುಗಳಿಗೂ ಕೊನೆಗೇನಾಗುವುದು? ಸಾವು ಮತ್ತು ಮರ ಎರಗುವುದು" ಎನ್ನುತ್ತಾನೆ ನೆರೂಡ. ಆದರೆ ಅ ಕವಿತೆಗಾಗಲೀ, ಮನೆಗಾಗಲೀ, ನೆನಪುಗಳಿಗಾಗಲೀ ಇ ಆ ಎರಡೂ ಬಂದೆರಗಿಲ್ಲ, ಚಿಲಿ ಎಂಬ ಪು ದೇಶದ ಲಾ ಸೆಬಾಸ್ಟಿಯಾನಾಗೆ ಪ್ರತಿ ಬಂದುಹೋಗುವ ಕಾವ್ಯಾಭಿಮಾನಿಗಳು, ಜಗ ಹಲವೆಂಟು ಭಾಷೆಗಳಿಗೆ ಇವತ್ತಿಗೂ ಮತ್ತೆ ಅನುವಾದಗೊಳ್ಳುತ್ತಲೇ ಇರುವ ಅವ ಕವಿತೆಗಳೇ ಇದಕ್ಕೆ ಸಾಕ್ಷಿಯಾಗಿವೆ.

■ ಡಾ.ಎಚ್. ಎಸ್. ಅನುಪಮ




ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಪಾತಾಳ ಮತ್ತು ಚೀನೀ ಯಮಲೋಕ





ಚೀನೀ ಪುರಾಣದಲ್ಲಿ ತಾವೋ ಮತ್ತು ಬೌದ್ಧ ವಿಚಾರಗಳು ತಮ್ಮ ಪ್ರಭಾವವನ್ನು ಗಾಢಗೊಳಿಸಿರುವುದು ಕಾಣುತ್ತದೆ. ಆದರಲ್ಲಿಯೂ ರೂಪಾಂತರದ ಪರಿಕಲ್ಪನೆ ಅಂದರೆ ಆಲ್‌ಕೆಮಿಸ್ಟ್ ವಿಚಾರಗಳು ತೀರಾ ಆಳವಾಗಿವೆ. ಚೀನಾದ ಇತಿಹಾಸದೊಳಗೆ ಮತ್ತು ದೀರ್ಘ ಜೀವನ ಹಾಗೂ ಅಮರತ್ವದ ವಿಚಾರಗಳಲ್ಲೂ ಅವು ಹಾಸುಹೊಕ್ಕಾಗಿವೆ. ನಿಜಕ್ಕೂ ಭಾರತದ ಬುಡಮೂಲದ ಪ್ರೇಮಸಿದ್ಧಾಂತದ ಮತ್ತು ಜನಪದದ ಪರಿಚಯವಿರುವ ಜೀವಪ್ರೇಮಿಗಳಿಗೆ ಮತ್ತು ಎಲ್ಲದರೊಂದಿಗೆ ಸೂಕ್ಷ್ಮ ಸಂವೇದನೆಯನ್ನು ಹೊಂದುವಂಥ ಯಾವುದೇ ಸಿದ್ಧಾಂತದ ವಿಚಾರದವರಿಗೆ ಚೀನಾದೇಶದ ತತ್ವ ಸಿದ್ಧಾಂತಗಳು ಗೂಢತೆಗೆ ಎಳೆಯುವುದು ಮಾತ್ರವಲ್ಲದೇ ಸಾಮಾನ್ಯವಾಗಿ ಪ್ರಿಯವೂ ಆಗುತ್ತದೆ. ಏಕೆಂದರೆ, ಭೂಮಿ ಯನ್ನೂ ಒಳಗೊಂಡು ಪ್ರತಿಯೊಂದನ್ನೂ ಜೀವಂತಿಕೆ ಯಿಂದಲೇ ನೋಡುವ ರೂಢಿ ನಮ್ಮಲ್ಲಿದ್ದಂತೆಯೇ ಅವರಲ್ಲಿ ಯೂ ಇದೆ. ಅವರಲ್ಲಿ ಜೀವ ಜಗತ್ತಿನ ಕುರಿತಾದಂತೆ ನೈಜಪ್ರೇಮ ಮತ್ತು ಸಮತೋಲನ, ತ್ಯಾಗ, ಪಾಪದ ವಿರುದ್ಧ ಇರುವ ಎಚ್ಚರಿಕೆ, ಒಳಿತಿಗೆ ಯಾವತ್ತೂ ನೈತಿಕ ಸ್ಥೈರ್ಯ ತುಂಬುವಿಕೆ, ಶೋಷಣೆಯ ವಿರುದ್ಧ ಏಳುವ ದಮನಿತರ ದನಿ- ಹೀಗೆ ಜೀವಪರವಾಗಿರುವ ಅಂಶಗಳನ್ನು ಕಾಣಬಹುದಾಗಿದೆ.

ಕರಾರುವಾಕ್ಕಾಗಿ ಅಂತಲ್ಲದಿದ್ದರೂ ಚೀನಾದ ಪುರಾಣಗಳು ಕ್ರಿಸ್ತಪೂರ್ವ 12ನೆಯ ಶತಮಾನದಲ್ಲಿ ಪ್ರಾರಂಭವಾಗಿದ್ದು, ಮೌಖಿಕ ಪರಂಪರೆಯ ಮೂಲಕ ಸಾವಿರಾರು ವರ್ಷಗಳಿಂದ ಬಂದಿದೆಯೆಂದು ಇತಿಹಾಸ ಕಾರರು ಹೇಳುತ್ತಾರೆ. ಚೀನಾದ ಪುರಾಣ ಸಂಶೋಧಕರು ಹೇಳುವಂತೆ ಚೀನಾದಲ್ಲಿ ದೇವರನ್ನೂ ಮನುಷ್ಯರನ್ನು ವಿವರಿಸು ವಂತೆಯೇ ವಿವರಿಸುತ್ತಾರೆ. ನಮ್ಮ ಜನಪದದಲ್ಲಿರುವಂತೆ. ದೇವರುಗಳು, ಪ್ರೇತಾತ್ಮಗಳು, ನರಿಗಳು, ಆತ್ಮಗಳು; ಇವೆಲ್ಲವೂ ಕೂಡ ಮನುಷ್ಯನ ಗುಣಗಳನ್ನು ಮತ್ತು ಭಾವನೆಗಳನ್ನು ಹೊಂದಿರುವಂತೆಯೇ ವಿವರಿಸುತ್ತಾರೆ. ಯಾವುದೇ ಬುಡಮೂಲ ಸಂಸ್ಕೃತಿಯಲ್ಲಿ ಇದೇನೂ ಹೊಸತಲ್ಲ. ಭಾರತೀಯ ಪುರಾಣದಲ್ಲಿ ಶರಭವೆಂಬ ಕಾಲ್ಪನಿಕ ಪ್ರಾಣಿಯೊಂದಿರುವಂತೆ ಚೀನಾದಲ್ಲಿ ಡ್ರಾಗನ್ ಇದೆ. ಹಾಗೆಯೇ ಮಳೆ, ಬೆಂಕಿ, ಆಕಾಶ, ಸಮುದ್ರಗಳಿಗೆ ನಮ್ಮಲ್ಲಿ ಅಧಿಪತಿಗಳಿರುವಂತೆ ಅವರಲ್ಲಿಯೂ ಕೂಡ ಪೌರಾಣಿಕ ದೇವಿಗಳು ಅಥವಾ ನಾಯಕರು ಇದ್ದಾರೆ. ಅವರು ಸಾಮಾನ್ಯವಾಗಿ ಪ್ರಕೃತಿ ವಿಕೋಪಗಳಿಗೆ ಮತ್ತು ಪ್ರಾಕೃತಿಕ ವಿಷಯಗಳಿಗೇ ಆಗಿರುವರು. ಫುಕ್ಸಿ, ಶೆನ್ನಾಂಗ್, ಹುವಾಂಗ್ದಿ ಮತ್ತು ಯು ಅವುಗಳಲ್ಲಿ ಕೆಲವು ಹೆಸರುಗಳು. ಸೂರ್ಯ, ಚಂದ್ರ, ಪ್ರವಾಹ ಹೀಗೆ ಅನೇಕ ವಿಷಯಗಳಿಗೆ ಅಧಿಪತಿಗಳಾಗಿರುವಂತಹ ಈ ಪ್ರತಿಮೆಗಳ ಮೂಲವಂತೂ ಬುಡಮೂಲ ಸಂಸ್ಕೃತಿಯ ಸರಳ ಪರಿಕಲ್ಪನೆಗಳಿಂದಾಗಿ ಯಾವುದೇ ಆಗಿದ್ದರೂ, ಇವುಗಳು ಕಮ್ಯೂನಿಸಂ, ತಾವೋ ಮತ್ತು ಬೌದ್ಧ ಸಿದ್ಧಾಂತಗಳ ಮತ್ತು ಧಾರ್ಮಿಕ ವಿಚಾರಗಳಿಂದ ಗಾಢಪ್ರಭಾವಕ್ಕೆ ಒಳಗಾಗಿರುವುದು ಮಾತ್ರವಲ್ಲ ಸ್ವರೂಪ ಮತ್ತು ಅಭಿವ್ಯಕ್ತಿಗಳಲ್ಲೂ ಮಾರ್ಪಾಟುಗಳನ್ನು ಹೊಂದಿವೆ.

ವೈದಿಕರು ಬ್ರಾಹ್ಮಣರನ್ನು ಕೊಂದರೆ ಅಥವಾ ತೊಂದರೆ ಕೊಟ್ಟರೆ ನರಕ ಪ್ರಾಪ್ತಿಯಾಗುವುದು ಎಂದು ಹೇಗೆ ಹುಟ್ಟಿಸಿದರೋ ಅದೇ ರೀತಿಯಲ್ಲಿ ರಾಜರ ಕ್ರೂರ ಶಿಕ್ಷೆಯ ಆಧಾರವಾಗಿ ನರಕದ ಪರಿಕಲ್ಪನೆಯು ಚೀನಾದಲ್ಲಿ ಹುಟ್ಟಿತು. ಹಾಗೆಯೇ ಬೌದ್ಧ ಸಂನ್ಯಾಸಿಗಳನ್ನು ತೊಂದರೆಗೊಳಪಡಿಸಿದರೆ ನರಕ ಪ್ರಾಪ್ತಿಯಾಗುತ್ತದೆ ಎಂದೂ ನಂತರದ ದಿನಗಳಲ್ಲಿ ಬೌದ್ಧ ಪ್ರಭಾವ ಗಾಢವಾದ ಮೇಲೆ ಸೇರಿಸಲಾಯಿತು.

ದಿಯು ಎಂಬ ಯಮಲೋಕ

ಚೀನಾ ಪುರಾಣಗಳಲ್ಲಿ ನರಕ ಎಂದರೆ ದಿಯು ಎಂದು ಅವು ನಮ್ಮ ಉಲ್ಲೇಖದ ಮೂಲಕ ಗುರುತಿಸಬಹುದಾದರೂ, ಅವರ ಭಾಷೆಯಲ್ಲಿ ಅದರರ್ಥ ಭೂಮಿಯ ಸೆರೆಮನೆ (ಭೂ ಸೆರೆ) ಎನ್ನಬಹುದು. 'ದಿಯು'ನಲ್ಲಿ ಜೀವಾತ್ಮಗಳ ಕರ್ಮಾನುಸಾರ ಶಿಕ್ಷೆ ಕೊಟ್ಟು ಅವರನ್ನು ಶುದ್ಧೀಕರಿಸಿ ಮತ್ತೆ ಪುನರ್ಜನ್ಮಕ್ಕೆ ಅಣಿಮಾಡುವುದು. ನಮ್ಮ ಭಾರತೀಯ ಪರಿಕಲ್ಪನೆಯ ರೀತಿಯಲ್ಲಿ ಶಾಶ್ವತ ನರಕವೇನೂ ಇರುವುದಿಲ್ಲ, ಅವರ ಪ್ರಕಾರ ಇದು ಭೂಗರ್ಭದಾಳದಲ್ಲಿ ಇರುವುದು. ನಮ್ಮಲ್ಲಿ ಪಾತಾಳ ಅಂದಹಾಗೆ. ನರಕವೆನ್ನುವುದು ಭೂಗರ್ಭದಾಳದಲ್ಲಿ ಇದೆ ಎಂಬ ಪರಿಕಲ್ಪನೆ ಇರುವುದ ರಿಂದಲೇ ಅದನ್ನು ಭೂ ಸೆರೆ ಎಂದು ಕರೆಯುವುದು. ಭಾರತೀಯರಲ್ಲೂ ನರಕ ಎಂಬುದಕ್ಕೆ ಪಾತಾಳ ಎಂಬುದಾಗಿ ಎಷ್ಟೋ ಉಲ್ಲೇಖಗಳಿವೆ. ಆದರೆ ಪಾತಾಳವು ಯಾವಾಗಲೂ ನರಕ ಎಂಬುದಾಗಿಯೇ ಗುರುತಿಸದೇ ಕತ್ತಲಿನ ಭೂಮಿಯ ಆಳದಲ್ಲಿ ಇರುವ ಲೋಕ ಎಂದೂ ಸಾಕಷ್ಟು ಕಡೆ ಗುರುತಿಸಲ್ಪಟ್ಟಿದೆ. ಬಲಿ ಚಕ್ರವರ್ತಿಯನ್ನು ಪಾತಾಳಕ್ಕೆ ತುಳಿಯಲ್ಪಟ್ಟಿತು ಎಂದು ಹೇಳುವಾಗ, ಅವನು ಮತ್ತೆ ಬಂದು ತನ್ನ ಅಧಿಕಾರವನ್ನು ಪಡೆಸಿಕೊಳ್ಳಲಾರದಂತಹ ಕತ್ತಲು ಲೋಕಕ್ಕೆ ತಳ್ಳಲ್ಪಟ್ಟನು ಎಂದಾಗುತ್ತಿತ್ತೇ ಹೊರತು, ಅಲ್ಲಿನ ಪಾತಾಳ ನರಕ ಎಂದೇನಲ್ಲ, ಅಂತಹ ಕತ್ತಲ ಲೋಕದಿಂದಲೂ ಬಲಿಯು ಹಿಂದಕ್ಕೆ ಬಂದು ತನ್ನ ಹಳ್ಳಿಯ ನೆಲವನ್ನು, ತಾನು ಪಾಲಿಸುತ್ತಿದ್ದ ಪ್ರಜೆಗಳನ್ನು ನೋಡಿಕೊಂಡು ಹೋಗಲು ಬರುತ್ತಿದ್ದ ಎಂಬುದರ ಕಲ್ಪನೆ ಕೇರಳಿಗರ ಜಾನಪದ ಮತ್ತು ಧಾರ್ಮಿಕ ನಂಬುಗೆ ಮತ್ತು ಆಚರಣೆಯಲ್ಲಿದೆ. ಓಣಂ ಹಬ್ಬವು ಬಲಿಯು ಕತ್ತಲೆಯ ಲೋಕದಿಂದ ಹಿಂದಕ್ಕೆ ಬರುವ ಸಂಕೇತವೇ ಆಗಿರುತ್ತದೆ.

ಪಾತಾಳಗಳು

ಪಾತಾಳದಲ್ಲೂ ಏಳು ಬಗೆಗಳನ್ನು ಗುರುತಿಸಲಾಗುತ್ತದೆ. ಅವೆಂದರೆ, ಅತಲ, ವಿತಲ, ಸುತಲ, ರಸಾತಲ, ತಲಾತಲ, ಮಹಾತಲ, ಪಾತಾಲ. ಪಾತಾಳಗಳ ಎಲ್ಲಾ ಹೆಸರುಗಳನ್ನು ಗಮನಿಸಿದರೆ ಅವು ಆಳಕ್ಕೆ ಮತ್ತು ಆಳದಲ್ಲಿ ಎಲ್ಲಿಯೋ ಇರಬಹುದಾದ ತಳಕ್ಕೇ ಹೇಳುವುದು ಎಂದು ತಿಳಿಯಬಹುದು. ಅತಲ ಎಂದರೆ ತಲವೇ ಇಲ್ಲದ್ದು, ಅಂದರೆ ಅತಲದಲ್ಲಿ ಬೀಳುವುದು ಎಂದರೆ ಅದು ತಳವನ್ನೇ ಮುಟ್ಟುವುದಿಲ್ಲ, ಶಾಶ್ವತವಾಗಿ ಬೀಳುತ್ತಲೇ ಇರುವುದು. ವಿತಲ ಎಂದರೆ ಅಲ್ಲಿ ಆಳವಿದೆ ಆದರೆ ಅದು ಕೆಟ್ಟದಾಗಿದೆ. ಸುತಲವೆಂಬ ಪಾತಾಳವು ತಳವುಳ್ಳದಾಗಿದ್ದು ಅದರಲ್ಲಿ ಜೀವನ ನಡೆಯುತ್ತದೆ. ಅದರಲ್ಲಿ ಭೂಮಿಯ ಮೇಲೆ ವರ್ಜ್ಯವೋ ಅಥವಾ ಭೂಲೋಕದ ಜೀವನವೇ ತಿಳಿಯದಂತವರೋ ಇರಬಹುದಾಗಿರುವಂತದ್ದು. ನಾಗಲೋಕ ಅಥವಾ ಭೈರವ ಲೋಕಗಳು ಸುತಲದಲ್ಲಿರುವವು. ಇದು ಕೆಟ್ಟದ್ದೋ ಅಥವಾ ಕೆಡುಕಿನದೋ ಏನಲ್ಲ, ಆದರೆ ಮಾನ್ಯತೆ ಇಲ್ಲದ್ದು, ಅಥವಾ ಅನಾಗರಿಕವಾದಂತದ್ದು. ರಸಾತಲವು ಭೂಮಿಯ ಆಳಕ್ಕೆ ಹೋದಮೇಲೆ ದ್ರವ್ಯ ರೂಪದ್ದು ದೊರಕುವುದು ಎಂಬ ಅರಿವಿನಿಂದ ಹುಟ್ಟಿರುವ ಲೋಕ. ಅದು ಜ್ವಾಲಾಮುಖಿಯ ಲಾವಾವೇ ಆಗಿರಬಹುದು, ಕ್ಷಾರ ರೂಪದ ಲವಣ ಮಿಶ್ರಿತ ರಸವಿರಬಹುದು, ನೀರೇ ಮೊದಲಾದ ದ್ರವ್ಯವಂತೂ ಆ ತಳಕ್ಕೆ ಹೋದಾಗ ಸಿಗುವುದು. ಇನ್ನು ತಲಾತಲವೆಂದರೆ ಆಳದಲ್ಲಿ ಆಳ ಎಂಬರ್ಥದಲ್ಲಿ ಜೋಡಿ ಪದವಾಗಿ ಉಪಯೋಗಿಸಲ್ಪಡುತ್ತದೆ. ಮಹಾತಲ ಎಂದರೆ ಹೆಸರೇ ಹೇಳುವಂತೆ ಗ್ರಹಿಸಲಾಗದಷ್ಟು ಆಳದಲ್ಲಿರುವ ತಳ. ಹೀಗೆ ಭೂಮಿಯು ಚಪ್ಪಟೆಯಾಗಿತ್ತು ಎಂದು ತಿಳಿದಿದ್ದ ಸಂದರ್ಭದಲ್ಲಿ ಹುಟ್ಟಿರುವಂತಹ ಪರಿಕಲ್ಪನೆಯೇ ಪಾತಾಳ. ಅವರ ಕಲ್ಪನೆಯ ಆಳವನ್ನು (ತಮಾಷೆಗೆ ಹೇಳುತ್ತಿದ್ದೇನೆ) ಭೂಮಿಯು ಗುಂಡಾಗಿದೆ ಎಂದು ಅರಿವುಂಟಾದ ಮೇಲೆ ಗ್ರಹಿಸಲು ಯತ್ನಿಸಿದರೆ, ಆಳದ ವ್ಯಾಪ್ತಿಯು ಭೂಮಿಯ ಮತ್ತೊಂದು ಭಾಗದ ಮೇಲ್ಮುಖದಿಂದ ಹೊರಗೆ ಬಂದುಬಿಡುತ್ತದೆ!

ಏನೇ ಆಗಲಿ, ಪಾತಾಳ ಅಂದರೆ ಭೂಮಿಯ ಆಳದ ಲೋಕದಲ್ಲಿ ಒಳ್ಳೆಯ ಚಿತ್ರಣಗಳನ್ನಾಗಲಿ, ರೌದ್ರ ಚಿತ್ರಣಗಳನ್ನಾಗಲಿ ಕಲ್ಪಿಸಿಕೊಂಡರೂ ಅವು ರಹಸ್ಯವಾಗಿಯೇ ಉಳಿದಿತ್ತು. ಹಾಗಾಗಿ ಭಾರತದಲ್ಲಿ ನೆಲದಲ್ಲಿ ಹರಿದಾಡುವ ಹಾವುಗಳು ಹುತ್ತಗಳನ್ನು ಸೇರುವ ಕಾರಣದಿಂದ ಪಾತಾಳದಲ್ಲಿ ನಾಗಲೋಕವನ್ನಿಟ್ಟರು. ರಾಜರುಗಳು ಭೂಗರ್ಭದಾಳದಲ್ಲಿ ರಹಸ್ಯವಾದ ಕೋಣೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದುದ್ದು ಅಥವಾ ನೆಲ ಮಾಳಿಗೆಯನ್ನು ಹೊಂದುತ್ತಿದ್ದದ್ದು, ಸುರಂಗಗಳನ್ನು ಕೊರೆದುಕೊಂಡು ರಹಸ್ಯದಾರಿಗಳನ್ನು ನಿರ್ಮಿಸಿಕೊಳ್ಳುತ್ತಿದ್ದ ಮಾಹಿತಿಗಳು ಜನಪದರಿಗೆ ದೊರೆತಂತೆಲ್ಲಾ ಅವರು ರಹಸ್ಯ ಕಾರ್ಯಾಚರಣೆಗಳ ಸ್ಥಳವನ್ನಾಗಿ ಪಾತಾಳವನ್ನೂ ಕಲ್ಪಿಸತೊಡಗಿದರು. ಇನ್ನು ಮಾಂತ್ರಿಕರು, ಕಾಪಾಲಿಕರು ರಹಸ್ಯವಾಗಿ ತಮ್ಮ ಆಚರಣೆ ಮತ್ತು ಸಾಧನೆಗಳನ್ನು ಮಾಡುತ್ತಾ ಇದ್ದು ಯಾವಾಗಲೋ ಹೊರಗಿನ ಲೋಕಕ್ಕೆ ಕಾಣುತ್ತಿದ್ದರಾದ್ದರಿಂದ ಅವರ ಕಾರ್ಯಾಚರಣೆಯ ಸ್ಥಳವನ್ನೂ ಭೂಗರ್ಭಕ್ಕೆ ಅಂದರೆ ಪಾತಾಳಕ್ಕೆ ಇಳಿಸಿದರು ನಮ್ಮ ಜನಪದರು. ಅವುಗಳ ಫಲವಾಗಿಯೇ ಪಾತಾಳ ಭೈರವಿ, ಬಾಲ ನಾಗಮ್ಮದಂತಹ ಜಾನಪದ ಕಥೆಗಳು ಹುಟ್ಟಿಕೊಂಡವು. ನಾವು ಸಣ್ಣವರಾಗಿದ್ದಾಗಿದ್ದ ನನ್ನಂಥ ಅನೇಕರ ಮನಸ್ಸಿನಲ್ಲಿ ವಿಠಲಾಚಾರ್ಯರ ಪಾತಾಳ ಭೈರವಿಯಂತಹ ಸಿನಿಮಾಗಳು ಅದ್ಭುತವಾದ ಮತ್ತು ಗುಪ್ತವಾದಂತಹ ಲೋಕಗಳನ್ನು ಹುಟ್ಟಿ ಹಾಕುತ್ತಿದ್ದವು. ಆ ಲೋಕದಲ್ಲಿ ಭೂಮಿಯ ಮೇಲೆ ಬದುಕಿ ಬಾಳುತ್ತಿರುವವರಿಗೆ ಅರ್ಥವೇ ಆಗದಷ್ಟು ವಿಸ್ಮಯ ಮತ್ತು ಅಯೋಮಯವಾಗಿರುವಂತಹ ತಂತ್ರಗಳು ಅಲ್ಲಿರುವವರನ್ನು ಕಾಯುತ್ತವೆ. ಅಷ್ಟು ಆಳದಲ್ಲಿ ರಹಸ್ಯ ಕಾರ್ಯಾಚರಣೆ ಮಾಡುವವರು ಶಕ್ತಿಯ ಆರಾಧಕರೇ ಆಗಿರುತ್ತಾರೆ. ಅವರು ಸಮಾಜಕ್ಕೆ ವಿಮುಖವಾಗಿರುವುದರಿಂದ ಅವರು ಒಳ್ಳೆಯವರಲ್ಲ ಎಂದೂ ಕಥೆಗಳು ಹೇಳುತ್ತವೆ. ಕೆಲವೊಮ್ಮೆ ಅವನ್ನು ಮನುಷ್ಯನ ಮನಸ್ಸಿನ ಆಳದ ಆಸೆಗಳ ಲೋಕವೆಂದೂ ಕೂಡ ಅವನ್ನು ರೂಪಕವಾಗಿ ತೆಗೆದುಕೊಳ್ಳಬಹುದು. ರೂಪಕವೋ, ನಿಜವಾದ್ದೋ ಒಟ್ಟಾರೆ ಅವನ್ನು ಬೇಧಿಸಲು ನಮಗೆ ದೈವಬಲವಿರಬೇಕು ಎಂಬುದು ಒಟ್ಟಾರೆ ತಾತ್ಪರ್ಯ ಆ ಕಥೆಗಳಲ್ಲಿರುತ್ತದೆ.

ನರಕ ಮತ್ತು ಪ್ರಭೆಗಳು

ಇರಲಿ, ಭಾರತದಲ್ಲಿ ವೈದಿಕರ ಪ್ರಕಾರ ಏಳು ನರಕಗಳು. ಅವುಗಳೆಂದರೆ ರೌರವ, ಮಹಾರೌರವ, ವಹ್ನಿ, ವೈತರಣಿ, ಕುಂಭಿ, ತಾಮಿಸ್ರ ಮತ್ತು ಅಂಧತಾಮಿಸ್ರ. ಇದೇ ರೀತಿಯಲ್ಲಿ ಜೈನರಲ್ಲೂ ಏಳು ನರಕಗಳು. ರತ್ನಪ್ರಭೆ, ಶರ್ಕರಾಪ್ರಭೆ, ವಾಲುಕಾಪ್ರಭೆ, ಪಂಕಪ್ರಭೆ, ಧೂಮಪ್ರಭೆ, ತಮಃಪ್ರಭೆ ಮತ್ತು ಮಹಾತಮಃಪ್ರಭೆ. ಜೈನರಲ್ಲಿ ಸ್ವರ್ಗದ ಹಂತಗಳು ಮತ್ತು ನರಕದ ಹಂತಗಳ ಅಧ್ಯಯನ ಬಹು ಕುತೂಹಲಕರವಾದದ್ದು.



ಸಂಪತ್ತಿನ ಅಧಿಪತಿ ಕುಬೇರನಿಂದ ರಚಿತವಾಗಿರುವಂತಹ ಸಮವಸರಣದಂತಹ ಸ್ವರ್ಗದಿಂದ ಹಿಡಿದು ವಿವಿಧ ಪ್ರಭೆಗಳ ಹೆಸರುಳ್ಳ ನರಕಗಳು ವಿವಿಧ ಆಧ್ಯಾತ್ಮಿಕ ಮತ್ತು ಸೂಕ್ಷ್ಮ ಮನಸ್ಸಿನ ಸ್ಥಿತಿಗಳನ್ನು ಹೇಳುತ್ತವೆ. ಅವನ್ನು ಮುಂದೆ ನೋಡೋಣ.

ಚೀನಾದಲ್ಲಿಯೂ ಹತ್ತು ತರಹದ ನರಕಗಳಿಗೆ ವಿವಿಧ ಅಧಿಪತಿಗಳಿರುವರು. ಕ್ವಿಂಗ್ವಾಂಗ್ ನರಕದ ಅಧಿಪತಿ ಶಿವ್ಹಾಂಗ್. ಹಾಗೆಯೇ ಚುಜಿಯಾಂಗ್, ಸೊಂಗುಲಿ, ವ್ಯುಗೂನ್, ಯಮ, ಬಿಯಾನ್‌ಚೆಂಗ್, ತೈಶಾನ್, ದುಶಿ, ಪಿಂಗ್ದೆಂಗ್, ಜುನ್ಲುನ್ ಎಂಬ ಉಳಿದ ನರಕಗಳಿಗೆ ಕ್ರಮವಾಗಿ, ಲಿ, ಯು, ಲು, ಬೋ, ಬಿ, ದಾಂಗ್, ಹ್ಯುಯಾಂಗ್, ಕ್ಸೆ ಎಂಬ ಅಧಿಪತಿಗಳು ಕ್ರಮವಾಗಿ ನೋಡಿಕೊಳ್ಳುತ್ತಿರುತ್ತಾರೆ.


ಹೀಗೆ ಚೀನೀ ಪುರಾಣದಲ್ಲಿ ಶಿವ್ಹಾಂಗ್ ಎಂದರೆ ನರಕದ ಹತ್ತು ರಾಜರು! ಅವರೋ ವಿವಿಧ ಹಂತಗಳಲ್ಲಿದ್ದು, ಮರಣ ಹೊಂದಿದವರಿಗೆ ಅವರವರ ಅಪರಾಧಗಳಿಗನುಗುಣವಾಗಿ ಭೌತಿಕ ಶಿಕ್ಷೆಯನ್ನು ವಿಧಿಸಲಾಗುವುದು. ನಮ್ಮ ಭಾರತದಲ್ಲಿರುವಂತೆ ಚೀನಾ ದೇಶದಲ್ಲಿಯೂ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಮತ್ತು ಜಾನಪದ ನಂಬುಗೆಗಳಿದ್ದು ಎಲ್ಲವೂ ಒಂದೇ ಮಾತನ್ನೇನೂ ಹೇಳುವುದಿಲ್ಲ, ಆದರೆ ಸರಿಸುಮಾರು ನರಕದ ಪರಿಕಲ್ಪನೆಯನ್ನು ಒಪ್ಪುತ್ತದೆ. ವಿವರಣೆಗಳಲ್ಲಿ ವಿವಿಧತೆಯನ್ನು ಹೊಂದಿರುತ್ತದೆ. ಭೂಮಿಯನ್ನೇ ಒಂದು ಕಾರಾಗೃಹವನ್ನಾಗಿ ನೋಡುವ ದಿಯು ಎಂಬ ಪರಿಕಲ್ಪನೆಯು ದಾವೋಯಿಸಂ ಮತ್ತು ಇತರ ಜನಪದ ನಂಬುಗೆಗಳಿಂದ ಹೊಮ್ಮಿರುವಂತಹದ್ದು.

ನರಕಕ್ಕೆ ಇರುವ ಹತ್ತು ಮಂದಿ ಅರಸರಲ್ಲಿ ಮೊಟ್ಟ ಮೊದಲನೆಯವನಾಗಿದ್ದವನು ಯಾನ್ಲೋ ವ್ಹಾಂಗ್ ಎಂಬ ಮೃತ್ಯು ದೇವತೆ. ಹಿಂದೂ ಪುರಾಣದ ಯಮನ ಹಾಗೇ ಇವನು. ಮೊದಮೊದಲು ಇವನು ಮೊದಲನೆಯ ಅರಸನಾಗಿದ್ದು ಪುರಾಣದ ಕಾಲಾನುಕ್ರಮಣದ ನಂತರ ಇವನ ಸ್ಥಾನವನ್ನು ಐದನೆಯ ಸ್ತರಕ್ಕೆ ತಳ್ಳಲಾಯಿತು. ಏಕೆಂದರೆ, ಇವನ ಗುಣಗಳ ಪ್ರಕಾರ ಇವನು ಕೊಂಚ ಉದಾರವಾದಿ ಎಂದು ತೋರುತ್ತದೆ. ಎರಡನೇ ಹಂತದ ನರಕದ ರಾಜ ಅಪ್ರಾಮಾಣಿಕರನ್ನೂ, ವಿಶ್ವಾಸದ್ರೋಹಿಗಳನ್ನೂ ಮತ್ತು ಅಜ್ಞಾನಿ ವೈದ್ಯರನ್ನೂ ಶಿಕ್ಷಿಸುವವನು. ಮೂರನೆಯ ನರಕಾಧಿಪತಿ ಅನ್ಯಾಯ ಮಾಡುವವರನ್ನು, ಮೋಸಗಾರರನ್ನು, ಕೊಲೆಪಾತಕರನ್ನು, ಬಾಯಾಳಿ ಆಕ್ರಮಣಕಾರರನ್ನು ಶಿಕ್ಷಿಸುವವನು. ನಾಲ್ಕನೆಯ ನರಕದ ರಾಜ ಶ್ರೀಮಂತ ಜಿಪುಣರನ್ನು, ಅಪ್ರಾಮಾಣಿಕ ವ್ಯಾಪಾರಿಗಳನ್ನು, ಔಷಧೋಪಚಾರ ಮಾಡಲು ಗೊತ್ತಿದ್ದರೂ ಚಿಕಿತ್ಸೆ ನೀಡದವರನ್ನು ಶಿಕ್ಷಿಸುತ್ತಾನೆ. ಐದನೆಯ ನರಕಾಧಿಪತಿಯು ಧಾರ್ಮಿಕ ದೃಷ್ಟಿಯ ಪಾಪಿಗಳನ್ನು, ಕೊಲೆಗಡುಕರನ್ನು, ಬೇಟೆಗಾರರನ್ನು, ಚೆಸ್ಗರನ್ನು, ಕಾಮುಕರನ್ನು ಶಿಕ್ಷಿಸಿದರೆ, ಆರನೆಯವನು ಕರ್ತವ್ಯದಿಂದ ವಿಮುಖನಾದವನನ್ನು ದಂಡಿಸುತ್ತಾನೆ. ಏಳನೆಯವನು ಸಮಾಧಿಗಳಿಗೆ ಅತಿಕ್ರಮ ಪ್ರವೇಶ ಮಾಡುವವನಿಗೆ ಮತ್ತು ಮಾನವ ಮಾಂಸವನ್ನು ಕೊಳ್ಳುವ ಮತ್ತು ಮಾರುವವರಿಗೆ ಶಿಕ್ಷಿಸುತ್ತಾನೆ. ಎಂಟನೆಯವನು ಮಕ್ಕಳ ಮೇಲೆ ಮಮಕಾರವಿಲ್ಲದವರನ್ನು ದಂಡಿಸುತ್ತಾನೆ. ಒಂಭತ್ತನೆಯ ನರಕಾಧಿಪತಿಯು ಉದ್ದೇಶಪೂರ್ವಕವಾಗಿ ಪರರ ಆಸ್ತಿ ಮತ್ತು ಮನೆಗಳಿಗೆ ದ್ವೇಷದಿಂದ ಬೆಂಕಿಯಿಡುವವನನ್ನು, ಗರ್ಭಪಾತ ಮಾಡುವವನನ್ನು, ಅಶ್ಲೀಲ ಮತ್ತು ಹೊಲಸು ಅಭಿರುಚಿಯ ಚಿತ್ರಕಾರರನ್ನು, ಬರಹಗಾರರನ್ನು ಮತ್ತು ಅವರನ್ನು ಅನುಸರಿಸುವವರನ್ನು ಶಿಕ್ಷಿಸುತ್ತಾನೆ. ಜೊತೆಗೆ ಆತ್ಮಹತ್ಯೆಯೂ ಸೇರಿದಂತೆ ಅಪಘಾತದಲ್ಲಿ ಸತ್ತವರ ಪಟ್ಟಿಯ ವಿಚಾರಣೆಯೂ ಇವನದೇ. ಇನ್ನು ಹತ್ತನೆಯ ನರಕಾಧಿಪತಿಯ ಕೆಲಸವೆಂದರೆ ಸತ್ತವರು ತಮ್ಮ ಜೀವನ ಚಕ್ರದ ಅಥವಾ ಕರ್ಮ ಚಕ್ರದ ಪ್ರಕಾರ ಹೊಸ ಅಸ್ತಿತ್ವವನ್ನು ಪಡೆದುಕೊಳ್ಳುವಂತೆ ನೋಡಿಕೊಳ್ಳುವುದು. ಅವರವರ ಕರ್ಮಾನುಸಾರ ದೇವತೆಗಳಾಗುವರೋ ಮತ್ತೆ ಭೂಮಿಯ ಮೇಲೆ ಮನುಷ್ಯರಾಗುವರೋ, ಕೆಟ್ಟ ಅಥವಾ ಒಳ್ಳೆಯ ಭೂತ(ಪ್ರೇತಾತ್ಮ)ಗಳಾಗುವರೋ, ಪ್ರಾಣಿಗಳಾಗುವರೋ ಅವನ ತೀರ್ಪಿನ ಅನುಗುಣವಾಗಿರುತ್ತದೆ. ಅವನೂ ನಿಷ್ಪಕ್ಷಪಾತಿ. ಅವನಿಷ್ಟ ಬಂದಂತೆ ಅವನೇನೂ ವರ್ತಿಸುವುದಿಲ್ಲ, ಈಗಾಗಲೇ ಇರುವ ನಿಯಮದ ಪ್ರಕಾರ ನಡೆಯಬೇಕಾಗಿರುವುದನ್ನು ನಡೆಯುವಂತೆ ನೋಡಿಕೊಳ್ಳುತ್ತಾನೆ. ಈ ಹತ್ತು ನರಕಾಧಿಪತಿಗಳನ್ನು ಚೀನಾದ ದೇವಸ್ಥಾನಗಳಾದ ಚೆಂಗ್ ಹುವ್ಹಾಂಗ್‌ನಲ್ಲಿ ಸಾಮಾನ್ಯವಾಗಿ ಪ್ರತಿನಿಧಿಸುವಂತೆ ಬಿತ್ತಿಸಿರುತ್ತಾರೆ.


ಭಾರತದಲ್ಲಿ ನರಕದ ಪರಿಕಲ್ಪನೆಗಳು ಧಾರ್ಮಿಕ ಮತ್ತು ಸಾಮಾಜಿಕ ಸ್ತರಗಳಲ್ಲಿ ಹುಟ್ಟಿ ಬಂದವಾದರೆ, ಚೈನಾದಲ್ಲಿ ಸಾಮ್ರಾಜ್ಯಗಳ ಮತ್ತು ರಾಜಮನೆತನಗಳ ಪ್ರಭಾವಕ್ಕೆ ಒಳಗಾಗುತ್ತವೆ. ಹದಿನೆಂಟು ಬಗೆಯ ಶಿಕ್ಷೆಗಳ ನರಕಗಳು ಪ್ರಾರಂಭವಾಗಿದ್ದು ತ್ಸಾಂಗ್ ಸಾಮ್ರಾಜ್ಯದೊಂದಿಗೆ.

ಅವುಗಳಲ್ಲಿ ಕೆಲವು, ಮೊನಚು ಚೂರಿಗಳ ಬೆಟ್ಟ, ಬಾಣಲಿಗಳಲ್ಲಿ ಮತ್ತು ಕುದಿವ ಎಣ್ಣೆಯಲ್ಲಿ ಉರಿಯುವ ಮತ್ತು ಬೇಯಿಸುವ ಸ್ಥಳ, ಜೀವಿಗಳನ್ನು ಗರಗಸದಿಂದ ಕುಯ್ಯುವ, ಸೀಳುವ, ಕುತ್ತುವ, ಜಜ್ಜುವ, ರುಬ್ಬುವ ಶಿಕ್ಷಾ ಕೇಂದ್ರಗಳು, ಬೆಂಕಿ ಹಚ್ಚುವ ಶಿಕ್ಷಾಕೇಂದ್ರ, ಬೆಂಕಿಯಲ್ಲಿರುವ ಲೋಹದ ಕಂಭವನ್ನು ಬೆತ್ತಲಾಗಿ ಹತ್ತಿಸುವ ಶಿಕ್ಷೆ, ಕುದಿಯುವ ದ್ರಾವಣಗಳಲ್ಲಿ ಜೀವಿಯನ್ನು ಹಾಕುವುದು, ನಾಲಿಗೆ ಕತ್ತರಿಸುವ, ಚರ್ಮ ಸುಲಿಯುವ, ಕಣ್ಣುಗುಡ್ಡೆಗಳನ್ನು ಕೀಳುವ, ಹೃದಯವನ್ನು ಕಿತ್ತು ತೆಗೆಯುವಂತಹ ಅಂಗಾಂಗ ಛೇದಗಳು, ಹಿಮಚ್ಛಾದಿತ ಪ್ರದೇಶದಲ್ಲಿ ಮರಗಟ್ಟಿಸುವುದು, ದೇಹಕ್ಕೆ ಕೊಕ್ಕೆ ಹಾಕಿ ತಲೆ ಕೆಳಕಾಗಿ ನೇತು ಹಾಕುವುದು, ದೇಹದಿಂದ ರಕ್ತವು ಜಿನುಗುತ್ತಾ ಬಂದು ಒಣಗುವವರೆಗೂ ಬದ್ಧಿರುವಂತೆ ಕೊಚ್ಚಿ ಹಾಕುವುದು, ಹಾವಿನಿಂದ ಕಚ್ಚಿಸುವ, ಚೇಳಿನಿಂದ ಕುಟುಕಿಸುವ, ಗೂಳಿ ಮತ್ತಿತರ ಕೊಂಬುಳ್ಳ ಪ್ರಾಣಿಗಳಿಂದ ತಿವಿಸುವಂತಹ, ಹುಲಿ ಸಿಂಹಗಳಿಂದ ಹರಿಸುವಂತಹ ಕ್ರೂರಪ್ರಾಣಿಗಳಿಗೆ ಬಲಿಯಾಗುವಂತಹ ಶಿಕ್ಷೆ. ಇವೆಲ್ಲದರ ಜೊತೆಗೆ ಅವಿಸಿ. ಅಂದರೆ ತಂದೆತಾಯಿಗಳನ್ನು, ಅಥವಾ ಅರಹಂತ (ಆಧ್ಯಾತ್ಮಿಕ ಸಾಧಕರು) ರನ್ನು ಕೊಲ್ಲುವಂತಹ, ಬುದ್ಧರನ್ನು ಘಾಸಿಗೊಳಿಸುವಂತಹ, ಬೌದ್ಧ ಸಂಘಕ್ಕೆ ಅಪಚಾರ ಮಾಡುವಂತಹ ಅಥವಾ ಅಸಂತಾರಿಕ ಕರ್ಮಗಳನ್ನು ಮಾಡುವಂತಹ ಭಯಾನಕ ಅಪರಾಧಿಗಳನ್ನು ಭೂಮಿಯೇ ಬಾಯ್ತೆರೆದು ನುಂಗುವಂತಹ ಶಿಕ್ಷೆ. ■





ಗಣಪತಿಯವರ ಪತ್ನಿಯನ್ನು ಮುಂದಿಟ್ಟುಕೊಂಡಿರುವ ಚೆಡ್ಡಿಗಳು ಪಂಡರ…



ಎಲ್ಲಾ ಅಸಹಜ ಸಾವಿನಲ್ಲಿ ಕಡ್ಡಾಯವಾಗಿ ಶವದ ಪೋಸ್ಟ್ ಮಾರ್ಟೆಮ್ ಮಾಡುತ್ತಾರೆ. ಹಾಗೆಯೇ ಕೆಲವೊಂದು ವಿವಾದಾತ್ಮಕ ವ್ಯಕ್ತಿಗಳ ಸಾವಿನ ನಂತರ ಅವರ ವೈಯಕ್ತಿಕ ಚರಿತ್ರೆಯನ್ನೂ ಪೋಸ್ಟ್ ಮಾರ್ಟೆಮ್ ಮಾಡಬೇಕಾದ ಅಹಿತ ಸನ್ನಿವೇಶ ಉಂಟಾಗುತ್ತದೆ. ಮಂಗಳೂರಿನ ಡಿವೈಎಸ್‌ಪಿ ಗಣಪತಿಯವರ ಸಾವಿಗೆ ಎಲ್ಲರ ಸಹಾನುಭೂತಿಯಿದೆ. ಆದರೆ ಅವರು ಒಂದು ರಾಜಕೀಯ ಪಕ್ಷದೊಂದಿಗೆ 2008 ರಿಂದಲೂ ಬಹಿರಂಗವಾಗಿ ಗುರುತಿಸಿಕೊಂಡಿದ್ದರಿಂದ ಹಾಗೂ ಅವರ ಸಾವಿನ ನಂತರ ಅದೇ ರಾಜಕೀಯ ಪಕ್ಷದವರು ಕುತ್ಸಿತ ವಿವಾದಗಳನ್ನು ಸೃಷ್ಟಿಸುತ್ತಿರುವುದರಿಂದಾಗಿ ಮಂಗಳೂರಿನಲ್ಲಿಯ ಗಣಪತಿಯವರ ಹಿಂದಿನ ಎಂಟು ವರ್ಷದ ನಡವಳಿಕೆಯ ಪೋಸ್ಟ್ ಮಾರ್ಟೆಮ್ ಮಾಡುವ ಅನಿವಾರ್ಯತೆ ಜನರಿಗೆ ಉಂಟಾಗಿದೆ.

ಗಣಪತಿಯವರ ತಂದೆ ಕೊಡಗಿನ ಕಾಂಗ್ರೆಸ್ ನೇತಾರರಾಗಿದ್ದರೂ ಗಣಪತಿಯವರು ಮಾತ್ರ ತಾನು ಆರ್‌ಎಸ್‌ಎಸ್ ಸದಸ್ಯ ಎಂದು ಹೆಮ್ಮೆಯಿಂದ ಬಹಿರಂಗವಾಗಿ ಹೇಳಿಕೊಳ್ಳುತ್ತಿದ್ದರು ಹಾಗೂ 2008 ರ ಚರ್ಚ್ ದಾಳಿಯಲ್ಲಿ ಅವರು ಹಿಂದೂತ್ವ ಕಿಡಿಗೇಡಿಗಳಿಗೆ ಬಹಿರಂಗವಾಗಿ ಕುಮ್ಮಕ್ಕು ನೀಡಿದ್ದರು. ಮೇಲಧಿಕಾರಿಗಳ ಪೂರ್ವಾನುಮತಿ ಇಲ್ಲದೇ ಒಂದು ಶಾಂತಿಸಭೆಯಲ್ಲಿ ಕ್ರೈಸ್ತ ಸನ್ಯಾಸಿನಿಯರ ಮೇಲೆ ಹಾಗೂ ಕ್ರೈಸ್ತ ಮಹಿಳೆ-ಮಕ್ಕಳ ಮೇಲೆ ಲಾಠಿ ಚಾರ್ಜ್ ಮಾಡಲು ಆದೇಶ ಕೊಟ್ಟು ಸ್ವತಃ ತಾವೇ ಮಹಿಳೆಯರ ಮೇಲೆ ಭೀಕರವಾಗಿ ಲಾಠಿ ಬೀಸಿದ್ದು ಅನೇಕ ಮಹಿಳೆಯರು ಗಾಯಗೊಂಡಿದ್ದರು. ಕೊನೆಗೆ ಈ ವಿಷಯ ಅಮೆರಿಕದ ಪತ್ರಿಕೆಗಳಲ್ಲೂ ಸುದ್ದಿಯಾಗಿ ಭಾರತದ ಮಾನ ಮೂರಾಬಟ್ಟೆಯಾಗಿತ್ತು. ಸ್ವತಃ ಅವರ ಮನೆಯ ಮಹಿಳೆಯರೇ ಈ ಹೇಡಿತನಕ್ಕೆ ಬೇಸರ ವ್ಯಕ್ತಪಡಿಸಿದ್ದರಂತೆ. ಕಾರಣ ಅವರ ಗಂಡು ಮಕ್ಕಳು ಕಲಿಯುವ ಶಾಲೆಯಲ್ಲಿ ಈ ವಿಷಯ ಗಂಭೀರ ಚರ್ಚೆಯಾಗಿ ಅವರ ಮಕ್ಕಳು ಮತ್ತು ಪತ್ನಿ ಸಮಾಜದಲ್ಲಿ ಭಾರಿ ಅವಮಾನಿತರಾಗಬೇಕಾಗಿ ಬಂದಿತ್ತು.

ಅವರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಒಂದಂಕಿ ಲಾಟರಿಗೆ ಇವರೇ ಗಾಡ್‌ಫಾದರ್ ಆಗಿದ್ದ ಆರೋಪ ಸಹ ಬಂದಿತ್ತು, ಕಳ್ಳರಿಂದ ವಶಪಡಿಸಿಕೊಂಡ ದೊಡ್ಡ ಮೊತ್ತದ ಹಣ ದಾಖಲೆಯಲ್ಲಿ ತೋರಿಸದೇ ಸಿಕ್ಕಿ ಬಿದ್ದು ಎರಡು ಬಾರಿ ಅಮಾನತಾಗಿದ್ದರು ಎಂಬ ಸುದ್ದಿ ಅತ್ಯಂತ ವಿಶ್ವಸನೀಯ 'ದಿ ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು, ಅವರ ಮೇಲೆ ಬೆಂಗಳೂರಿನಲ್ಲಿ ಒಂದು ನಕಲಿ ಎನ್‌ಕೌಂಟರ್ ಆರೋಪವೂ ಇತ್ತು. ಈ ಒಂದೇ ಒಂದು ನಕಲಿ ಎನ್‌ಕೌಂಟರ್ ಅವರನ್ನು ನಂತರ ಭಾರಿ ಅಪರಾಧಿಪ್ರಜ್ಞೆಗೆ ನೂಕಿ ಮಾನಸಿಕವಾಗಿ ಕಾಡುತ್ತಿತ್ತಂತೆ (ಇವರಿಗೆ ಹೋಲಿಸಿದರೆ ಜೈನ ಅಮಿತ್ ಶಹಾನೇ ವಾಸಿ, ಕಾರಣ ಅಮಿತ್ ಶಾ ಹತ್ತಾರು ನಕಲಿ ಎನ್‌ಕೌಂಟರ್ ಮಾಡಿಸಿದ್ದರೂ ಸ್ವಲ್ಪವೂ ಅಪರಾಧಿಪ್ರಜ್ಞೆ ಅವನನ್ನು ಕಾಡುತ್ತಿಲ್ಲ ನೋಡಿ!).

ಒಟ್ಟು ಐದು ಬಾರಿ ಗಣಪತಿ ಅಮಾನತು ಗೊಂಡಿದ್ದರಿಂದ ನಿಯಮದ ಪ್ರಕಾರ ಅವರನ್ನು ಯಾವುದೇ ಪ್ರತ್ಯೇಕ ಪೊಲೀಸ್ ಠಾಣೆಗೆ ಪೋಸ್ಟ್ ಮಾಡುವಂತಿರಲಿಲ್ಲ, ಅದಕ್ಕಾಗಿ ಅವರನ್ನು ಐಜಿ ಕಚೇರಿಯಲ್ಲಿಯೇ ಮುಂದುವರಿಸಿದ್ದು.

ಬಿಜೆಪಿ ಸರಕಾರವಿದ್ದಾಗ ಇವರು ತಮ್ಮ ಮೇಲಧಿಕಾರಿಗಳನ್ನು ಬೈಪಾಸ್ ಮಾಡಿ ನೇರವಾಗಿ ಬಿಜೆಪಿ ಮಂತ್ರಿ ವಿ.ಎಸ್.ಆಚಾರ್ಯ ಮತ್ತು ಕೃಷ್ಣ ಪಾಲೇಮಾರರಿಂದ ಆದೇಶ ಸ್ವೀಕರಿಸುತ್ತಿದ್ದರು. 2013 ರಲ್ಲಿ ಬಿಜೆಪಿ ಸೋತು ಕಾಂಗ್ರೆಸ್ ಸರಕಾರ ಸ್ಥಾಪಿತವಾದಾಗ ಇವರು ಬಹಿರಂಗವಾಗಿ ತಮ್ಮ ಬೇಸರ ವ್ಯಕ್ತ ಮಾಡಿ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು. ಸ್ವತಃ ಇವರ ತಮ್ಮ (ತಮ್ಮಯ್ಯ) ಇವರಿಗಿಂತ ಮುಂಚೆ ಡಿವೈಎಸ್‌ಪಿ ಆಗಿ ಪದೋನ್ನತಿ ಪಡೆದಾಗಲಂತೂ ಇವರು ಭಯಂಕರ ಖಿನ್ನತೆಗೆ ಒಳಗಾದರಂತೆ.

ಎಲ್ಲಕ್ಕಿಂತ ವಿಚಿತ್ರವೆಂದರೆ ಕೇವಲ ಎರಡೇ ಎರಡು ದಿನ ಮುಂಚೆ ಚಿಕ್ಕಮಗಳೂರಿನ ಡಿವೈಎಸ್‌ಪಿ ಕಲ್ಲಪ್ಪ ಹಂದಿಬಾಗ್ ಆತ್ಮಹತ್ಯೆ ಮಾಡಿಕೊಂಡಾಗ ಕ್ರಿಕೆಟ್ ಬೆಟ್ಟಿಂಗ್ ಜಾಲದ ಸಂಪರ್ಕ ಅವರಿಗಿತ್ತೆಂಬ ಆರೋಪಗಳು ಕೇಳಿ ಬಂದಿದ್ದವು. ಜತೆಗೆ ಚಿಕ್ಕಮಗಳೂರಿನ ಕ್ರಿಕೆಟ್ ಬೆಟ್ಟಿಂಗ್ ಜಾಲದ ರೂವಾರಿಗಳಾದ ಬಜರಂಗ ದಳದ ನವೀನ್ ಶೆಟ್ಟಿ ಮತ್ತು ಪ್ರವೀಣ ಖಾಂಡ್ಯಾ ಇಬ್ಬರೂ ಮಂಗಳೂರು ಮೂಲದವರಾದುದರಿಂದ ಈ ಇಬ್ಬರೂ ಮಂಗಳೂರಿನಲ್ಲಿಯೂ ತಮ್ಮ ಬೆಟ್ಟಿಂಗ್ ಜಾಲ ಹೊಂದಿದ್ದು ಅದರಲ್ಲಿಯೂ ಮಂಗಳೂರಿನ ಒಂದಿಬ್ಬರು ಪೊಲೀಸ್ ಅಧಿಕಾರಿಗಳು ಕೈ ಹೊಂದಿದ್ದಾರೆ ಎಂಬ ಆರೋಪಗಳು ಹರಿದಾಡಿದ್ದವು. ಹಾಗಾಗಿ ಹಂದಿಬಾಗ್ ಮರಣದ ಬಗ್ಗೆ ಸಿಐಡಿ ತನಿಖೆಗೆ ಸರಕಾರ ಆದೇಶಿಸಿದಾಗ ಮಂಗಳೂರಿನ ಕೆಲ ಪೊಲೀಸ್ ಅಧಿಕಾರಿಗಳೂ ಮಾನಸಿಕ ಒತ್ತಡಕ್ಕೆ ಸಿಲುಕಿದ್ದರು ಎಂಬ ಸುದ್ದಿ ಇತ್ತು, ಚಿಕ್ಕಮಗಳೂರಿನ ಬಜರಂಗಿಗಳ ಕರಾಳ ಕಪಿಮುಖದ ಬಗ್ಗೆ ತನಿಖೆಯಾದರೆ ಮಂಗಳೂರಿನ ಪೊಲೀಸರ ಹುಳುಕುಗಳೂ ಹೊರಬರಬಹುದೆಂಬ ಭಯ ಗಣಪತಿಯವರ ಖಿನ್ನತೆ ಹೆಚ್ಚಿಸಿತ್ತೇ? ಎಂಬ ಬಗ್ಗೆ ತನಿಖೆಯಾಗಲಿ.

ಬಿಜೆಪಿಯವರು ಕೇವಲ ಮುಂದುವರಿದ ಕೊಡವ ಜಾತಿಯ ಗಣಪತಿಯ ಆತ್ಮಹತ್ಯೆಯ ಬಗ್ಗೆ ಮಾತ್ರ ಸಿಬಿಐ ತನಿಖೆಗೆ ಒತ್ತಾಯಿಸುತ್ತಿದ್ದು ಹಿಂದುಳಿದ ಕುರುಬ ಜಾತಿಯ ಕಲ್ಲಪ್ಪ ಹಂದಿಬಾಗ್ ಇವರ ಆತ್ಮಹತ್ಯೆಯ ಬಗ್ಗೆಯೂ ಸಿಬಿಐ ತನಿಖೆಯಾಗಲಿ ಎಂದು ಯಾಕೆ ಗಲಾಟೆ ಮಾಡುತ್ತಿಲ್ಲ? ಮರಣದ ನಂತರವೂ ಆತ್ಮದ ಜಾತಿ ನೋಡುವುದು ಅಗತ್ಯವೇ? ಮಂಗಳೂರಿನಲ್ಲಿ ಚರ್ಚ್ ದಾಳಿಯ ಮುಖಂಡತ್ವ ವಹಿಸಿಕೊಂಡಿದ್ದವನು ಬಜರಂಗದಳದ ಮಹೇಂದ್ರಕುಮಾರ್. ಆದರೆ ನಂತರ ಅವನು ಬಜರಂಗದಳದಿಂದ ಹೊರದೂಡಿಸಿಕೊಂಡ ಮೇಲೆ ಸಂಘಪರಿವಾರದ ಕಟ್ಟಾ ವೈರಿಯಾಗಿ ಪರಿವರ್ತಿತನಾಗಿ ಸಂಘಿಗಳ ಎಲ್ಲಾ ಗುಟ್ಟನ್ನು ಮುಲಾಜಿಲ್ಲದೇ ಬಹಿರಂಗಗೊಳಿಸುತ್ತಿದ್ದಾನೆ. ಚರ್ಚ್ ದಾಳಿಯ ವೇಳೆ ಅವನು ಗಣಪತಿಗೆ ತುಂಬಾ ಆಪ್ತನಾಗಿದ್ದು ಇವರಿಬ್ಬರೂ ಜತೆಸೇರಿ ಚರ್ಚ್ ದಾಳಿಯ ಸ್ಕೆಚ್ ರೂಪಿಸಿದ್ದರು. ಹಾಗಾಗಿ ಈಗ ವೈರಿಯಾಗಿರುವ ಮಹೇಂದ್ರಕುಮಾರ್ ತನ್ನ ಗುಟ್ಟನ್ನೂ ಹೊರಗೆಡಹಬಹುದೆಂಬ ಹೆದರಿಕೆಯೂ ಗಣಪತಿಗಿತ್ತು.

ಪುರಾಣಕಾಲದಿಂದಲೂ ವೈದಿಕರು ಮಹಿಳೆಯರನ್ನೇ ಎದುರು ಇಟ್ಟುಕೊಂಡು ವೈರಿಗಳ ಮೇಲೆ ದಾಳಿ ಮಾಡಿದ್ದು. ನರಕಾಸುರನನ್ನು ಮೋಸದಿಂದ ಕೊಲ್ಲಲು ಸತ್ಯಭಾಮೆಯನ್ನು ಎದುರು ಇಟ್ಟುಕೊಂಡರು, ಮಹಿಷಾಸುರನನ್ನು ಕೊಲ್ಲಲು ದುರ್ಗೆಯನ್ನು ಎದುರು ಇಟ್ಟರು, ಭಸ್ಮಾಸುರನನ್ನು ಕೊಲ್ಲಲು ಮೋಹಿನಿಯನ್ನು ಎದುರು ಹಾಕಿದರು. ಈಗಲೂ ಆ ಅಭ್ಯಾಸ ಹೋಗಿಲ್ಲ, ಅದಕ್ಕಾಗಿ ಗಣಪತಿಯವರ ಪತ್ನಿಯನ್ನು ಎದುರು ಇಟ್ಟುಕೊಂಡು ಬಿಜೆಪಿಗರು ಸರಕಾರದ ಮೇಲೆ ದಾಳಿ ಮಾಡುತ್ತಿದ್ದಾರೆ. ಎಂತಹ ಷಂಡರು ಇವರು!

ಗಣಪತಿಯ ಪತ್ನಿಗೆ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಗ್ಯಾರಂಟಿಯಂತೆ. ಕಾರಣ ಅನುಪಮಾ ಶೆಣೈಗಿಂತ ಇವರಿಗೆ ಜನರ ಸಹಾನುಭೂತಿ ಹೆಚ್ಚು ಎಂಬುದು ಬಿಜೆಪಿ ಲೆಕ್ಕಾಚಾರ.

-ವೀರಪ್ಪ ದಿ.ಎನ್. ಮಡಿಕೇರಿ



ಸಕ್ಕರೆ, ಔಷಧ ಇತ್ಯಾದಿಗಳನ್ನು ತ್ಯಾಗ ಮಾಡದ ಸಂಘಿಗಳು ಆಷಾಢಭೂತಿಗಳು

"ಎಲ್ಲಾ ಭಾರತೀಯ ತಳಿಯ ಗೋಮೂತ್ರದಲ್ಲೂ ಚಿನ್ನವಿದೆ ಹಾಗೂ ಗೋವಿನ ಸೆಗಣಿಯಲ್ಲಿ ವಜ್ರವಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ" ಎಂದು ರಾಮಚಂದ್ರಾಪುರದ ರಾಘವಸ್ವಾಮಿ ಮೊನ್ನೆ ಪುತ್ತೂರಿನ ಗೋವು ಸಂತ ಸಮಾಗಮದಲ್ಲಿ ಅಪ್ಪಣೆ ಕೊಡಿಸಿದರು. ಅವರು ಸೆಗಣಿಯಲ್ಲಿ ವಜ್ರವಿದೆ ಎಂದು ಹೇಳಿದಾಗ ಅಲ್ಲಿ ನೆರೆದಿದ್ದ ಸಭಿಕರಲ್ಲಿ ವಜ್ರಕುಮಾರ್, ವಜ್ರದೇಹಿ, ವಜ್ರೇಶ್ವರಿ, ವಜ್ರನಾಥ ಮುಂತಾದ ಹೆಸರಿನವರು ತಮ್ಮ ಹೆಸರು ಎಲ್ಲಿ ಸೆಗಣಿಕುಮಾರ್, ಸೆಗಣಿದೇಹಿ, ಸೆಗಣಿನಾಥ ಎಂದು ಬದಲಾಗುತ್ತದೋ ಎಂದು ಆತಂಕಿತರಾದಂತಿತ್ತು.


ಹೆಚ್ಚಾಗಿ ಕಾವಿ ಸ್ವಾಮೀಜಿಗಳು ಹಾಗೂ ಹಿಂದೂತ್ವ ನೇತಾರರು ಏನಾದರೂ ಹಸಿ ಸುಳ್ಳು ಹೇಳಿದ ನಂತರ ಅದನ್ನು ಸಮರ್ಥಿಸಲು ಯಾವಾಗಲೂ ಹೇಳುವುದು - ಸಂಶೋಧಕರು ಹೇಳಿದ್ದಾರೆ, ಪ್ರಯೋಗದಿಂದ ಕಂಡುಬಂದಿದೆ, ಜರ್ಮನಿಯ ವಿಜ್ಞಾನಿಗಳು ಹೇಳಿದ್ದಾರೆ, ನಾಸಾ ಹೇಳಿದೆ, ಇಸ್ರೋ ಹೇಳಿದೆ, ಯುನೆಸ್ಕೋ ಹೇಳಿದೆ ಎಂಬುದಾಗಿ. ಆದರೆ ಯಾವುದೇ ಸ್ವಾಮೀಜಿ ಅಥವಾ ಧಾರ್ಮಿಕ ನೇತಾರ ಇಂತಹ ವಿಷಯಗಳಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ ಎಂದು ಯಾವತ್ತೂ ಭೋಂಗು ಬಿಟ್ಟಿಲ್ಲ, ಇದೇ ಮೊದಲ ಬಾರಿಗೆ ಒಬ್ಬ ವಿದ್ಯಾವಂತ ಸ್ವಾಮೀಜಿ ಸುಪ್ರೀಂ ಕೋರ್ಟನ್ನು ಇಂತಹ ಮೌಢ್ಯ ಹರಡುವ ತಮ್ಮ ಹೇಳಿಕೆಯಲ್ಲಿ ಎಳೆದು ತಂದಿದ್ದು! ಹಾಗಾದರೆ ಸುಪ್ರೀಂ ಕೋರ್ಟಿನ ನ್ಯಾಯಾಧೀಶರ ಕೆಲಸವೇನು? ಕಾನೂನಿನ ರಕ್ಷಣೆ ಹಾಗೂ ನ್ಯಾಯದಾನದ ಕೆಲಸ ಬದಿಗಿಟ್ಟು ಪ್ರಾಣಿಗಳ ಮೂತ್ರ ಸೆಗಣಿ ಹೇಲು ವೀರ್ಯ ಪರೀಕ್ಷಿಸುವ ಕೆಲಸವನ್ನು ಉಚ್ಚ ನ್ಯಾಯಾಧೀಶರು ಮಾಡುತ್ತಿರುವರೇ? ನ್ಯಾಯಾಧೀಶರ ಸೆಗಣಿ ಪರೀಕ್ಷಿಸುವ ಕೆಲಸದಿಂದಾಗಿಯೇ ಭಾರತದ ಎಲ್ಲಾ ಕೋರ್ಟಿನಲ್ಲಿ ಲಕ್ಷಗಟ್ಟಲೇ ಕೇಸುಗಳು ಬಾಕಿ ಇವೆಯೇ? ರಾಘವೇಶ್ವರ ಸ್ವಾಮಿಗಳಿಗೆ ಎಲ್ಲೆಲ್ಲೂ ಹೈಕೋರ್ಟ್ ಸುಪ್ರೀಂ ಕೋರ್ಟ್ ಕಂಡು ಬರಲು ದೊಡ್ಡ ಕಾರಣವೊಂದಿದೆ. ರಾಮಕಥಾ



ಗಾಯಕಿಯ ರೇಪ್ ಪ್ರಕರಣದಿಂದಾಗಿ ಸ್ವಾಮೀಜಿ ಕೋರ್ಟಿಗೆ ಅಲೆದಾಡಲು ಶುರುವಾದ ಮೇಲೆ ಅವರಿಗೆ ಎಲ್ಲೆಲ್ಲೂ ಕೋರ್ಟೇ ಕಾಣಿಸುತ್ತಿದೆ. ಅದಕ್ಕಾಗಿ ಬಹುಶಃ ಅವರು ದನದ ಮೂತ್ರ ಸೆಗಣಿ ಪರೀಕ್ಷಿಸುವ ಕೆಲಸವನ್ನೂ ಸುಪ್ರೀಂ ಕೋರ್ಟಿಗೆ ವಹಿಸಿ ಕೊಟ್ಟಿರುವುದು. ವಿಪರ್ಯಾಸವೆಂದರೆ ಅಲ್ಲಿ ಕುಳಿತ ಮೇಲ್ಜಾತಿಯ ದೊಡ್ಡ ಮುಂಡಾಸಿನ ದಡ್ಡ ಶೂದ್ರರೆಲ್ಲಾ ಸ್ವಾಮೀಜಿಯ ಇಂತಹ ಪೆದ್ದ ಹೇಳಿಕೆಗೆ ಭಯಂಕರ ಚಪ್ಪಾಳೆ ತಟ್ಟಿದ್ದೇ ತಟ್ಟಿದ್ದು. ಗೋವಿನ ಮೂತ್ರ-ಸೆಗಣಿಯಲ್ಲಿ ಚಿನ್ನ-ವಜ್ರವಿದ್ದರೆ ಬಿಳಿ ಹೋರಿಯ ಮೂತ್ರ-ವೀರ್ಯ-ಸೆಗಣಿಯಲ್ಲಿ ಪ್ಲಾಟಿನಂ ಇರಲೇಬೇಕು ಅಲ್ಲವೇ! ಇನ್ನು ಚಿನ್ನ-ವಜ್ರದ ಅತೀಹೆಚ್ಚು ಮೋಹವಿರುವ ಪೆದ್ದು ಬಂಟ ಹೆಂಗಸರು ತಮ್ಮ ಗುತ್ತಿನ ಮನೆಯ ತುಂಬಾ ದನಗಳನ್ನೇ ಸಾಕಿ ಅದರ ಸೆಗಣಿಯನ್ನು ಮೂತ್ರದೊಟ್ಟಿಗೆ ಬೆರೆಸಿ ಒಣಗಿಸಿ ಅದನ್ನು ಮುಡಿ ಕಟ್ಟಿ ಅಟ್ಟದಲ್ಲಿ ತುಂಬಿಡಬಹುದೇನೋ.

ನನಗೆ ಯಾವಾಗಲೂ ಅರ್ಥವಾಗದ ಒಂದು ವಿಷಯವೇನೆಂದರೆ ಜಗತ್ತಿನ ಯಾವುದೋ ಮೂಲೆಯಲ್ಲಿ ಏನಾದರೂ ಹೊಸ ಆವಿಷ್ಕಾರವಾದ ಕೂಡಲೇ … ನಮ್ಮ ವೈದಿಕ ಪುರಾಣ ಗ್ರಂಥಗಳಲ್ಲಿ ಮೊದಲೇ ಬರೆ… ಎನ್ನುವ ವಿತಂಡವಾದಿಗಳ ಒಂದು ದೊಡ್ಡ ವೈದಿಕ ಗ… ಭಾರತದಲ್ಲಿದೆ. ಹಾಗಾದರೆ ಈ ವಿಷಯಗಳನ್ನು ಪ್ರಯೋ… ಮಾಡಿ ಸಂಶೋಧಿಸಿ ಆವಿಷ್ಕರಿಸಿ ಈ ಮೊದಲೇ ಜ… ಉಪಯೋಗಕ್ಕೆ ಯಾಕೆ ಅನುವು ಮಾಡಿ ಕೊಡಲಿ… ಅವೆಲ್ಲಾ ಕೇವಲ ಪುಸ್ತಕದ ಬದನೆಕಾಯಿ ಮಾತ್ರ … ಉಳಿದಿದ್ದು ಯಾಕೆ? ಹೇಗಾದರೂ ಈಗ ಕೇಂದ್ರ… ಅಧಿಕಾರದಲ್ಲಿರುವುದು ಹಿಂದೂತ್ವ ಸರಕಾರವೇ ಆ… ಹಾಗಿರುವಾಗ ನಮ್ಮ ವೇದಪುರಾಣಗಳಲ್ಲಿ ಬರೆದಿರುವುದ… ಪ್ರಯೋಗಕ್ಕೆ ಒಳಪಡಿಸಲು ಒಂದು ಪ್ರತ್ಯೇ… ಸಚಿವಾಲಯವನ್ನೇ ತೆರೆಯಲಿ. ವೈದಿಕ ವಿಜ್ಞಾನಿಗಳ… ಒಟ್ಟಿಗೆ ಕೂಡಿ ಹಾಕಿ ಅವರಿಂದ ವೈದಿಕ ವಿಜ್ಞಾ… ಬಗ್ಗೆ ಸಂಶೋಧನೆ ಮಾಡಿಸಲಿ. ಇದರಿಂದ ಹ… ಆವಿಷ್ಕಾರಗಳಾಗಿ ಜಗತ್ತಿಗೆ ಉಪಕಾರವಾಗಲಿ. ಮೋದಿ… ಹೆಸರು ಅಜರಾಮರವಾಗಲಿ. ಗುಜರಾತಿನಲ್ಲಿ ಅಮು… ಡೇರಿಯ ಹೆಸರು ಬದಲಿಸಿ ಅಮೂಲ್ ಗೋಲ್ಡ್‌ಮೆ… ಎಂದು ಹೆಸರಿಸಲಿ. ಎಲ್ಲಾ ದೊಡ್ಡ ಆಭರಣ ಮಳಿಗೆ… ಹಿಂದೆ ಹಸುಗಳ ಕೊಟ್ಟಿಗೆ ತೆರೆಯಲು ಅನುಮತಿ ಕೊ… ಸರಕಾರಿ ಡೇರಿಗಳು ರೈತರಿಂದ ಹಾಲಿನೊಟ್ಟಿಗೆ ಗೋಮ… ಹಾಗೂ ಸೆಗಣಿ ಸಹ ಖರೀದಿಸಿ ರೈತರನ್ನು ಉದ್ಧರಿ… ಗೋಮೂತ್ರದಿಂದ ಚಿನ್ನವನ್ನು ತೆಗೆದು ರಿಸರ್ವ್ ಬ್ಯಾಂ… ಜಮೆ ಮಾಡಿ ಭಾರತ ವಿದೇಶದಿಂದ ಟನ್ನುಗಟ್ಟಲೇ … ಆಮದು ಮಾಡುವುದನ್ನು ನಿಲ್ಲಿಸಲಿ. ಬೆಳ್ಳಿ ಈಗ ಕಿ… ಲೆಕ್ಕದಲ್ಲಿಯೇ ಮಾರಾಟವಾಗುತ್ತಿದ್ದು ನಿನ್ನೆಯ ರೇಟು ಒ… ಕಿಲೋ ಬೆಳ್ಳಿಗೆ ಕೇವಲ ಮುವ್ವತ್ತೈದು ಸಾವಿರ… ಗೋಮೂತ್ರದ ಚಿನ್ನವನ್ನೂ ಹೀಗೇ ಕಿಲೋಗೆ ಕೇ… 35 ಸಾವಿರಕ್ಕೆ ಮಾರುವ ಅಚ್ಛೇ ದಿನಗಳು ಬರಲಿ. ಭಾರ… ಮಹಿಳೆಯರು ಖುಷಿಯಿಂದ ಕುಣಿದಾಡಲಿ. ಕಲ್ಲಿದ… ಒಂದು ಕಾರ್ಬನ್ (ಇಂಗಾಲ), ಅದರಂತೆ ವಜ್ರವೂ ಒ… ಕಾರ್ಬನ್. ಆದರೆ ವಜ್ರ ಕಲ್ಲಿದ್ದಲಿಗಿ… ಸಾವಿರಾರು ಪಟ್ಟು ಹೆಚ್ಚು ಗಟ್ಟಿಯಾಗಿರು… ಅಷ್ಟೇ. ಹಾಗಾಗಿ ಸೆಗಣಿಯಿಂದ ವಜ್ರ ತೆ… ಮೇಲೆ ಉಳಿದ ಸೆಗಣಿಯನ್ನು ಕಾಬ… ಆಗಿ ಪರಿವರ್ತಿಸಿ ಥರ್ಮಲ್ ವಿದ್ಯುತ್ ಪ… ಸ್ಟೇಷನ್ನುಗಳಲ್ಲಿ ಕಲ್ಲಿದ್ದಲಿನ ಬದಲು ಬ… ಉಪಯೋಗಿಸುವಂತಾಗಲಿ. ಗೋ… ಮ್ಯೆಯಲ್ಲಿ 33 ಕೋಟಿ ಕೂದ… ಇರುವುದಿಲ್ಲ, ಆದರೆ 33 ಕೋ… ದೇವರಿದ್ದಾರಂತೆ. ಹಾಗಾಗಿ ಒಬ್ಬೊ… ದೇವರೂ ಕೇವಲ ನಾಲ್ಕು-ನಾ… ಮನುಷ್ಯರನ್ನು ದತ್ತು ತೆಗೆದುಕೊಂಡರೂ ಸಾ… ಭಾರತದ ಸಮಸ್ತ ಮನುಕು… ಕಲ್ಯಾಣವಾಗುವುದು ಸಾಧ್ಯ.

ಸಾಮಾಜಿಕ ಮೀಡಿಯಾದಲ್ಲಿ ಗೋ… ಬಗೆಗೆ ಇನ್ನೊಂದು ಭಯಂಕರ ವೈ… ಸಂಶೋಧನೆ ಹರಿದಾಡುತ್ತಿದೆ, ಅದೇ… ಜಗತ್ತಿನ ಪ್ರಾಣಿಗಳಲ್ಲಿ ಕೇವಲ ಗೋವು ಮ… ದಿನದ 24 ಗಂಟೆಯೂ ಇಂಗಾಲ ವಾ… ಒಳ ಸೇದಿ ಪ್ರಾಣವಾಯು ಹೊರಬಿಡುತ್ತದಂತೆ. ಅಂದರೆ ಮನುಷ್ಯ ಹಾಗೂ ಇ… ಸಸ್ತನಿಗಳ ಶ್ವಾಸೋಚ್ಛ್ವಾಸದ ವಿರುದ್ಧ ಕ್ರಿಯೆಯಿದು. ಅತ… ವಿಷಕಾರಿ ಕಾರ್ಬನ್ ಮೊನೋಕ್ಸೈಡ್ ಮತ್ತು ಮಿಥೇ… ಗ್ಯಾಸ್ ಸೇವನೆಯಿಂದಲೂ ಗೋವು ಸಾಯುವುದಿಲ್ಲವ… ಇದನ್ನು ಹೇಳಿದ ಶತಮೂರ್ಖ ವೈದಿಕ ಸಂಶೋ… ಯಾರೋ? ಇದನ್ನು ಅವನು ಪ್ರಯೋಗಶಾಲೆಯ… ಪ್ರಮಾಣೀಕರಿಸಬಲ್ಲನೇ ಅಥವಾ ಇದೂ ಮತ್ತೊ… ಫೇಕೂಗಿರಿಯೇ? ಒಣ ಬಾವಿಯ ಬುಡದಲ್ಲಿ ಯಾವಾಗ… ಮಿಥೇನ್ ಗ್ಯಾಸ್ ಕಲೆಕ್ಟ್ ಆಗಿರುವುದರಿಂದ ಯಾತಕ್ಕಾದ… ಕಾರ್ಮಿಕರು ಬಾವಿಗಿಳಿಯುವ ಮುಂಚೆ ಅದರೊಳಗೆ ಒಂ… ಜೀವಂತ ಕೋಳಿ ಹಾಕುತ್ತಾರೆ. ಹತ್ತು ನಿಮಿಷದಲ್ಲಿ… ಕೋಳಿ ಸತ್ತರೆ ಅದಿಯಲ್ಲಿ ಮಿಥೇನ್ ಅನಿಲ ಕಲ…




ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನ… ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿ… ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗ… ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹು…

ಗಿದೆಯೆಂದು ಅರ್ಥ ಹಾಗೂ ಕಾರ್ಮಿಕರು ಯಾರೂ
ಾವಿಯಲ್ಲಿ ಇಳಿಯುವುದಿಲ್ಲ. ಒಂದು ವೇಳೆ ತುಂಬಾ
ಮಯದವರೆಗೆ ಕೋಳಿ ಸಾಯದಿದ್ದರೆ ಅಲ್ಲಿ ಮಿಥೇನ್
್ಯಸ್ ಇಲ್ಲ ಎಂದು ಅರ್ಥ. ಮೊನ್ನೆ ಮೊನ್ನೆ ನಮ್ಮ
ಳ್ಳಿಯಲ್ಲಿ ಒಂದು ಆರೋಗ್ಯವಂತ ಆಕಳು ಕಾಲು ಜಾರಿ
ಂದು ಒಣಬಾವಿ ಯಲ್ಲಿ ಬಿತ್ತು. ಬಿದ್ದ ರಭಸಕ್ಕೆ ಆದಕ್ಕೇನೂ
ೆಟ್ಟಾಗಲಿಲ್ಲ. ಈ ಹಸು ಬಾವಿಗೆ ಬಿದ್ದು ಅಲ್ಲಿಯೇ ತಕ್ಷಣ
ದ್ದು ನಿಂತು ಕೆಲಹೊತ್ತಿನ ನಂತರ ಜೊಂಪು ಹಿಡಿದಂತಾಗಿ
ಲ್ಲಿಯೇ ಮಲಗಿ ನಂತರ ಸತ್ತಿತು. ಆಗ ಒಬ್ಬರು ಒಂದು
ೋಳಿ ಬಾವಿಯಲ್ಲಿ ಹಾಕಿದರು. ಅದೂ ಕೆಲವೇ
ನಿಮಿಷದಲ್ಲಿ ಸತ್ತಿತು. ಇದರ ಅರ್ಥ ಅಲ್ಲಿ ಮಿಥೇನ್‌ನಂತಹ
ಷ ಅನಿಲವಿದ್ದು ಗೋವುಗಳಿಗೆ ಅದನ್ನು ತಡೆಕೊಳ್ಳುವ
ಕ್ತಿಯಿಲ್ಲ ಎಂಬುದಕ್ಕೆ ಗಟ್ಟಿ ಪುರಾವೆ. ಗೋವಿನ ಬಗ್ಗೆ
ಂಘ ಪರಿವಾರದವರು ಬೂಸಿ ಬಿಟ್ಟಿದ್ದಕ್ಕೆ ನಮ್ಮೂರಿನ
ಣಬಾವಿಯಲ್ಲಿಯ ಹಸುವಿನ ಮರಣವೇ ಜೀವಂತ ಸಾಕ್ಷಿ.
ಮೂಲತಃ ಭಾರತದಲ್ಲಿ ಗೋವುಗಳೇ ಇರಲಿಲ್ಲ.
ರ್ಯರು ಬರುವುದಕ್ಕೆ ಮುಂಚೆ ಇಲ್ಲಿಯ ಮೂಲ
ವಾಸಿಗಳು ಕೇವಲ ಎಮ್ಮೆ ಕೋಣ ಸಾಕುತ್ತಿದ್ದರು ಹಾಗೂ
ದನ್ನು ಪೂಜಿಸುತ್ತಿದ್ದರು. ಕಾರಣ ಒಂದು ಎಮ್ಮೆಯ
ಾಲು ಹತ್ತಾರು ಕುಟುಂಬಗಳಿಗೆ ಸಾಕಾಗುತ್ತಿತ್ತು ಹಾಗೂ
ಷಿಯಲ್ಲಿ ಆಗಿನ ಕೋಣಗಳು ಟ್ರ್ಯಾಕ್ಟರ್‌ಗೆ ಸಮನಾಗಿತ್ತು.
ರ್ಯರು ಮಧ್ಯ ಏಷಿಯಾದಿಂದ ವಲಸೆ ಬಂದಾಗ ತಮ್ಮ
ತೆ ಗೋವನ್ನು ತಂದರು. ಆಗ ಗೋವು ತಂದಿದ್ದು
ಕ್ತಿಯಿಂದಲ್ಲ, ಅದರ ಹಾಲಿಗಾಗಿ ಮತ್ತು ಆಹಾರ
ೇಕಾದಾಗ ಅದನ್ನು ಕೊಂದು ಮಾಂಸ ತಿನ್ನಲು ಆರ್ಯರು
ೋವುಗಳನ್ನು ತಮ್ಮೊಂದಿಗೆ ತಂದಿದ್ದು. ಅಲೆಮಾರಿ
ನಾಂಗವಾಗಿದ್ದ ಆರ್ಯರಿಗೆ ಆಗ ತಮಗೆ ಆಹಾರವಾಗಿ
ಮ್ಮ ಜೀವ ಉಳಿಸಿದ ಗೋವು ಇತರ ಪ್ರಾಣಿಗಳಿಗಿಂತ
ೆಚ್ಚು ಪ್ರಿಯವಾಯಿತು. ಈಗಿನ ನಮ್ಮಂತಹ
ಾಂಸಾಹಾರಿಗಳು ಕೋಳಿ ಕುರಿ ಆಡುಗಳನ್ನು
ೀತಿಸಿದಂತಹ ಆಹಾರ ಪ್ರೇಮವೇ ಗೋವಿನ ಬಗೆಗಿನ
ಆರ್ಯರ ಪ್ರೀತಿಯಾಗಿತ್ತು. ನೀನಾರಿಗಾದೆಯೋ ಎಲೆ
ಾನವಾ ಎಂಬ ಕವಿತೆ ಬರೆದ ನರಸಿಂಹಾಚಾರ್ ಇವರು
ಂದೊಮ್ಮೆ ಎಮ್ಮೆ ಸಾಕಿ ಅದರ ಉಪಯೋಗ ಆಕಳಿಗಿಂತ
ಲ್ಕು ಪಟ್ಟು ಹೆಚ್ಚಿದೆ ಎಂದು ಸ್ವತಃ ಅರಿತುಕೊಂಡಿದ್ದರೆ
ವರು ಈ ನೀನಾರಿಗಾದೆಯೋ ಎಂಬ ಪದ್ಯ ಗೋವಿನ
ಗ್ಗೆ ಬರೆಯುವ ಬದಲು ಎಮ್ಮೆಯ ಬಗ್ಗೆ ಬರೆಯುತ್ತಿದ್ದುದು
ಂಡಿತ. ಈಗಲೂ ಹಳ್ಳಿಯ ಮಕ್ಕಳೆಲ್ಲಾ ಚಿಕ್ಕಂದಿನಿಂದಲೇ
ಡಿಯುವುದು ಎಮ್ಮೆ ಹಾಲು ಅಥವಾ ಆಡಿನ ಹಾಲು.
ವರಿಗೆ ಗೋವಿಗಿಂತ ಎಮ್ಮೆ ಆಡು ಹೆಚ್ಚು ಪ್ರಿಯ.
ಂಘಗಳಿಗೆ ಇದು ಗೊತ್ತಿದೆಯೇ? ಹಾಗಾಗಿ ಪುಣ್ಯಕೋಟಿ
ವಿತೆಯಲ್ಲೂ ಕವಿ ಬಿ.ಎಂ.ಶ್ರೀಯವರು ಪುಣ್ಯಕೋಟಿ
ಂಬ ಎಮ್ಮೆ ಎಂದು ಬರೆದಿದ್ದರೆ ಸಮಂಜಸವಾಗುತ್ತಿತ್ತು.
ಕ್ರಿಕೆಟಿನಲ್ಲಿ ಆಟಕ್ಕಿಂತ ಗಣಿತವೇ ಅಧಿಕ. ಹಾಗಾಗಿ
ೆಚ್ಚು ದೈಹಿಕ ಶ್ರಮ ಬೇಡದ ಕ್ರಿಕೆಟ್ ಎಂದರೆ ಸೋಮಾರಿ
ಾರತೀಯರಿಗೆ ಹೆಚ್ಚು ಪ್ರಿಯ. ಆದರೆ ಕ್ರಿಕೆಟ್ ಬಾಲ್
ೇವಲ ದನದ ಚರ್ಮದಿಂದ ಮಾತ್ರ ತಯಾರಿಸುತ್ತಾರೆ.
ದಕ್ಕೆ ಬ್ರಾಹ್ಮಣ ಜೈನ ಜಾತಿಯ ಬೌಲರ್‌ಗಳು ಉಗುಳು
ಚ್ಚಿ ಹಚ್ಚಿ ತಿಕ್ಕಿತಿಕ್ಕಿ ಬೌಲಿಂಗ್ ಮಾಡುತ್ತಾರೆ. ಆಗ
್ರಾಹ್ಮಣ-ಜೈನರ ಜಾತಿ ಕೆಡುವುದಿಲ್ಲವೇ? ಬಿಜೆಪಿ ಸರಕಾರ
ಂದಮೇಲೆ ಗೋರಕ್ಷಕರ ಗೂಂಡಾಗಿರಿಯಿಂದ ದನದ
ರ್ಮ ಸಿಗದೇ ಕ್ರಿಕೆಟ್ ಚೆಂಡು ತಯಾರಕರು ದನದ
ರ್ಮವನ್ನು ವಿದೇಶದಿಂದ ಆಮದು ಮಾಡುವ ಪರಿಸ್ಥಿತಿ
ಂದಿರುವುದರಿಂದ, ಮೊದಲು ಕೇವಲ ಇನ್ನೂರು
ೂಪಾಯಿಗೆ ಸಿಗುತ್ತಿದ್ದ ಕ್ರಿಕೆಟ್ ಚೆಂಡು ಒಂದಕ್ಕೆ ಈಗ
ಂದು ಸಾವಿರ ರೂಪಾಯಿ ಬೆಲೆಯಾಗಿ ಮಧ್ಯಮ ವರ್ಗದ
ಕ್ಕಳೂ ಕ್ರಿಕೆಟ್ ಆಡದಂತಾಗಿದೆ. ಆದರಂತೆ ಫುಟ್‌ಬಾಲ್,
ಾಲಿಬಾಲ್, ಬಾಸ್ಕೆಟ್‌ಬಾಲ್ ಇವನ್ನೆಲ್ಲಾ ದನದ
ರ್ಮದಿಂದಲೇ ತಯಾರಿಸುತ್ತಿದ್ದು ಅವು ಸಹ ಈಗ
ೂರು ಪಟ್ಟು ದುಬಾರಿಯಾಗಿವೆ. ಚೀನಾದವರು ಕೃತ್ರಿಮ
ರ್ಮದಿಂದ ವಾಲಿಬಾಲ್ ಬಾಸ್ಕೆಟ್‌ಬಾಲ್ ತಯಾರಿಸಿ
ಾರತದಲ್ಲಿ ಕಡಿಮೆ ಕ್ರಯಕ್ಕೆ ಮಾರುತ್ತಿದ್ದಾರೆ. ಹಾಗಾಗಿ
ಎಲ್ಲಾ ಕ್ರೀಡಾ ಉದ್ಯಮಗಳು ಭಾರತದಲ್ಲಿ ಸೊರಗಿ
ದ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಇದು ಮೋದಿಯ
ಚ್ಛೇದಿನ್ ಕೊಡುಗೆ.
ನಾವು ನಿತ್ಯ ಬೆಳಗ್ಗೆ ಬಳಸುವ ಟೂತ್ ಪೇಸ್ಟಿನಲ್ಲಿ
ನದ ಎಲುಬಿನ ಪುಡಿ ಇರುತ್ತದೆ. ಸಕ್ಕರೆ ತಯಾರಿಕೆಯಲ್ಲಿ
ನದ ಎಲುಬು ಬಳಸಲಾಗುತ್ತದೆ. ಹಲವು ಔಷಧಿ
ಯಾರಿಕೆಗೆ ದನದ ಕೊಬ್ಬು ಮತ್ತು ಸರ (ಜಿಲೆಟಿನ್)
ೇಕಾಗುತ್ತದೆ. ಮೋದಿ ಅಧಿಕಾರಕ್ಕೆ ಬಂದನಂತರ
ವೆಲ್ಲವನ್ನೂ ವಿದೇಶದಿಂದ ಆಮದು ಮಾಡಬೇಕಾಗಿ
ಂದಿರುವುದರಿಂದ ಭಾರಿ ವಿದೇಶಿ ವಿನಿಮಯ
್ಯರ್ಥವಾಗುತ್ತಿದೆ. ದನದ ಅಂಶ ಇರುವ ಟೂತ್‌ಪೇಸ್ಟ್,
ಕ್ಕರೆ, ಅಲೋಪತಿ ಔಷಧ ಇವೆಲ್ಲವನ್ನೂ ಸಂಘಿಗಳು
್ಯಾಗ ಮಾಡಿದರೆ ಮಾತ್ರ ಅವರು ನಿಜವಾದ
ಿಂದುತ್ವವಾದಿಗಳು ಅನ್ನಬಹುದು. ಇಲ್ಲದಿದ್ದರೆ ಅವರೆಲ್ಲಾ
ುದ್ಧ ಆಷಾಢಭೂತಿಗಳು ಅಷ್ಟೇ.

-ಆರ್.ಬಿ.ಶೇಣವ, ಮಂಗಳೂರು


ಕುಣಿಯೋದು ಯಾವಾಗಲೂ ನನಗಿಷ್ಟ: ಶಿವರಾಜ್‌ಕುಮಾರ್

ಈಗಾಗಲೇ ಹತ್ತು ವರ್ಷಕ್ಕೆ ಆಗುವಷ್ಟು ಕಾಲ್‌ಶೀಟ್ ಕೊಟ್ಟಿರುವ ಶಿವರಾಜ್‌ಕುಮಾರ್, ಈ ಮಧ್ಯೆ ಕಿರುತೆರೆಯ ರಿಯಾಲಿಟಿ ಶೋವೊಂದಕ್ಕೆ ನಿರ್ಣಾಯಕರಾಗಿಯೂ ಒಪ್ಪಿಕೊಂಡಿದ್ದಾರೆ. ಈ ಎರಡರ ಕುರಿತೂ ಅವರು ಇಲ್ಲಿ ಮಾತಾಡಿದ್ದಾರೆ.



ಹಿರಿತೆರೆಯ ಅನೇಕ ಸ್ಟಾರ್ ನಟನಟಿಯರು ಮತ್ತೆ ಕಿರುತೆರೆಯನ್ನು ಆವರಿಸಿಕೊಳ್ಳುತ್ತಿದ್ದಾರೆ. ಅದಕ್ಕೆ ಮತ್ತೆ ಸೇರ್ಪಡೆ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್. ಉದಯ ವಾಹಿನಿಯಲ್ಲಿ ಜುಲೈ 16ರಿಂದ ಶುರುವಾಗಲಿರುವ 'ಕಿಕ್' ರಿಯಾಲಿಟಿ ಶೋಗೆ ಶಿವರಾಜ್‌ಕುಮಾರ್ ನಿರ್ಣಾಯಕರು. ಮತ್ತೊಂದು ಅಚ್ಚರಿಯ ಸಂಗತಿ ಅಂದರೆ, ಈಗಾಗಲೇ ಶಿವರಾಜ್‌ಕುಮಾರ್ ಹತ್ತು ವರ್ಷಕ್ಕೆ ಆಗುವಷ್ಟು ನಿರ್ಮಾಪಕರಿಗೆ ಕಾಲ್‌ಶೀಟ್ ಕೊಟ್ಟಿದ್ದಾರೆ. ಎರಡನ್ನೂ ಹೇಗೆ ನಿಭಾಯಿಸುತ್ತಾರೆ ಮತ್ತು ಮುಂದಿನ ಸಿನಿಮಾಗಳು ಯಾವವು ಅನ್ನುವ ಕುರಿತು ಶಿವಣ್ಣ ಮನಬಿಚ್ಚಿ ಮಾತಾಡಿದ್ದಾರೆ.

* ನಿಮ್ಮ ಕಾಲ್‌ಶೀಟ್ ಸಿಗುವುದು ಕಷ್ಟ ಅನ್ನುವ ಹೊತ್ತಲ್ಲಿ ಕಿರುತೆರೆಗೆ ಹಾರಿದ್ದೀರಿ. ಟೈಮ್ ಹೇಗೆ ಹೊಂದಿಸಿಕೊಳ್ಳುತ್ತೀರಿ?



ಮನುಷ್ಯನಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ ಅನ್ನುವುದನ್ನು ನಾನು ಪದೇ ಪದೇ ಹೇಳುತ್ತೇನೆ. ಮನಸ್ಸಿದ್ದಲ್ಲಿ ಮಾರ್ಗವಿದ್ದೇ ಇರುತ್ತದೆ. ಹಾಗೆ ಅಂದುಕೊಂಡೆ ಕಿಕ್ ರಿಯಾಲಿಟಿ ಶೋಗೆ ಜಡ್ಜ್ ಆಗಿ ಒಪ್ಪಿಕೊಂಡೆ. ವಾರಕ್ಕೆ ಒಂದು ದಿನ ಈ ಶೋಗಾಗಿ ಮೀಸಲಿಡಬೇಕು. ಹೀಗಾಗಿ ಯಾವುದೇ ಒತ್ತಡ ಆಗದು.

* ಯಾವ ಕಾರಣಕ್ಕಾಗಿ ಇಂಥದ್ದೊಂದು ರಿಯಾಲಿಟಿ ಶೋ ಒಪ್ಪಿಕೊಂಡಿದ್ದೀರಿ?

ಡಾನ್ಸ್ ಅಂದರೆ ನನಗಿಷ್ಟ. ಬೇರೆ ಬೇರೆ ಪ್ರಕಾರದ ಡಾನ್ಸ್‌ಗಳಿಗೆ ನಾನು ಹೆಜ್ಜೆ ಹಾಕಿದ್ದೇನೆ. ಅಲ್ಲದೇ ಕಾಲೇಜು ದಿನಗಳಲ್ಲಂತೂ ವೇದಿಕೆ ಸಿಕ್ಕಾಗೆಲ್ಲ ಕುಣಿದಿದ್ದೇನೆ. ಅನೇಕ ಕಾರ್ಯಕ್ರಮಗಳಲ್ಲಿ ಡಾನ್ಸ್ ಮಾಡಿ ರಂಜಿಸಿದ್ದೇನೆ. ಕುಣಿಯೋದು ನನಗಿಷ್ಟ. ಹೀಗಾಗಿಯೇ ನಾನು ಡಾನ್ಸ್ ಶೋ ಒಪ್ಪಿಕೊಂಡೆ.

* ಈ ಹೊತ್ತಿನ ಬಹುತೇಕ ರಿಯಾಲಿಟಿ ಶೋಗಳು ರೀಮೇಕ್ ಆದಂತವು. ನೀವು ರೀಮೇಕ್ ಚಿತ್ರಗಳಲ್ಲಿ ನಟಿಸಲ್ಲವಲ್ಲ?

ಕಿಕ್ ಶೋ ಸ್ವಮೇಕ್. ಅಪ್ಪಟ ಕನ್ನಡದ ಮನಸುಗಳೇ ಹೆಣೆದಂತವು. ಕಲ್ಪನೆಯೆಲ್ಲವೂ ಕನ್ನಡದ್ದೆ. ಈ ಮಣ್ಣಿನ ಸೊಗಡಿನಲ್ಲಿ ಇರುವ ಡಾನ್ಸ್ ಪ್ರಕಾರವನ್ನು ಶೋನಲ್ಲಿ ಬಳಸಿಕೊಳ್ಳಲು ತೀರ್ಮಾನಿಸಿದ್ದಾರೆ. ಅಲ್ಲದೇ, ರಚಿತಾ ರಾಮ್, ಹರ್ಷ, ಅಕುಲ್ ಬಾಲಾಜಿ ಅಂತಹ ಕನ್ನಡದ ಪ್ರತಿಭೆಗಳೇ ಇಲ್ಲಿ ಕೆಲಸ ಮಾಡುತ್ತಿವೆ. ಹೀಗಾಗಿ ನಿರ್ಣಾಯಕನಾಗಲು ಸಹಿ ಮಾಡಿದ್ದೇನೆ.

* ಈಗಾಗಲೇ ಆರೇಳು ಚಿತ್ರಗಳು ಅನೌನ್ಸ್ ಆಗಿವೆ. ಇನ್ನಷ್ಟು ಚಿತ್ರಗಳಿಗೆ ನೀವು ಒಪ್ಪಿಗೆ ಕೊಟ್ಟಿದ್ದೀರಿ ಅನ್ನುವ ಮಾತಿದೆ. ಈ ಕುರಿತು ಏನನಿಸುತ್ತದೆ?

ಅಪ್ಪಾಜಿ ಹೇಳಿದಂತೆ ಯಾರಿಗೂ ನಾನು ನಿರಾಸೆ ಮಾಡುವುದಿಲ್ಲ. ಒಳ್ಳೆಯ ಕತೆಗಳನ್ನು ತಂದಾಗ ಒಪ್ಪಿಕೊಳ್ಳುತ್ತೇನೆ. ಕಾಲ್‌ಶೀಟ್ ಬಗ್ಗೆ ಮೊದಲೇ ಹೇಳುತ್ತೇನೆ. ಕಾಯುತ್ತೇನೆ ಅಂದವರಿಗೆ ನಾನು ಬೇಡ ಅಂತ ಹೇಗೆ ಹೇಳಲಿ? ಶಕ್ತಿ ಇರುವಷ್ಟು ದಿನ ಕೆಲಸ ಮಾಡುತ್ತೇನೆ. ಅಭಿಮಾನಿಗಳನ್ನು ರಂಜಿಸುತ್ತಲೇ ಇರುತ್ತೇನೆ.

* ಮುಂದಿನ ವಾರ 'ಸಂತೆಯಲ್ಲಿ ನಿಂತ ಕಬೀರ' ಚಿತ್ರ ರಿಲೀಸ್ ಆಗುತ್ತಿದೆ. ಆದರೆ, ಆ ಕುರಿತು ಸಿನಿಮಾ ತಂಡದಿಂದ ಸದ್ದೇ ಇಲ್ಲವಲ್ಲ?

ನನಗೂ ಇದು ಅಚ್ಚರಿ ತಂದಿದೆ. ಒಳ್ಳೆಯ ಚಿತ್ರಗಳು ಬಂದಾಗ, ಅದನ್ನು ಜನರಿಗೆ ತಲುಪಿಸುವ ಕೆಲಸ ನಿರ್ಮಾಪಕರು ಮಾಡಬೇಕು. ಆದರೆ, ಕಬೀರ ಚಿತ್ರದ ನಿರ್ಮಾಪಕರು ಕೈಗೆ ಸಿಗುತ್ತಿಲ್ಲ. ಡೇಟ್ ಅನೌನ್ಸ್ ಮಾಡಿ, ಮಾಯವಾದರೆ ಏನು ಮಾಡೋದು? ಕಬೀರ ಒಳ್ಳೆಯ ಸಿನಿಮಾ. ಅದು ಎಲ್ಲರಿಗೂ ತಲುಪಬೇಕು.

* ಸೂರಿ ಮತ್ತು ನಿಮ್ಮ ಕಾಂಬಿನೇಷನ್‌ನ 'ಟಗರು' ಸಿನಿಮಾದ ವಿಶೇಷತೆ ಏನು?

'ಟಗರು' ಮಾಸ್ ಮತ್ತು ಕ್ಲಾಸ್ ಸಿನಿಮಾ. ಸೂರಿ ಸಿನಿಮಾಗಳು ಹೇಗಿರುತ್ತವೆ ಅನ್ನುವುದನ್ನು ನಾನು ಹೇಳಬೇಕಿಲ್ಲ. ರಿಯಾಲಿಟಿಗೆ ಹತ್ತಿರ ಇರುವಂತಹ ಕತೆಗಳನ್ನು ಸೂರಿ ಆಯ್ಕೆ ಮಾಡಿಕೊಳ್ಳುತ್ತಾರೆ. ಇಲ್ಲಿಯೂ ಅಂಥದ್ದೇ ಕತೆ ಇದೆ. ಮತ್ತೆ ಅವರ ಸಿನಿಮಾದಲ್ಲಿ ನಟಿಸುತ್ತಿದ್ದೇನೆ ಅನ್ನುವ ಖುಷಿ ಇದೆ.

* ಮುಂದಿನ ಸಿನಿಮಾಗಳು ಯಾವುವು?


'ಸನ್ ಆಫ್ ಬಂಗಾರದ ಮನುಷ್ಯ' ಮತ್ತು 'ಶ್ರೀಕಂಠ' ಶೂಟಿಂಗ್ ಮುಗಿದಿದೆ. 'ಖದರ್', 'ಟಗರು' ಮತ್ತು 'ಲೀಡರ್' ಸಿನಿಮಾಗಳ ಶೂಟಿಂಗ್ ಶುರುವಾಗಬೇಕು. ಇವೆಲ್ಲ ಮುಗಿದನಂತರವೇ ಮುಂದಿನ ಚಿತ್ರದ ಬಗ್ಗೆ ಹೇಳುತ್ತೇನೆ.

* ನೀವು ಮತ್ತು ಸುದೀಪ್ ನಟನೆಯ ಸಿನಿಮಾ 'ಕಲಿ' ಯಾಕೆ ಸೆಟ್ಟೇರಲಿಲ್ಲ?

ನಾನಾ ಕಾರಣಗಳಿಂದಾಗಿ ಅದು ಸದ್ಯ ಸೆಟ್ಟೇರುತ್ತಿಲ್ಲ. ಹಾಗಂತ ಸಿನಿಮಾ ಆಗುವುದೇ ಇಲ್ಲ ಅಂತಲ್ಲ. ಮುಂದಿನ ದಿನಗಳಲ್ಲಿ ಆಗಬಹುದು. ಅದಕ್ಕಿಂತ ಮುಂಚೆ ನಾನು ಮತ್ತು ಸುದೀಪ್ ಮತ್ತೊಂದು ಚಿತ್ರದಲ್ಲಿ ನಟಿಸಲಿದ್ದೇವೆ. ಆ ಚಿತ್ರಕ್ಕೆ 'ದಿ ವಿಲನ್' ಅಂತ ಹೆಸರು ಕೂಡ ಇಡಲಾಗಿದೆ. ಆಗಸ್ಟ್‌ನಲ್ಲಿ ಈ ಚಿತ್ರಕ್ಕೆ ಮುಹೂರ್ತ. ■

ಜೈನರಿಗೆ ರಾಮ ಕೆಲಸದಾಳು

ಪ್ರೊ. ಮಹೇಶ್‌ಚಂದ್ರ ಗುರು ಇವರು ರಾಮನ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ಬಂಧನವಾಗಿ ಅವರು ತಮ್ಮ ಮೈಸೂರು ವಿ.ವಿ ನೌಕರಿಯಿಂದ ಅಮಾನತಾಗಿದ್ದು, ಅದನ್ನು ತೆರವುಗೊಳಿಸಬೇಕೆಂದು ಎಲ್ಲರೂ ಒತ್ತಾಯಿಸಿದ್ದು ಸರಿಯಾಗಿದೆ. ಈಗಿನ ದಿನಗಳಲ್ಲಿ ಒಬ್ಬನಿಗೆ ಶೀತವಾಗಿ ಜೋರಾಗಿ ಸೀನಿದರೂ ಸಾಕು ಅದರಿಂದ ಸೀತೆಗೆ ಅವಮಾನ ಆಗಿ ಧಾರ್ಮಿಕನಿಂದನೆ ಆಯಿತು ಎಂದು ಹುಯಿಲೆಬ್ಬಿಸುವವರೂ ಇದ್ದಾರೆ. ಆದರೆ ಹರೆಕೃಷ್ಣ ಪಂಥದ ಇಸ್ಕಾನ್‌ನವರು ನಮ್ಮ ಎದುರಿಗೇ ಕೃಷ್ಣ ವಿಷ್ಣು ರಾಮನನ್ನು ಹೊರತುಪಡಿಸಿ ಬೇರೆ ಎಲ್ಲಾ ಹಿಂದೂ ದೇವರನ್ನು ಬಹಿರಂಗವಾಗಿ ಅವಮಾನಿಸುತ್ತಾರೆ. ಶಿವ ದುರ್ಗಾ ಕಾಳಿ ಮಾರಿ ಗಣಪತಿ ಸುಬ್ರಹ್ಮಣ್ಯ ಈ ಎಲ್ಲಾ ದೇವರು ನಿಜವಾದ ದೇವರೇ ಅಲ್ಲ ಮತ್ತು ಅವರು ಪೂಜೆಗೆ ಅರ್ಹರಲ್ಲ, ಹಾಗಾಗಿ ನೀವು ಆ ದೇವರುಗಳನ್ನು ಪೂಜಿಸಬೇಡಿ ಎಂದು ನನ್ನ ಮುಂದೆಯೇ ಹರೆಕೃಷ್ಣ ಪಂಥದವರು ಅನೇಕ ಸಾರಿ ಹೇಳಿದ್ದಾರೆ. ವೈಷ್ಣವರಂತೂ ಶಿವನು ವಿಷ್ಣುವಿನ ದಾಸ, ಅದೂ ಗರುಡ ಮತ್ತು ಆದಿಶೇಷನ ನಂತರದ ಎಂಟನೆಯ ಸ್ಥಾನದ ದಾಸ್ಯ ಶಿವನದು ಎಂದು ಘೋರವಾಗಿ ಶಿವನನ್ನು ಅವಮಾನಿಸುತ್ತಾರೆ. ಇದೆಲ್ಲಾ ಹಿಂದೂತ್ವವಾದಿಗಳಿಗೆ ಯಾಕೆ ಕಾಣಿಸುತ್ತಿಲ್ಲ ಹಾಗೂ ಹರೆಕೃಷ್ಣ ಪಂಥದವರ ವಿರುದ್ಧ ಶೈವ ಮತ್ತು ಶಾಕ್ತ ಪಂಥದವರ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡಿದ್ದಕ್ಕೆ ಪೊಲೀಸರಿಗೆ ಯಾರೂ ದೂರು ಯಾಕೆ ಕೊಡುತ್ತಿಲ್ಲ? ಮಹೇಶ್‌ಚಂದ್ರ ಗುರು ಹೇಳಿದರೆ ತಪ್ಪು ಅದೇ ಹರೆಕೃಷ್ಣದವರು ಹೇಳಿದರೆ ಸರಿ, ಇದು ಎಲ್ಲಿಯ ನಿಯಮ? ಜಾಕೀರ್ ನಾಯ್ಕ್, ಹೀಗೆ ಹಿಂದೂ ಶೈವ ಅಥವಾ ಶಾಕ್ತ ದೇವರನ್ನು ತನ್ನ ಅಲ್ಲಾಹುನ ದಾಸ ಎಂದು ಅವಮಾನಿಸಿದ್ದರೆ ಸಂಘಿಗಳು ಸುಮ್ಮನಿರುತ್ತಿದ್ದರೆ?



ಮಾರ್ವಾಡಿ ಜೈನರಂತೂ ರಾಮನನ್ನು ತಮ್ಮ ಮನೆಯ ಕೆಲಸದಾಳು ಅನ್ನುತ್ತಾರೆ. ನಾನು ಮುಂಬೈಯಲ್ಲಿ ಇದ್ದಾಗ ಕಾಂದಿವಿಲಿ ಮತ್ತು ಬೋರಿವಲಿ ಉಪನಗರಗಳಲ್ಲಿ ಮಾರ್ವಾಡಿ ಜೈನರು ದೊಡ್ಡ ಸಂಖ್ಯೆಯಲ್ಲಿ ಇದ್ದರು. ನನ್ನ ನೆರೆಯಲ್ಲಿದ್ದ ಜೈನ ಕುಟುಂಬದವರು ತಮ್ಮ ಮನೆಕೆಲಸದ ಆಳನ್ನು ರಾಮ ಎಂದು ಕರೆಯುತ್ತಿದ್ದಾಗ ಮೊದಲು ನಾನು ಅವನ ಹೆಸರೇ ರಾಮ ಇದ್ದಿರಬಹುದು ಎಂದು ತಿಳಿದಿದ್ದೆ. ಆದರೆ ಎಲ್ಲಾ ಮಾರ್ವಾಡಿಗಳೂ ತಮ್ಮ ಆಳುಗಳನ್ನು ರಾಮ ಎಂದೇ ಸಂಬೋಧಿಸುವಾಗ ನನಗೆ ಏನೋ ಅನುಮಾನ ಬಂದು ನನ್ನ ಪರಿಚಯದ ಒಬ್ಬ ಮಾರ್ವಾಡಿ ಜೈನನಿಗೆ ನೇರವಾಗಿ ಕೇಳಿದೆ - ಅದೇಕೆ ನಿಮ್ಮ ಜಾತಿಯವರೆಲ್ಲಾ ತಮ್ಮ ಕೆಲಸದವರಿಗೆ ರಾಮ ಎಂಬ ಹೆಸರಿನಿಂದ ಮಾತ್ರ ಕರೆಯುತ್ತಾರೆ ಎಂದು. ಅದಕ್ಕೆ ಅವನು- ನಮ್ಮ ರಾಜಸ್ಥಾನಿ ಉಪಭಾಷೆಯಲ್ಲಿ ರಾಮ ಎಂದರೆ ಕೆಲಸದಾಳು ಎಂಬ ಅರ್ಥವಿದೆ, ಬಹುಶಃ ನೂರಾರು ವರ್ಷಗಳ ಹಿಂದೆ ರಾಜಸ್ಥಾನದಲ್ಲಿ ಜೈನರಿಗೂ ವೈಷ್ಣವರಿಗೂ ತೀವ್ರ ವೈಮನಸ್ಸು ಉಂಟಾದಾಗ ವೈಷ್ಣವರನ್ನು ಪರೋಕ್ಷವಾಗಿ ಅವಮಾನಿಸಲು ನಮ್ಮ ಹಿರಿಯರು ಹೀಗೆ ಕೆಲಸದಾಳನ್ನು ರಾಮ ಎಂದು ಕರೆಯುವ ಪದ್ಧತಿ ಶುರುಮಾಡಿರಲೂ ಬಹುದು ಎಂದು ಆ ಜೈನ ಒಪ್ಪಿಕೊಂಡನು.

ಜಾಕೀರ್ ನಾಯ್ಕ್ ತನ್ನ ಪ್ರವಚನದಲ್ಲಿ ತನ್ನ ಧರ್ಮದವರನ್ನು ಭಯೋತ್ಪಾದನೆಗೆ ಇಳಿಯುವಂತೆ ಪ್ರಚೋದಿಸುತ್ತಾನೆ ಎಂದು ಬಿಜೆಪಿಯವರು ಆರೋಪಿಸುತ್ತಾರೆ. ಹಾಗಾದರೆ ಕುರುಕ್ಷೇತ್ರ ಯುದ್ಧ ಭೂಮಿಯಲ್ಲಿ ಅರ್ಜುನನು ಯುದ್ಧಕ್ಕೆ ಇಳಿದು ತನ್ನ ಸಂಬಂಧಿಕರನ್ನೆಲ್ಲ ಕೊಲ್ಲಲು ಕೃಷ್ಣ ಪ್ರಚೋದಿಸಿದ್ದು ಭಯೋತ್ಪಾದನೆಗೆ ಪ್ರಚೋದನೆ ಕೊಟ್ಟಂತಲ್ಲವೇ? ಯುಧಿಷ್ಠಿರ ಜುಗಾರಿ ಆಡಿ ರಾಜ್ಯ ಕಳೆಕೊಂಡಿದ್ದು ಮಾತ್ರವಲ್ಲ ತನ್ನ ತಮ್ಮಂದಿರನ್ನು ಹಾಗೂ ತನ್ನ ಹೆಂಡತಿಯನ್ನೇ ಒತ್ತೆಯಿಟ್ಟಿದ್ದು ಘೋರ ಧರ್ಮ ವಿರೋಧಿ ಕೃತ್ಯವಾಗಿತ್ತು, ಹಾಗಿರುವಾಗ ಜೂಜುಕೋರ ಯುಧಿಷ್ಠಿರ ತಾನು ಜುಗಾರಿಯಲ್ಲಿ ಕಳೆದುಕೊಂಡಿರುವ ರಾಜ್ಯವನ್ನು ಹಿಂದೆ ಪಡೆಯಲು ಯುದ್ಧಕ್ಕೆ ಇಳಿದು ಐವತ್ತು ಲಕ್ಷ ಸೈನಿಕರು ಹಾಗೂ ಇಪ್ಪತ್ತು ಲಕ್ಷ ಪ್ರಾಣಿಗಳ ಮರಣಕ್ಕೆ ಕಾರಣವಾಗಿದ್ದು ಧರ್ಮದ ರಕ್ಷಣೆಗಾಗಿ ಮಾಡಿದ ಯುದ್ಧ ಹೇಗಾದೀತು? ಕುರುಕ್ಷೇತ್ರ ಯುದ್ಧ ಕೇವಲ ಆಸ್ತಿಗಾಗಿ ಮತ್ತು ಹೆಣ್ಣಿಗಾಗಿ ನಡೆದ ರಕ್ತಪಾತವಾಗಿತ್ತೆ ಅಷ್ಟೇ. ಅದರಲ್ಲಿ ಧರ್ಮದ ಒಂದು ಕಣವೂ ಇರಲಿಲ್ಲ. ಕ್ಷುಲ್ಲಕ ಆಸ್ತಿ ಕಲಹಕ್ಕಾಗಿ ಘೋರ ರಕ್ತಪಾತಕ್ಕೆ ಪ್ರಚೋದಿಸಿದ ಭಗವದ್ಗೀತೆ ಯಾರಿಗೆ ಪವಿತ್ರ ಎನ್ನಿಸಬಲ್ಲದು? ಇಂತಹ ನರಮೇಧ ತಪ್ಪಿಸಲಾಗದ ಕಠೋರ ಮನಸ್ಸಿನ ಕೃಷ್ಣ ದೇವರು ಹೇಗಾಗಬಲ್ಲ?

- ಜೆ.ರವಿಕಿರಣ, ಮೈಸೂರು

Registered No.RNP/KA/BGS/2036/2014-16 Posted at :PSO, Mysore Road, Bangalore-26 Thursday R B P LANKESH, Kannada Weekly

ಅಲಮೇಲಮ್ಮ ಅವತಾರ

'ಸಿಂಪಲ್ಲಾಗೊಂದ್ - ಲವ್‌ಸ್ಟೋರಿ' ಮೂಲಕ ಹೊಸ ಮಾದರಿಯ ಸಿನಿಮಾ ಮಾಡಿದ್ದ ನಿರ್ದೇಶಕ ಸುನಿ, ಈಗ ಮತ್ತೊಂದು ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ಚಿತ್ರಕ್ಕೆ 'ಆಪರೇಷನ್ ಅಲಮೇಲಮ್ಮ' ಎಂದು ಹೆಸರಿಟ್ಟಿದ್ದು ಸದ್ದಿಲ್ಲದೇ ಶೂಟಿಂಗ್ ಕೂಡ ಮುಗಿದಿದೆ.

ಡಬಲ್ ಮೀನಿಂಗ್ ಡೈಲಾಗ್ ಮೂಲಕ ಈವರೆಗೂ ರಂಜಿಸಿದ್ದ ಸುನಿ, ಈ ಬಾರಿ ಸಸ್ಪೆನ್ಸ್ ಸ್ಟೋರಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಈ ಅಲಮೇಲಮ್ಮನ ಆಪರೇಷನ್ ವಿಭಿನ್ನವಾಗಿದೆ ಎಂದು ಹೇಳುವ ಮೂಲಕ ಕುತೂಹಲ ಮೂಡಿಸಿದ್ದಾರೆ. ಪ್ರತಿ ಬಾರಿಯೂ ಹೊಸ ಕಲಾವಿದರಿಗೆ ಮಣೆ ಹಾಕುವ ಇವರು, ಈ ಬಾರಿ ಕಿರುತೆರೆಯ ಕಲಾವಿದ ಮನೀಷ್‌ರನ್ನು ಹಿರಿತೆರೆಗೆ ಪರಿಚಯಿಸುತ್ತಿದ್ದಾರೆ. 'ಯೂ ಟರ್ನ್' ಖ್ಯಾತಿಯ ಶ್ರದ್ಧಾ ಶ್ರೀನಾಥ್ ಚಿತ್ರದ ನಾಯಕಿ. ಇವರಿಲ್ಲಿ ಸ್ಕೂಲ್‌ಟೀಚರ್ ಆಗಿ ಕಾಣಿಸಿಕೊಳ್ಳಲಿದ್ದಾರೆ. ಮಾತಿನ ಭಾಗದ ಬಹುತೇಕ ಶೂಟಿಂಗ್ ಮುಗಿದಿದ್ದು ಆಗಸ್ಟ್‌ನಲ್ಲಿ ಹಾಡುಗಳ ಚಿತ್ರೀಕರಣ ನಡೆಯಲಿದೆ.



ರಂಗಿನ ಕಾಮಿಡಿ



ನಿರ್ದೇಶಕ ಅನೂಪ್ ಭಂಡಾರಿ 'ರಂಗಿತರಂಗ' ಚಿತ್ರದ ನಂತರ ಮತ್ತೇನು ಮಾಡಲಿದ್ದಾರೆ ಅನ್ನುವ ಕುತೂಹಲ ಎಲ್ಲರದ್ದಾಗಿತ್ತು. ಆವರೂ ಕೂಡ ಬರೋಬ್ಬರಿ ಒಂದು ವರ್ಷಗಳ ಕಾಲ ಒಂದೇ ಸಿನಿಮಾ ತೋರಿಸಲು ಪಣತೊಟ್ಟಂತಿದ್ದರು. ಕೊನೆಗೂ ಎಲ್ಲರ ಕಾಯುವಿಕೆಗೆ ಫುಲ್‌ಸ್ಟಾಪ್ ಇಟ್ಟಿದ್ದಾರೆ. ಮೊನ್ನೆಯಷ್ಟೇ ಹೊಸ ಸಿನಿಮಾದ ಬಗ್ಗೆ ಮಾತಾಡಿದ್ದಾರೆ.

'ರಂಗಿತರಂಗ'ದ ಮೂಲಕ ಸಿನಿಮಾ ರಂಗದಲ್ಲಿ ಹೊಸ ತರಂಗವನ್ನೇ ಸೃಷ್ಟಿ ಮಾಡಿದ್ದವರು ಈಗ ರಾಜರಥವೇರಿದ್ದಾರೆ. ಅಂದರೆ, ಅನೂಪ್ ಈ ಬಾರಿ 'ರಾಜರಥ' ಅನ್ನುವ ಚಿತ್ರಕ್ಕೆ ಆಕ್ಷನ್ ಕಟ್ ಹೇಳಲಿದ್ದಾರೆ. ಮೊದಲು ಚಿತ್ರಕ್ಕೆ ಸಸ್ಪೆನ್ಸ್ ಮತ್ತು ಥ್ರಿಲ್ಲರ್ ಕತೆಯನ್ನು ಆಯ್ಕೆ ಮಾಡಿಕೊಂಡಿದ್ದವರು, ಈ ಸಲ ರೋಮ್ಯಾಂಟಿಕ್ ಕಾಮಿಡಿ ಸ್ಟೋರಿಗೆ ಮನ ಸೋತಿದ್ದಾರೆ. ಅಲ್ಲದೇ, ಕತೆ ಚಿತ್ರಕತೆ, ಸಂಭಾಷಣೆ, ಸಾಹಿತ್ಯ ಮತ್ತು ಸಂಗೀತದಲ್ಲೂ ಅವರದ್ದೇ ಕಮಾಲ್ ಇರಲಿದೆ.

ಬಹುತೇಕ 'ರಂಗಿತರಂಗ'ದ ಕಲಾವಿದರಿಗೆ ಮಣೆ ಹಾಕಿರುವ ಇವರು, ಇದರಲ್ಲೂ ತಮ್ಮ ಸಹೋದರ ನಿರೂಪ್ ಭಂಡಾರಿಗೆ ನಾಯಕ ಪಟ್ಟ ಕಟ್ಟಿದ್ದಾರೆ. ಆವಂತಿಕಾ ನಾಯಕಿ. ಸಾಯಿಕುಮಾರ್ ಕೂಡ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಮತ್ತೊಂದು ವಿಶೇಷತೆ ಅಂದರೆ ಸಾಯಿಕುಮಾರ್ ಸಹೋದರ ರವಿಶಂಕರ್ ಕೂಡ ವಿಭಿನ್ನ ಪಾತ್ರ ಮಾಡಲಿದ್ದಾರೆ.

ಗೋಧಿ ಬಣ್ಣಕ್ಕೆ ಶಾಹೀದ್ ಫಿ...



ರಕ್ಷಿತ್ ಶೆಟ್ಟಿ ಮತ್ತು ಅನಂತ್‌ನಾಗ್ ನಟನೆಯ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರ ಐವತ್ತನೇ ದಿನದತ್ತ ಮುನ್ನುಗ್ಗುತ್ತಿದೆ. ಈ ಮಧ್ಯೆ ಎರಡೆರಡು ಖುಷಿ ವಿಚಾರಗಳನ್ನು ಈ ತಂಡ ಹೊರಹಾಕಿದೆ. ಕೆಲವು ದಿನಗಳ ಹಿಂದೆಯಷ್ಟೇ ಸಿನಿಮಾ ವೀಕ್ಷಿಸಿದ್ದ ಪ್ರಕಾಶ್ ರೈ, ಈ ಚಿತ್ರವನ್ನು ತಮಿಳಿಗೆ ರೀಮೇಕ್ ಮಾಡುವುದಾಗಿ ಹೇಳಿದ್ದರು. ಈಗದು ಬಾಲಿವುಡ್‌ಗೂ ರೀಮೇಕ್ ಆಗುತ್ತಿದೆ. ಕನ್ನಡದಲ್ಲಿ ರಕ್ಷಿತ್ ಶೆಟ್ಟಿ ನಿರ್ವಹಿಸಿದ ಪಾತ್ರಕ್ಕೆ ಬಾಲಿವುಡ್‌ನಲ್ಲಿ ಶಾಹೀದ್ ಕಪೂರ್ ಆಯ್ಕೆಯಾಗಿದ್ದಾರೆ. ಹೀಗಾಗಿ ಚಿತ್ರವನ್ನು ನೋ... ಇಂಗಿತವನ್ನು ಅವರು ವ್ಯಕ್ತಪಡಿಸಿದ್ದಾರೆ.

ಅಂದಹಾಗೆ ಬಾಲಿವುಡ್‌ನಲ್ಲಿ ನಿರ್ಮಾಣದ ಹೊಣೆಯನ್ನು ಹ... ಬೋನಿ ಕಪೂರ್. ಐವತ್ತು ಲಕ್ಷಕ್ಕೆ ಇವರು ರೀಮೇಕ್ ರೈಟ್ಸ್ ಪಡೆ... ಎನ್ನಲಾಗುತ್ತಿದೆ. ಮಗನ ಪಾತ್ರಕ್ಕಿಂತಲೂ ಪವರ್‌ಫುಲ್ ಪಾತ್ರವೆಂದರೆ ತಂದೆ... ಈ ಕ್ಯಾರೆಕ್ಟರ್ ಯಾರ ಪಾಲಾಗಲಿದೆ ಅನ್ನುವ ಕುತೂಹಲ ಎಲ್ಲರದ್ದು. ... ಅನುಪಮ್ ಖೇರ್ ಹೆಸರು ಕೇಳಿಬರುತ್ತಿದ್ದು, ಅದಿನ್ನೂ ಅಂತಿಮವಾಗಿ...

ಅಪ್ಪಟ ಕನ್ನಡದ ನೆಲದಲ್ಲಿ ಮೂಡಿಬಂದಿರುವ ಸಿನಿಮಾ 'ಗೋಧಿ ಬ... ಬಾಲಿವುಡ್‌ನಲ್ಲಿ ಈ ಭಾವನೆಗೆ ಯಾವ ಬಣ್ಣ ಬರಲಿದೆಯೋ ಕಾದು ನೋಡ...

ಅರ್ಜುನ್ ಸರ್ಜಾ ಚಿತ್ರದಲ್ಲಿ ಶ್ರುತಿ

'ಲೂಸಿಯಾ' ಖ್ಯಾತಿಯ ಶ್ರುತಿ ಹರಿಹರನ್ ಈಗ ಸಖತ್ ಬಿಜಿ ಆಗಿದ್ದಾರೆ. ಮೊನ್ನೆಯಷ್ಟೇ ಅವರು ಮೂರು ಚಿತ್ರಗಳಿಗೆ ಸಹಿ ಮಾಡಿದ್ದರು. ಈಗ ತಮಿಳು ಮತ್ತು ಕನ್ನಡದಲ್ಲಿ ಏಕಕಾಲಕ್ಕೆ ನಿರ್ಮಾಣವಾಗುತ್ತಿರುವ ಮತ್ತೊಂದು ಚಿತ್ರದಲ್ಲಿ ನಟಿಸಲು ಒಪ್ಪಿಕೊಂಡಿದ್ದಾರೆ. ಈ ಚಿತ್ರಕ್ಕೆ ಅರ್ಜುನ್ ಸರ್ಜಾ ನಾಯಕ ಅನ್ನುವುದು ವಿಶೇಷ. ಇದು ಅರುಣ್ ವೈದ್ಯನಾಥನ್ ನಿರ್ದೇಶನದ ಚಿತ್ರ. ಈ ಸಿನಿಮಾದ ಮೂಲಕ ನಿರ್ದೇಶಕರು ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಕನ್ನಡದಲ್ಲಿ 'ವಿಸ್ಮಯ' ಎಂಬ ಶೀರ್ಷಿಕೆ ಇಡಲಾಗಿದ್ದು ತಮಿಳಿನಲ್ಲಿ 'ನಿಪುಣನ್' ಎಂದು ಕರೆಯಲಾಗಿದೆ.

ಚಿತ್ರದಲ್ಲಿ ಹತ್ತು ಹಲವು ವಿಶೇಷತೆಗಳು ಇವೆಯಂತೆ. ಈ ಚಲನಚಿತ್ರದ ಮೂಲಕ ತಮಿಳು ನಟ ಪ್ರಸನ್ನ ಕನ್ನಡ ಸಿನಿಮಾ ರಂಗಕ್ಕೆ ಬರುತ್ತಿದ್ದಾರೆ. ಅಲ್ಲದೇ, ಹೆಚ್ಚೆಚ್ಚು ಕನ್ನಡದ ಕಲಾವಿದರಿಗೆ ಮಣೆ ಹಾಕಿದ್ದಾರೆ ನಿರ್ದೇಶಕರು. ಸುಹಾಸಿನಿ, ಸುಧಾರಾಣಿ ಸೇರಿದಂತೆ ಹಲವು ಕಲಾವಿದರು ತಾರಾಗಣದಲ್ಲಿದ್ದಾರೆ.

ಅರ್ಜುನ್ ಈ ಸಿನಿಮಾದಲ್ಲಿ ಪೊಲೀಸ್ ಆಫೀಸರ್ ಪಾತ್ರ ನಿರ್ವಹಿಸುತ್ತಿದ್ದಾರೆ. ಅದೂ ಮಫ್ತಿಯಲ್ಲಿರುವ ಪೊಲೀಸ್ ಅಧಿಕಾರಿ. ಇವರ ಹೆಂಡತಿಯ ಪಾತ್ರದಲ್ಲಿ ಶ್ರುತಿ ಕಾಣಿಸಿಕೊಂಡಿದ್ದಾರೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com